ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತದಲ್ಲಿ 36 ವರ್ಷದ ಬಳಿಕ ಗೆದ್ದ ನ್ಯೂಜಿಲೆಂಡ್

ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ನೀಡಿದ 107 ರನ್‌ಗಳ ಸುಲಭ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ತಂಡ ಇನ್ನೂ 8 ವಿಕೆಟ್ ಬಾಕಿ ಇರುವಂತೆಯೇ ಗೆಲುವು ಸಾಧಿಸಿತು. ಇದರೊಂದಿಗೆ 36 ವರ್ಷ ಗಳ ಬಳಿಕ ಭಾರತದ ನೆಲದಲ್ಲಿ ಟೆಸ್ಟ್ ಪಂದ್ಯ ಗೆದ್ದ ಸಾಧನೆ ಮಾಡಿತು. ಮೂರು ಪಂದ್ಯಗಳ ಸರಣಿಯಲ್ಲಿ ಕಿವೀಸ್ ಬಳಗಕ್ಕೆ 1-0 ಅಂತರದ ಮುನ್ನಡೆ ದೊರೆಯಿತು. 1988ರಲ್ಲಿ ಮುಂಬೈನಲ್ಲಿ ನಡೆದ ಪಂದ್ಯವನ್ನು 136 ರನ್‌ಗಳಿಂದ ಗೆದ್ದದ್ದು ಈವರೆಗಿನ ಸಾಧನೆಯಾಗಿತ್ತು.

ಬೊಮ್ಮಾಯಿ, ಎಚ್‌ಡಿಕೆ, ಡಿಕೆಶಿ, ತುಕಾರಾಂ ಕುಟುಂಬದ ಸದಸ್ಯರಿಗೆ ಟಿಕೆಟ್: ಕಾರ್ಯಕರ್ತರ ವಿರೋಧ

ರಾಜ್ಯದಲ್ಲಿ ಮತ್ತೆ ಕುಟುಂಬ ರಾಜಕಾರಣ ಸಂಚಲನ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಉಪಚುನಾವಣೆ ಘೋಷಣೆಯ ಬೆನ್ನಲ್ಲೇ ರಾಜ್ಯದಲ್ಲಿ ಮತ್ತೆ 'ಕುಟುಂಬ ರಾಜಕಾರಣ'ದ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ. ಈ ಬಾರಿಯ ಉಪಚುನಾವಣೆಯಲ್ಲಿ ಮೂರೂ ಕ್ಷೇತ್ರಗಳಲ್ಲಿ ಒಂದಿಲ್ಲೊಂದು ಪಕ್ಷದ ಅಭ್ಯರ್ಥಿಗೆ 'ಕುಟುಂಬ'ದ ಕೋಟಾದಲ್ಲಿ ಟಿಕೆಟ್ ನೀಡುತ್ತಿರುವುದು ಕಾರ್ಯಕರ್ತರ ಕೆಂಗಣ್ಣಿಗೆ ಗುರಿಯಾಗಿದೆ.

ಶನಿವಾರ ರಾತ್ರಿ ಶಿಗ್ಗಾಂವಿ ಹಾಗೂ ಸಂಡೂರು ಕ್ಷೇತ್ರಗಳಿಗೆ ಬಿಜೆಪಿ ಟಿಕೆಟ್ ಘೋಷಿಸಿದೆ. ಶಿಗ್ಗಾಂವಿಗೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್‌ಗೆ ಟಿಕೆಟ್ ನೀಡಿರುವುದಕ್ಕೆ ಬಿಜೆಪಿ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದೆ. ಆರಂಭದಿಂದಲೂ ಭರತ್ ಹೆಸರು ಕೇಳಿ ಬಂದಿದ್ದರೂ, 'ಮಗನನ್ನು ನಿಲ್ಲಿಸಲು ಆಸಕ್ತಿಯಿಲ್ಲ' ಎಂದು ಬಸವರಾಜ ಬೊಮ್ಮಾಯಿ ಹೇಳಿದ್ದರಿಂದ ಅನೇಕ ಕಾರ್ಯಕರ್ತರು ಹೊಸ ಮುಖದ ನಿರೀಕ್ಷೆಯಲ್ಲಿದ್ದರು. ಆದರೀಗ ಅಂತಿಮವಾಗಿ

ನಿಖಿಲ್ ಕುಮಾರಸ್ವಾಮಿ

ಭರತ್ ಬೊಮ್ಮಾಯಿ

ಡಿ.ಕೆ.ಸುರೇಶ್

ಸೌಪರ್ಣಿಕಾ ತುಕಾರಾಂ

ಭರತ್‌ಗೆ ಟಿಕೆಟ್ ನೀಡಿರುವುದರಿಂದ ಎಸ್.ಆರ್. ಬೊಮ್ಮಾಯಿ ಅವರ ಮೊಮ್ಮಗ, ಬಸವರಾಜ ಬೊಮ್ಮಾಯಿ ಅವರ ಪುತ್ರ ಎನ್ನುವ ಮಾನದಂಡದ ಹೊರತಾಗಿ ಇನ್ಯಾವ ಮಾನದಂಡದಲ್ಲಿ ಟಿಕೆಟ್ ನೀಡಲಾಗಿದೆ? ಕ್ಷೇತ್ರದಲ್ಲಿ ಎಷ್ಟು ಬಾರಿ ಈವರೆಗೆ ತಿರುಗಾಡಿದ್ದಾರೆ? ಪಕ್ಷ ಸಂಘಟನೆಯಲ್ಲಿ ಎಷ್ಟು ತೊಡಗಿಸಿಕೊಂಡಿದ್ದಾರೆ ಎನ್ನುವ ಕಾರಣಕ್ಕೆ ಟಿಕೆಟ್ ನೀಡಲಾಗಿದೆ? ಎನ್ನುವ ಪ್ರಶ್ನೆಗಳು ಕೇಳಿಬಂದಿವೆ.

ಭರತ್ ಬೊಮ್ಮಾಯಿ ಅವರು ಉದ್ಯಮದಲ್ಲಿ ತೊಡಗಿದ್ದರಿಂದ ರಾಜಕೀಯದಲ್ಲಿ ಹೆಚ್ಚು ಕಾಣಿಸಿಕೊಂಡಿರಲಿಲ್ಲ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ತಮ್ಮ ತಂದೆಯ ಪರವಾಗಿ ಕೆಲವೊಂದಷ್ಟು ಸ್ಥಳದಲ್ಲಿ ಪ್ರಚಾರ ಮಾಡಿದ್ದು ಬಿಟ್ಟರೆ ರಾಜಕೀಯದಲ್ಲಿ ಆಗಲಿ, ಪಕ್ಷ ಸಂಘಟನೆಯಲ್ಲಿ ಆಗಲಿ ತೊಡಗಿಸಿಕೊಂಡಿಲ್ಲ. ಹೀಗಿರುವಾಗ ಏಕಾಏಕಿ ಅವರಿಗೆ ಟಿಕೆಟ್ ನೀಡಿದ್ದು ಏಕೆ? ಯಾವ ಮಾನದಂಡದಲ್ಲಿ ಅವರನ್ನು ಆಯ್ಕೆ ಮಾಡಲಾಗಿದೆ ಎನ್ನುವ ಪ್ರಶ್ನೆಗಳನ್ನು ಪಕ್ಷದ ಕಾರ್ಯಕರ್ತರು ಕೇಳುತ್ತಿದ್ದಾರೆ.

ಬಿಜೆಪಿಯಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶವಿಲ್ಲ ಎನ್ನುವ ಕಾರಣಕ್ಕೆ ಹಲವು ನಾಯಕರಿಗೆ ಟಿಕೆಟ್ ನೀಡಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿಯೇ ಈಶ್ವರಪ್ಪ ಪುತ್ರ ಕಾಂತೇಶ್‌ಗೆ ಟಿಕೆಟ್ ನೀಡಲಿಲ್ಲ. ಅದಕ್ಕೂ ಮೊದಲು ದಿ.ಅನಂತಕುಮಾರ ಅವರ ಪತ್ನಿ ತೇಜಸ್ವಿನಿ ಅನಂತಕುಮಾರ ಅವರಿಗೆ ಟಿಕೆಟ್ ನೀಡಬೇಕು ಎಂದಾಗ 'ಕುಟುಂಬ ರಾಜಕಾರಣ'ದ ನೆಪವೊಡ್ಡಿ ಟಿಕೆಟ್ ನೀಡಲಿಲ್ಲ.

ಆದರೆ ದಾವಣಗೆರೆ ಲೋಕಸಭೆಗೆ ಬಿಜೆಪಿಯ ಹಾಲಿ ಸಂಸದ ಸಿದ್ದೇಶ್ವರ ಬದಲಿಗೆ ಪತ್ನಿ ಗಾಯತ್ರಿ ಅವರಿಗೆ ಟಿಕೆಟ್ ನೀಡಲಾಯಿತು. ಪಕ್ಷ ಸಂಘಟನೆಯಲ್ಲಿ ತೊಡಗಿಸಿ ಕೊಂಡವರಿಗೆ ಟಿಕೆಟ್ ನೀಡುವಾಗ 'ಕುಟುಂಬ ರಾಜಕಾರಣ'ಕ್ಕೆ ಅವಕಾಶವಿಲ್ಲ ಎನ್ನುವ ಹೈಕಮಾಂಡ್, ಭರತ್ ಬೊಮ್ಮಾಯಿ ಅವರ ವಿಷಯದಲ್ಲಿ ಏಕೆ ಈ ರೀತಿಯ ತೀರ್ಮಾನ ಕೈಗೊಂಡಿದೆ. ಕುಟುಂಬ ರಾಜಕಾರಣದ ವಿಷಯದಲ್ಲಿ ಈ ರೀತಿಯ ದ್ವಿಮುಖ ನೀತಿಯಿಂದ ಪಕ್ಷದ ಕಾರ್ಯಕರ್ತರಿಗೆ ಕೆಟ್ಟ ಸಂದೇಶ ರವಾನೆಯಾಗುತ್ತಿದೆ ಎನ್ನುವ ಮಾತುಗಳು ಕೇಳಿಬಂದಿದೆ.

ಮೂರು ಕ್ಷೇತ್ರಕ್ಕೂ ಕುಟುಂಬ ರಾಜಕೀಯದ ನಂಟು

ರಾಜ್ಯದಲ್ಲಿ ಮೂರು ಕ್ಷೇತ್ರಗಳಲ್ಲಿ ನಡೆಯುತ್ತಿರುವ ಉಪಚುನಾವಣೆಗಳಿಗೂ ಕುಟುಂಬ ರಾಜಕಾರಣದ ನಂಟಿದೆ. ಶಿಗ್ಗಾಂವಿಯಲ್ಲಿ ಬಸವರಾಜ ಬೊಮ್ಮಾಯಿ ಅವರಿಂದ ತೆರವಾದ ಸ್ಥಾನಕ್ಕೆ ಬಿಜೆಪಿಯಿಂದ ಅವರ ಮಗ ಭರತ್ ಬೊಮ್ಮಾಯಿಗೆ ಟಿಕೆಟ್ ನೀಡಿದ್ದರೆ, ಚನ್ನಪಟ್ಟಣದಲ್ಲಿ ಕುಮಾರಸ್ವಾಮಿ ಅವರಿಂದ ತೆರವಾದ ಸ್ಥಾನಕ್ಕೆ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಅವರಿಗೆ ಟಿಕೆಟ್ ನೀಡಲು ಜೆಡಿಎಸ್ ಪ್ರಯತ್ನಿಸುತ್ತಿದೆ. ಇತ್ತ ಕಾಂಗ್ರೆಸ್‌ನಿಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಅವರನ್ನುರಾಜ್ಯ ರಾಜಕೀಯಕ್ಕೆ ವಾಪಸು ಕರೆತರಲು ಪ್ರಯತ್ನ ನಡೆದಿದೆ. ಇನ್ನೊಂದೆಡೆ ಸಂಡೂರಿನಲ್ಲಿ ಈ.ತುಕಾರಾಂ ಅವರಿಂದ ರಾಜೀನಾಮೆ ನೀಡಿದ್ದ ಸ್ಥಾನಕ್ಕೆ ಅವರ ಪುತ್ರಿ ಅಥವಾ ಪತ್ನಿಗೆ ಟಿಕೆಟ್ ನೀಡಲು ಸಿದ್ಧತೆ ನಡೆದಿದೆ.

ಪುಟ ತೆರೆದಂತೆ...

ಕುಮಾರಣ್ಣ ಒಪ್ಪಿದ್ರೂ ಯೋಗಿ ಒಪ್ಪಿಲ್ಲ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಕೂದಲು ಇಲ್ಲದಿದ್ದರೆ ತಲೆಗೆ ಬೆಲೆ ಇಲ್ಲವೇ...!?
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ಮಾತಂದ್ರೆ ಮಾತು

ದಕ್ಷಿಣ ಭಾರತದ ರಾಜ್ಯಗಳಲ್ಲಿ ವೃದ್ಧರ ಜನಸಂಖ್ಯೆ ಹೆಚ್ಚಾಗಿದೆ. ಹಾಗಾಗಿ ಯುವಜನರ ಸಂಖ್ಯೆ ಹೆಚ್ಚಾಗಬೇಕು. ಭವಿಷ್ಯದ ದೃಷ್ಟಿಯಿಂದ ಹೆಚ್ಚೆಚ್ಚು ಮಕ್ಕಳನ್ನು ಹೊಂದುವುದು ಒಳ್ಳೆಯದು. ಜನಸಂಖ್ಯಾ ನಿರ್ವಹಣೆಗೆ ಆಂಧ್ರಪ್ರದೇಶ ಸರಕಾರ ಹೊಸ ಯೋಜನೆ ರೂಪಿಸುತ್ತಿದೆ. ಈ ಯೋಜನೆಯಡಿ ಹೆಚ್ಚು ಮಕ್ಕಳನ್ನು ಹೊಂದಿರುವ ಕುಟುಂಬಗಳಿಗೆ ಸರ್ಕಾರದಿಂದಲೇ ಪ್ರೋತ್ಸಾಹಧನ ಕೊಡುವ ಚಿಂತನೆಯೂ ಇದೆ. ಇದಕ್ಕಾಗಿ ಒಂದು ಕಾಯಿದೆಯನ್ನು ಸಹ ರೂಪಿಸಲಾಗುವುದು.

- ಚಂದ್ರಬಾಬು ನಾಯ್ಡು
ಆಂಧ್ರಪ್ರದೇಶ ಸಿಎಂ

ದಾರಿದೀಪೋಕ್ತಿ

ಎರಡು ವಿಧಗಳಲ್ಲಿ ಪಾಠ ಕಲಿಯಬಹುದು. ಒಂದು, ನಮ್ಮ ತಪ್ಪಿನಿಂದ ಮತ್ತು ಎರಡನೆಯದು, ಬೇರೆಯವರ ತಪ್ಪಿನಿಂದ. ಮೊದಲನೆಯದಕ್ಕೆ ಭಾರೀ ಬೆಲೆ ತೆರಬೇಕಾಗುತ್ತದೆ. ಎರಡನೆಯದು ಉಚಿತ.

ವಕ್ರತುಂಡೋಕ್ತಿ

ನೀವು ಸುಂದರವಾಗಿದ್ದೀರಿ ಎಂದು ಕೆಲವರು ಪ್ರಶಂಸಿಸುತ್ತಾರೆ. ಆಗ ನೀವು ಆಧಾರ್ ಕಾರ್ಡ್ ನೋಡಿ ದೃಢಪಡಿಸಿಕೊಳ್ಳುವುದು ವಾಸಿ.

ಫನ್‌ತರಂಗ

- ರಘುಪತಿ ಶೃಂಗೇರಿ -



ನಾಮಪತ್ರ ಸಲ್ಲಿಕೆಗೆ ಐದು ದಿನ ಮಾತ್ರ ಬಾಕಿ | ಮೂರೂ ಪಕ್ಷಗಳಲ್ಲಿ ಗರಿಗೆದರಿದ ಚಟುವಟಿಕೆ | ಮುಗಿಯದ ಚನ್ನಪಟ್ಟಣ ಬಿಕ್ಕಟ್ಟು

ಕಾವೇರಿದ ಉಪಸಮರ: ಸರಣಿ ಸಭೆ

ಮೂರೂ ಕ್ಷೇತ್ರಗಳಲ್ಲಿ ಗೆಲ್ಲಲು ಕಾಂಗ್ರೆಸ್ ಪಣ

ಬೆಂಗಳೂರು: ನಾಮಪತ್ರ ಸಲ್ಲಿಸಲು ಕೆಲವೇ ದಿನಗಳು ಬಾಕಿಯಿದ್ದರೂ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಂಡಿಲ್ಲ. ಈ ನಡುವೆ ಉಪಚುನಾವಣೆಗೆ ಸಂಬಂಧಿಸಿದಂತೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಸಂಜೆ ಸಚಿವರ ಜತೆ ಸಭೆ ನಡೆಸಿದ್ದಾರೆ. ಈ ಉಪಚುನಾವಣೆಯಲ್ಲಿ ಮೂರಕ್ಕೆ ಮೂರು ಗೆಲುವು ಸಾಧಿಸುವ ಮೂಲಕ, 'ಸರಕಾರದ ಪರವಾಗಿ ಜನರಿದ್ದಾರೆ' ಎನ್ನುವ ಸಂದೇಶ ರವಾನಿಸ ಬೇಕು. ಆದ್ದರಿಂದ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸೂಕ್ತ ರೀತಿಯಲ್ಲಿ ಪ್ರಚಾರ ಕಾರ್ಯ ಆರಂಭಿಸುವಂತೆ ಸೂಚನೆ ನೀಡಿದರು.

ಇದರೊಂದಿಗೆ ಸಭೆಯಲ್ಲಿ ಉಸ್ತುವಾರಿ ಸಚಿವರೊಂದಿಗೆ ಇತರೆ ಸಚಿವರು ಮೂರೂ ಕ್ಷೇತ್ರಗಳಿಗೆ ತೆರಳಿ ಪ್ರಚಾರದಲ್ಲಿ ಭಾಗವಹಿಸಬೇಕು. ಪಕ್ಷದ ವಿಧಾನಸಭಾ ಚುನಾವಣೆಯಲ್ಲಿ ನೀಡಿರುವ ಭರವಸೆಗಳನ್ನು ಹಾಗೂ ಪಂಚಗ್ಯಾರಂಟಿ ಯೋಜನೆಗಳನ್ನು ಈಗಾಗಲೇ ಜಾರಿಗೊಳಿಸಿದೆ. ಆದ್ದರಿಂದ ಸರಕಾರದ ಪಂಚಗ್ಯಾರಂಟಿಗಳಿಂದ ಆಗಿರುವ ಲಾಭಗಳ ಬಗ್ಗೆ ಜನರಿಗೆ ಮನದಟ್ಟು ಮಾಡಿಸಬೇಕು ಎಂದು ಸೂಚನೆ ನೀಡಿದರು.

ಉಪಚುನಾವಣೆ ಸಂಬಂಧ ಡಿಸಿಎಂ ಸಭೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರೊಂದಿಗೆ ಸಭೆ ನಡೆಸುವ ಮೊದಲು ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸಂಡೂರು ಹಾಗೂ ಶಿಗ್ಗಾಂವಿ ಭಾಗದ ನಾಯಕರೊಂದಿಗೆ ಸಭೆ ನಡೆಸಿದರು. ಈ ವೇಳೆ ಟಿಕೆಟ್ ಯಾರಿಗೆ ಸಿಕ್ಕರೂ ಪಕ್ಷದ ಕಾರ್ಯಕರ್ತರು ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಿದರು. ಶಿಗ್ಗಾಂವಿ ಕ್ಷೇತ್ರದ ಟಿಕೆಟ್‌ನಲ್ಲಿರುವ ಗೊಂದಲದ ಬಗ್ಗೆ ಚರ್ಚಿಸಲು ಶಾಸಕ ವಿನಯ್ ಕುಲಕರ್ಣಿ, ಆರ್.ಶಂಕರ್, ಅಜ್ಜಂ ಪೀರ್ ಬೆಂಬಲಿಗರು ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಭಾನುವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು.

ಸಿಎಂ ಸೂಚನೆಗಳೇನು?

- ಮೂರೂ ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಗೆಲ್ಲುವ ಸಾಧ್ಯತೆಗಳು ಹೆಚ್ಚಾಗಿವೆ. ಆದ್ದರಿಂದ ಸಂಪೂರ್ಣ ಶ್ರಮ ಹಾಕಿ ಚುನಾವಣೆ ನಿರ್ವಹಿಸಬೇಕು.
- ಪ್ರತಿ ಚುನಾವಣೆ ಸಂದರ್ಭದಲ್ಲೂ ಬಿಜೆಪಿಯ ಪ್ರತಿಯೊಬ್ಬರೂ ಸವಾಲಿಗೆ ಬಿದ್ದವರಂತೆ ಸುಳ್ಳುಗಳನ್ನು ಹೇಳುತ್ತಾರೆ. ಅವರ ಸುಳ್ಳುಗಳನ್ನು ಜನರೆದುರು ಬಯಲುಗೊಳಿಸಬೇಕು.
- ಲೋಕಸಭೆ ಚುನಾವಣೆ ಮುಗಿದ ಮರುದಿನವೇ ಗ್ಯಾರಂಟಿ ಯೋಜನೆಗಳು ಸ್ಥಗಿತಗೊಳ್ಳುತ್ತವೆ ಎಂದು ಮೋದಿಯವರಿಂದ ಹಿಡಿದು ಸಿ.ಟಿ.ರವಿವರೆಗೂ ಪ್ರತಿಯೊಬ್ಬರೂ ರಾಶಿ ರಾಶಿ ಸುಳ್ಳು ಹೇಳಿದ್ದರು. ಇದೀಗ ಹೊಸ ಹೊಸ ಸುಳ್ಳುಗಳನ್ನು ಹೇಳುತ್ತಾರೆ. ಇದಕ್ಕೆ ತಿರುಗೇಟು ಕೊಡಿ.
- ಉಪಚುನಾವಣೆ ಮುಗಿಯುವವರೆಗೂ ಕೇಂದ್ರ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುವ ಪ್ರಮಾಣ ಇನ್ನೂ ಹೆಚ್ಚಲಿದೆ. ಆದ್ದರಿಂದ ಈ ಬಗ್ಗೆ ಎಚ್ಚರದಿಂದ ಇರಬೇಕು.

ಉಪಚುನಾವಣೆ ಬಳಿಕವೇ ಜಾತಿಗಣತಿ

ಭಾರಿ ಚರ್ಚೆಗೆ ಗ್ರಾಸವಾಗಿದ್ದ ಜಾತಿ ಗಣತಿಯ ವಿಷಯವನ್ನು ಉಪಚುನಾವಣೆ ಪ್ರಕ್ರಿಯೆ ಮುಗಿಯುವ ತನಕ ಯಾವುದೇ ತೀರ್ಮಾನ ಕೈಗೊಳ್ಳುವುದು ಬೇಡ ಎನ್ನುವ ತೀರ್ಮಾನಕ್ಕೆ ಬರಲಾಗಿದೆ.

ಮೂರೂ ಕ್ಷೇತ್ರಗಳ ಉಪಚುನಾವಣೆ ಬಹಳ ಮಹತ್ವದ್ದಾಗಿದ್ದು, ನಾವು ಮೂರನ್ನೂ ಗೆಲ್ಲಬೇಕು. ಇದಕ್ಕಾಗಿ ಪ್ರತಿಯೊಬ್ಬರೂ ತಾವು ವಹಿಸಿಕೊಂಡ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು.
- ಸಿದ್ದರಾಮಯ್ಯ ಮುಖ್ಯಮಂತ್ರಿ

ಯೋಗೇಶ್ವರ ಅವರು ಪಕ್ಷೇತರ ಅಭ್ಯರ್ಥಿಯಾಗುತ್ತಾರೆ ಎಂಬ ವಿಚಾರ ಕಳೆದ ಹದಿನೈದು ದಿನಗಳಿಂದ ಹರಿದಾಡುತ್ತಿದೆ. ಕಾಂಗ್ರೆಸ್‌ನವರು ತಮ್ಮ ಪಕ್ಷಕ್ಕೆ ಕರೆದುಕೊಂಡು ಹೋಗಿ ನಿಲ್ಲಿಸಲು ಕಾಯುತ್ತಿದ್ದಾರೆ. ನಮ್ಮ ನಡುವೆ ಒಡಕು ತರುವುದು ಕಾಂಗ್ರೆಸ್ ಉದ್ದೇಶ. ಮೈತ್ರಿ ಕೂಟದಲ್ಲಿ ಒಡಕು ಮೂಡಲಿ ಎಂದು ಕಾಂಗ್ರೆಸ್ ಬಕಪಕ್ಷಿಯಂತೆ ಕಾಯುತ್ತಿದೆ.
- ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವ

ಚನ್ನಪಟ್ಟಣ; ನೀ ಕೊಡೆ, ನಾ ಬಿಡೆ

ಬೆಂಗಳೂರು: ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್‌ಗೆ ಚನ್ನಪಟ್ಟಣವೇ ಬಹುದೊಡ್ಡ ತಲೆನೋವಾಗಿ ಪರಿಣಮಿಸಿದೆ. ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಸಂಘಟಿಸಲು ಕೊಡುಗೆ ನೀಡಿರುವ ಸಿ.ಪಿ.ಯೋಗೇಶ್ವರ ಹಾಗೂ ಚನ್ನಪಟ್ಟಣವನ್ನು ಬಿಟ್ಟು ಕೊಡಲು ಸಿದ್ಧರಿಲ್ಲದ ಕೇಂದ್ರ ಸಚಿವ ಕುಮಾರಸ್ವಾಮಿ ನಡುವೆ ಹಗ್ಗಜಗ್ಗಾಟ ಮುಂದುವರಿದಿದೆ. ಸದ್ಯದ ಪರಿಸ್ಥಿತಿಯಲ್ಲಿ ಜೆಡಿಎಸ್, ಯೋಗೇಶ್ವರ ಇಬ್ಬರನ್ನೂ ಬಿಡದ ಸಾಧ್ಯವಿಲ್ಲದ ಕಾರಣ ಬಿಜೆಪಿ ನಾಯಕರು ಏನು ಮಾಡ ಬೇಕು ಎನ್ನುವ ಗೊಂದಲದಲ್ಲಿದ್ದಾರೆ ಎನ್ನಲಾಗಿದೆ.

ಭಾನುವಾರ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಬಿಜೆಪಿ-ಜೆಡಿಎಸ್ ನಾಯಕರು ಎರಡು ಸಭೆ ನಡೆಸಿದರೂ ಒಮ್ಮತದ ತೀರ್ಮಾನಕ್ಕೆ ಬರಲು ಸಾಧ್ಯವಾಗಲಿಲ್ಲ. ಮೊದಲ ಸಭೆಯಲ್ಲಿ ಆರ್.ಅಶೋಕ ಮತ್ತು ಬಿ.ವೈ.ವಿಜಯೇಂದ್ರ ಅವರು ಸಿ.ಪಿ.ಯೋಗೇಶ್ವರ್ ಅವರಿಗೆ ಟಿಕೆಟ್ ನೀಡುವ ಬಗ್ಗೆ ಪ್ರಸ್ತಾಪ ಮಾಡಿದರು. ಕ್ಷೇತ್ರದ ವರದಿಗಳ ಪ್ರಕಾರ ಯೋಗೇಶ್ವರ್‌ಗೆ ಪೂರಕ ವಾತಾವರಣವಿದೆ. ಆದ್ದರಿಂದ ಅವರಿಗೆ ಟಿಕೆಟ್ ನೀಡುವುದು ಸೂಕ್ತ ಎಂದು ಪ್ರಸ್ತಾಪಿಸಿದರು. ಆದರೆ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಎಚ್.ಡಿ. ಕುಮಾರಸ್ವಾಮಿ, ಚನ್ನಪಟ್ಟಣ ಕ್ಷೇತ್ರವು ಜೆಡಿಎಸ್ ಭದ್ರಕೋಟೆ. ಪಕ್ಷದವರೇ ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿಸುವುದು ಸೂಕ್ತ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ.

ಈ ವಿಷಯದಲ್ಲಿ ಗೊಂದಲ ಉಂಟಾಗಿದ್ದರಿಂದ ಭಾನುವಾರ ಸಂಜೆ ಎರಡನೇ ಹಂತದ ಸಭೆ ನಡೆಸಲಾಯಿತು. ಆದರೆ ಈ ವೇಳೆಯೂ ಒಮ್ಮತ ಮೂಡದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಬಿಜೆಪಿ ವರಿಷ್ಠರೊಂದಿಗೆ ಚರ್ಚಿಸುವುದಾಗಿ ಕುಮಾರಸ್ವಾಮಿ ಹೇಳಿದ್ದಾರೆ ಎನ್ನಲಾಗಿದೆ.

→ 4

ನಾಮಪತ್ರ ಸಲ್ಲಿಸಲು ಸಜ್ಜಾದ ಯೋಗೇಶ್ವರ?

ಒಂದೆಡೆ ಚನ್ನಪಟ್ಟಣ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ಬಿಜೆಪಿ-ಜೆಡಿಎಸ್ ಸರಣಿ ಸಭೆ ನಡೆಸಿ ವಿಫಲವಾಗುತ್ತಿದ್ದರೆ, ಇನ್ನೊಂದೆಡೆ ಸಿ.ಪಿ. ಯೋಗೇಶ್ವರ್ ಅವರು ಬುಧವಾರ ಅಥವಾ ಗುರುವಾರ ನಾಮಪತ್ರ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ. ಬಿಜೆಪಿಯಿಂದ ಟಿಕೆಟ್ ನೀಡಿದರೆ, ಬಿಜೆಪಿಯ ಬಿ.ಫಾರ್ಮ್ ಸೇರಿಸಿ ನಾಮಪತ್ರ ಸಲ್ಲಿಸಲಿದ್ದಾರೆ. ಒಂದು ವೇಳೆ ಜೆಡಿಎಸ್‌ಗೆ ಟಿಕೆಟ್ ಬಿಟ್ಟುಕೊಟ್ಟರೆ ಬಂಡಾಯವಾಗಿ ಸ್ಪರ್ಧಿಸಲು ಸಜ್ಜಾಗಿದ್ದಾರೆ ಎನ್ನಲಾಗಿದೆ. ರಾಜ್ಯ ನಾಯಕರು ಯೋಗೇಶ್ವರ್ ಪರ ಬ್ಯಾಟ್ ಬೀಸಿದ್ದರೂ, ಪಕ್ಷದ ವರಿಷ್ಠರು ಕುಮಾರಸ್ವಾಮಿ ಅವರೊಂದಿಗೆ ವಿಶ್ವಾಸದಲ್ಲಿರುವುದರಿಂದ ಬಿಜೆಪಿ ನಾಯಕರಿಗೆ ಯೋಗೇಶ್ವರ್ ಪರ ದೆಹಲಿ ಮಟ್ಟದಲ್ಲಿ ಮಾತನಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬಂಡಾಯ ಸ್ಪರ್ಧೆಯ ಲೆಕ್ಕಾಚಾರದಲ್ಲಿ ಯೋಗೇಶ್ವರ್ ಇದ್ದಾರೆ ಎನ್ನಲಾಗಿದೆ.

ನಟ ಸುದೀಪ್‌ಗೆ ಮಾತೃವಿಯೋಗ



ಬೆಂಗಳೂರು: ನಟ ಸುದೀಪ್ ಅವರ ತಾಯಿ ಸರೋಜಾ ನಿಧನರಾಗಿದ್ದಾರೆ. ವಯೋ ಸಹಜ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ಜಯನಗರದ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಸ್ಪಂದಿಸದೆ ಭಾನುವಾರ ಬೆಳಗ್ಗೆ ನಿಧನರಾಗಿದ್ದಾರೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಚಲನಚಿತ್ರ ರಂಗದ ಗಣ್ಯರು ಸೇರಿದಂತೆ ಅನೇಕರು ಸಂತಾಪ ಸೂಚಿಸಿದ್ದಾರೆ.

ರೈಲ್ವೆ ಉದ್ಯೋಗಿಗಳ ಮರುನೇಮಕಕ್ಕೆ ಸಿದ್ಧತೆ

ದೆಹಲಿ: ಇತ್ತೀಚೆಗೆ ಹೆಚ್ಚುತ್ತಿರುವ ರೈಲ್ವೆ ಅಪಘಾತಗಳಿಗೆ ಸಿಬ್ಬಂದಿ ಕೊರತೆಯೂ ಪ್ರಮುಖ ಕಾರಣ ಎಂದು ಮನಗಂಡಿರುವ ರೈಲ್ವೆ ಇಲಾಖೆಯು ಸುಮಾರು 25 ಸಾವಿರ ನಿವೃತ್ತ ಉದ್ಯೋಗಿಗಳನ್ನು ಪುನಃ ಎರಡು ವರ್ಷದ ಅವಧಿಗೆ ನೇಮಕ ಮಾಡಿಕೊಳ್ಳಲು ಮುಂದಾಗಿದೆ. ವಿವಿಧ ರೈಲ್ವೆ ವಲಯಗಳ ಜನರಲ್ ಮ್ಯಾನೇಜರ್‌ಗಳೇ ನೇಮಕಾತಿ ಹೊಣೆ ಹೊತ್ತುಕೊಂಡಿದ್ದಾರೆ. ಸೂಪರ್‌ವೈಸರ್ ಹುದ್ದೆಗಳಿಂದ ಹಿಡಿದು ಟ್ರ್ಯಾಕ್ ಮೆನ್ ಹುದ್ದೆಗಳವರೆಗೆ ನಿವೃತ್ತರಾದವರು ಅರ್ಜಿ ಸಲ್ಲಿಸಬೇಕು.

ನೋಂದಣಿ ಮಸೂದೆಗೆ ರಾಷ್ಟ್ರಪತಿ ಅಂಕಿತ

ಬೆಂಗಳೂರು: ಉಪ-ನೋಂದಣಾಧಿಕಾರಿ ಕಚೇರಿಗೆ ಭೇಟಿ ನೀಡದೆಯೇ ಆಸ್ತಿ ನೋಂದಣಿಗೆ ಅವಕಾಶ ಕಲ್ಪಿಸುವ ನೋಂದಣಿ (ಕರ್ನಾಟಕ ತಿದ್ದುಪಡಿ) ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಇದೇ 8ರಂದು ಅಂಕಿತ ಹಾಕಿದ್ದು, ರಾಜ್ಯ ಸರಕಾರವು ಮಸೂದೆ ಜಾರಿಗೆ ಶನಿವಾರ ಅಧಿಸೂಚನೆ ಹೊರಡಿಸಿದೆ. ಈ ಮಸೂದೆಗೆ ವಿಧಾನಮಂಡಲವು ಫೆಬ್ರವರಿಯಲ್ಲಿ ಅನುಮೋದನೆ ನೀಡಿತ್ತು. ಅದನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸಲಾಗಿತ್ತು.

ಗಾಜಾ ಮೇಲೆ ಇಸ್ರೇಲ್ ಆಕ್ರಮಣ; 73 ಸಾವು



ಜೆರುಸಲೇಂ: ಪ್ರಧಾನಿ ಬೆಂಜಮಿನ್ ನೆತನ್ಯಾಹು ನಿವಾಸವನ್ನು ಗುರಿಯಾಗಿಸಿ ಡ್ರೋನ್ ದಾಳಿ ನಡೆದ ಮರುದಿನವೇ ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿರುವ ಹಿಜ್ಬುಲ್ಲಾದ ಕಮಾಂಡ್ ಸೆಂಟರ್, ಗುಪ್ತಚರ ಪ್ರಧಾನ ಕಚೇರಿ ಹಾಗೂ ನೆಲಮಹಡಿಯಲ್ಲಿರುವ ಶಸ್ತ್ರಾಸ್ತ್ರ ಸಂಗ್ರಹಾಲಯದ ಮೇಲೆ ದಾಳಿ ನಡೆಸಲಾಗಿದೆ. ಇದೇ ವೇಳೆ ಗಾಜಾ ಮೇಲೆ ನಡೆಸಿದ ದಾಳಿಯಲ್ಲಿ 73 ಮಂದಿ ಸಾವಿಗೀಡಾಗಿದ್ದಾರೆ. ದಾಳಿಯಲ್ಲಿ ಮೂವರು ಹಿಜ್ಬುಲ್ಲಾ ಬಂಡುಕೋರರೂ ಸಾವಿಗೀಡಾಗಿದ್ದಾರೆ ಎಂದು ಇಸ್ರೇಲ್ ತಿಳಿಸಿದೆ.

ಮಹಾ ಚುನಾವಣೆ; ಬಿಜೆಪಿ ಮೊದಲ ಪಟ್ಟಿ

ಮುಂಬೈ: ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಭಾನುವಾರ ಮಧ್ಯಾಹ್ನ ಹೊರಬಿದ್ದಿದ್ದು, 99 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ. 288 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದ್ದರೂ ಬಿಜೆಪಿ ಕೇವಲ 99 ಕ್ಷೇತ್ರಗಳಿಗಷ್ಟೇ ಅಭ್ಯರ್ಥಿಗಳನ್ನು ಆಖೈರುಗೊಳಿಸಿರುವುದು ಶಿವಸೇನೆ(ಶಿಂದೆ ಬಣ) ಮತ್ತು ಎನ್‌ಸಿಪಿ(ಅಜಿತ್ ಬಣ) ನಡುವೆ ಕ್ಷೇತ್ರ ಹಂಚಿಕೆ ವಿಚಾರದಲ್ಲಿ ಸಹಮತ ಸಾಧ್ಯವಾಗಿಲ್ಲ ಎಂಬುದನ್ನು ಎತ್ತಿ ತೋರಿಸುತ್ತಿದೆ ಎಂದೇ ವಿಶ್ಲೇಷಿಸಲಾಗಿದೆ.

ರಸ್ತೆ ಸಂಚಾರದಲ್ಲಿ ಕೈಗೊಂಡ ಬಿಗಿಯಾದ ಕ್ರಮ, ಸಂಚಾರ ಪೊಲೀಸರು ಮೂಡಿಸಿದ ಜಾಗೃತಿ ಫಲ

ಅಪಘಾತ; ಸಾವಿನ ಸಂಖ್ಯೆ ಇಳಿಕೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಸ್ತೆ ಸಂಚಾರದಲ್ಲಿ ಕೈಗೊಂಡ ಬಿಗಿಯಾದ ಕ್ರಮ ಹಾಗೂ ವಾಹನ ಸವಾರರಲ್ಲಿ ಸಂಚಾರ ಪೊಲೀಸರು ಮೂಡಿಸಿದ ಜಾಗೃತಿ ಫಲವಾಗಿ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ರಸ್ತೆ ಅಪಘಾತಗಳಲ್ಲಿ ಬಲಿಯಾಗುವವರ ಪ್ರಮಾಣ ಇಳಿಕೆಯಾಗಿದೆ.

ಈ ಹಿಂದೆ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ, ಬೆಂಗಳೂರು-ಪುಣೆ, ಬೆಂಗಳೂರು-ಮಂಗಳೂರು ಸೇರಿದಂತೆ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ಸಂಭವಿಸುತ್ತಿದ್ದ ಅಪಘಾತ ಪ್ರಕರಣಗಳಲ್ಲಿ ಸಾಯುವವರ ಸಂಖ್ಯೆ ಅಧಿಕವಾಗಿತ್ತು. ಕಳೆದ 8 ತಿಂಗಳಲ್ಲಿ ರಸ್ತೆ ಅಪಘಾತಗಳಲ್ಲಿ ಮಡಿದವರ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಇದೇ ವರ್ಷ ಜನವರಿಯಿಂದ ಆಗಸ್ಟ್ ಅಂತ್ಯಕ್ಕೆ ರಾಜ್ಯದಲ್ಲಿ 7,596 ಮಂದಿ ಸಾವನ್ನಪ್ಪಿದರೂ ಕಳೆದ ಎರಡು ವರ್ಷಗಳಿಗೆ ಹೋಲಿಸಿದರೆ ಕೊಂಚ ಇಳಿಕೆಯಾಗಿದೆ. 2023 ಹಾಗೂ 2022ರಲ್ಲಿ ಕ್ರಮವಾಗಿ 8,146 ಹಾಗೂ 7,996 ಮಂದಿ ಸಾವನ್ನಪ್ಪಿದ್ದರು. ರಾಜಧಾನಿಯಲ್ಲಿ ಕಳೆದ ಎಂಟು ತಿಂಗಳಲ್ಲಿ 569 ಮಂದಿ ಅಪಘಾತದಲ್ಲಿ ಜೀವ ಕಳೆದುಕೊಂಡಿದ್ದಾರೆ. ಬೆಂಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ 454 ಮಂದಿ ಸಾವನ್ನಪ್ಪಿದ್ದಾರೆ.

→ 4

ಮರಣ ಪ್ರಮಾಣ ಇಳಿಕೆಗೆ ಕಾರಣಗಳೇನು?

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಸೇರಿದಂತೆ ಹಲವು ಹೆದ್ದಾರಿಗಳಲ್ಲಿ ಎಐ ಕ್ಯಾಮೆರಾ, ಸ್ಪೀಡ್ ರೆಡಾರ್ ಕ್ಯಾಮೆರಾ ಅಳವಡಿಕೆ. ವೇಗದ ಮಿತಿಗೆ ಬ್ರೇಕ್ ಹಾಕಿ ದಂಡ ಹಾಕುತ್ತಿರುವುದು. ಪಾನಮತ್ತರಾಗಿ ವಾಹನ ಚಲಾಯಿಸುವ ಸವಾರರ ಮೇಲೆ ನಿಗಾ. ರಾತ್ರಿ ವೇಳೆ ಹೈಬೀಮ್ ಲೈಟ್ ಬಳಕೆಗೆ ನಿಷೇಧ ರಾಜ್ಯದಲ್ಲಿ ಅಪಘಾತ ಹಾಗೂ ಮರಣ ಸಂಖ್ಯೆ ಇಳಿಸುವಲ್ಲಿ ಯಶಸ್ವಿಯಾಗಿದೆ. ಸಂಚಾರ ಸುರಕ್ಷತೆ ಹಾಗೂ ಅಪಘಾತಗಳ ಸಂಖ್ಯೆಯನ್ನು ತಗ್ಗಿಸುವುದು ಹರಸಾಹಸವಾಗಿದ್ದು, ಇದರ ವಿರುದ್ಧ ಹೋರಾಡುತ್ತೇವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ವರ್ಷ	ಸಾವು
2022	8,146
2023	8,146
2024	7,596

ಜಿಲ್ಲಾವಾರು ಅಪಘಾತ

ಜಿಲ್ಲೆ	ಅಪಘಾತ
ಬೆಂ. ನಗರ	564
ತುಮಕೂರು	470
ಬೆಂ. ಗ್ರಾಮಾಂತರ	454
ಬೆಳಗಾವಿ	450
ಮಂಡ್ಯ	340
ಬೆಳಗಾವಿ ನಗರ	89
ಕಲಬುರಗಿ ನಗರ	76
ಹುಬ್ಬಳ್ಳಿ-ಧಾರವಾಡ	56

ಭಾನುವಾರ 32 ವಿಮಾನಗಳಿಗೆ ಬಾಂಬ್ ಬೆದರಿಕೆ; ವಿಮಾನ ಭೂಸ್ಪರ್ಶ | 31 ವಿಮಾನ ಗುರಿ ತಲುಪಿದ ಬಳಿಕವಷ್ಟೇ ಶೋಧ

ಮುಂದುವರಿದ ವಿಮಾನಗಳಿಗೆ ಬಾಂಬ್ ಸಂದೇಶದ ಬೆದರಿಕೆ

ದೆಹಲಿ: ವಿಮಾನಗಳಿಗೆ ಬಾಂಬ್ ಬೆದರಿಕೆ ಸಂದೇಶದ ಕಿಡಿಗೇಡಿ ಕೃತ್ಯ ಭಾನುವಾರವೂ ಮುಂದುವರಿದಿದೆ. ಶನಿವಾರ ಮಧ್ಯಾಹ್ನದಿಂದ ಭಾನುವಾರ ಮಧ್ಯಾಹ್ನದವರೆಗೆ ಒಟ್ಟು 32 ವಿಮಾನಗಳಿಗೆ ಬಾಂಬ್ ಬೆದರಿಕೆ ಸಂದೇಶ ಬಂದಿವೆ.

ದೆಹಲಿಯಿಂದ ಲಂಡನ್‌ಗೆ ತೆರಳುತ್ತಿದ್ದ ವಿಸ್ತಾರಾ ಏರ್‌ಲೈನ್ಸ್‌ನ ಯುಕೆ17 ವಿಮಾನವನ್ನು ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ತುರ್ತಾಗಿ ಇಳಿಸಿ ತಪಾಸಣೆಗೊಳಪಡಿಸಲಾಗಿದೆ. 2 ಗಂಟೆ ನಂತರ ಲಂಡನ್‌ನತ್ತ ಹಾರಾಟ ನಡೆಸಲಾಗಿದೆ. ಉಳಿದ 31 ವಿಮಾನಗಳನ್ನು ಅವು ತಲುಪಬೇಕಿದ್ದ ನಿಲ್ದಾಣಗಳಲ್ಲೇ ಸಹಜ ಲ್ಯಾಂಡಿಂಗ್ ಬಳಿಕ ತಪಾಸಣೆಗೆ ಒಳಪಡಿಸಲಾಗಿದೆ.

→ 4

- ಕಳೆದ 7-8 ದಿನಗಳಲ್ಲಿ 70ಕ್ಕೂ ಅಧಿಕ ಬೆದರಿಕೆ ಸಂದೇಶಗಳು ಬಂದಿವೆ
- ಭಾರತದ ನಾಗರಿಕ ವಿಮಾನಯಾನ ಕ್ಷೇತ್ರಕ್ಕೆ ದುಃಸ್ವಪ್ನವಾದ ಬೆದರಿಕೆ ಕರೆ

ಬಾಲಕ ಸೆರೆ

ಛತ್ತೀಸ್‌ಗಢ ಪೊಲೀಸರು ಕೆಲ ದಿನಗಳ ಹಿಂದೆ ವಿಮಾನಗಳಿಗೆ 19 ಬಾರಿ ಬಾಂಬ್ ಬೆದರಿಕೆ ಕರೆ ಮಾಡಿದ್ದ ಪ್ರಕರಣದಲ್ಲಿ 17 ವರ್ಷದ ಬಾಲಕನನ್ನು ಬಂಧಿಸಿದ್ದಾರೆ. ಹಣದ ವಿಚಾರದಲ್ಲಿ ಮೋಸ ಮಾಡಿದ 25 ವರ್ಷದ ಪಾಲುದಾರನ ಮೇಲೆ ಸೇಡು ತೀರಿಸಿಕೊಳ್ಳಲೆಂದು ಹೀಗೆ ಮಾಡಿದ್ದಾಗಿ ಬಾಲಕ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪತ್ರಿಕೋದ್ಯಮ ಪದವೀಧರರಿಂದ ಅರ್ಜಿ

ಹಾವೇರಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆವತಿಯಿಂದ, ವಿಶೇಷ ಘಟಕ ಯೋಜನೆಯಡಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದ ಪರಿಶಿಷ್ಟ ಜಾತಿಯ ಅರ್ಹ ಅಭ್ಯರ್ಥಿಗಳಿಂದ 12 ತಿಂಗಳ ಅವಧಿಗೆ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಪದವಿ/ಸ್ನಾತಕೋತ್ತರ ಪದವಿ ಪಡೆದಿರುವ ಹಾಗೂ ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಹೊಂದಿರುವ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಅಪ್ರೆಂಟಿಸ್ ತರಬೇತಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಇಬ್ಬರು ಅಭ್ಯರ್ಥಿಗಳನ್ನು ಮೆರಿಟ್ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು, ತರಬೇತಿ ಅವಧಿಯಲ್ಲಿ ರು.15,000 ಸ್ಟೈಪಂಡ್ ನೀಡಲಾಗುವುದು ಅರ್ಹ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ದಿನಾಂಕ 05-11-2024 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಹಾವೇರಿ, ದೂರವಾಣಿ ಸಂಖ್ಯೆ:08375-200330 ಅಥವಾ 9480841238ನ್ನು ಸಂಪರ್ಕಿಸಬಹುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಥಳೀಯರಿಗೆ ಮೊದಲ ಆದ್ಯತೆ: ಮಂಕಾಳ ವೈದ್ಯ

ಕಾರವಾರ: ಟೋಪಿ ಹಾಕುವವರಿಗೆ ನಾನು ಅವಕಾಶ ಕೊಡುತ್ತಿಲ್ಲ. ಪ್ರವಾಸೋದ್ಯಮದಲ್ಲಿ ಸ್ಥಳೀಯರಿಗೆ ಮೊದಲ ಆದ್ಯತೆ ಕೊಡಲಾಗುತ್ತದೆ.

ಪ್ರವಾಸೋದ್ಯಮ ಅಭಿವೃದ್ಧಿಗೆ ಎಲ್ಲಾ ಬಗೆಯ ತಯಾರಿ ನಡೆದಿದೆ ಎಂದು ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜತೆ ಮಾತಾಡಿದ ಅವರು, ಎಲ್ಲರೂ ಮಂಕಾಳು ವೈದ್ಯ ಪ್ರವಾ ಸೋದ್ಯಮ ವಿರೋಧಿ ಎನ್ನುತ್ತಾರೆ.

ಆದರೆ, ಅದು ಸತ್ಯವಲ್ಲ. ಸುರಕ್ಷಿತ ಪ್ರವಾಸೋದ್ಯಮಕ್ಕೆ ಒತ್ತು ನೀಡಲು ಕೆಲ ಕಠಿಣ ಕ್ರಮ ಜರುಗಿಸಿದ್ದೇನೆ. ಪ್ರವಾಸೋದ್ಯಮದ ಎಲ್ಲಾ ತೊಡಕುಗಳ ನಿವಾರಣೆಗೆ ಅಧಿಕಾರಿಗಳ ಸಭೆಯನ್ನು ನಡೆಸಿದ್ದೇನೆ. ಮೀನುಗಾರರು ಹಾಗೂ ಪ್ರವಾಸೋದ್ಯಮ ಬೆಳವಣಿಗೆಗಾಗಿ 24 ಗಂಟೆಯೂ ನಾನು ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರು.

ಬಿಜೆಪಿಯವರು ಇಡಿ ದಾಳಿಯಂತಹ ಪ್ರಯೋಗ: ರಾಜಕಾರಣ ಮಾಡಲು ಸಾಧ್ಯವಾಗದಿದ್ದಾಗ ಬಿಜೆಪಿಯವರು ಇಡಿ ದಾಳಿಯಂತಹ ಪ್ರಯೋಗವನ್ನು ಮಾಡುತ್ತಾರೆ ಎಂದು ಸಚಿವ ಮಂಕಾಳು ವೈದ್ಯ ವ್ಯಂಗ್ಯವಾಡಿದರು. ನಮ್ಮ ಮುಖ್ಯಮಂತ್ರಿ ಯಾವುದೇ ತಪ್ಪು ಮಾಡಿಲ್ಲ. ಏನೇ ಮಾಡಿದರೂ ಅವರು ಯಾವುದೇ ತಪ್ಪು ಮಾಡಿಲ್ಲ ಅನ್ನೋದು ಗೊತ್ತಾಗುತ್ತೆ. ವಾಷಿಂಗ್ ಮಷಿನ್‌ಗೆ ಹಾಕಿದ್ರೆ ಎಲ್ಲಾ ಸ್ವಚ್ಛ ಆಗತ್ತೆ ಅಂತ ತಿಳಿದವರು ಹೇಳ್ತಾರೆ. ಬಿಜೆಪಿಯವರು ಅದಕ್ಕಾಗಿ ಪ್ರಯತ್ನ ಪಡುತ್ತಿದ್ದಾರೆ ಎಂದರು. ಹೊನ್ನಾವರದಲ್ಲೂ ಪರೇಶ ಮೇಸ್ತಾ ಎನ್ನುವ ಯುವಕನ ಸಾವಾಗಿತ್ತು.

ಅದು ಕೊಲೆ ಎಂದು ಬಿಜೆಪಿಯವರು ಸಿಬಿಐ ತನಿಖೆಗೆ ಒತ್ತಾಯಿಸಿದರು.ಆದರೆ ಕೊನೆಯಲ್ಲಿ ಪರೇಶನದ್ದು ಸಹಜ ಸಾವೆಂದು ಸಿಬಿಐ ವರದಿ ನೀಡಿತ್ತು. ಈ ಎರಡೂ ಪ್ರಕರಣದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಮುಡಾ ಪ್ರಕರಣದಲ್ಲೂ ಸಿಎಂ ಸಿದ್ಧರಾಮಯ್ಯ ಕ್ಲೀನ್ ಚಿಟ್ ಆಗಿ ಬರ್ತಾರೆ. ಮುಡಾ ಹಗರಣ ಆರೋಪದಲ್ಲೂ ಏನೂ ಆಗಲ್ಲ, ಸಿಎಂಗೆ ಯಾವುದೇ ತೊಂದರೆ ಇಲ್ಲ ಎಂದರು.

ರೈತರ ಕಾಡುತ್ತಲೇ ಇದೆ ಮಳೆ

ಹವಾಮಾನ ವೈಪರಿತ್ಯದಿಂದ ಜಿಲ್ಲೆಯ ರೈತರಲ್ಲಿ ಮೂಡಿದ ಆತಂಕ

ಶಿರಸಿ: ಮಳೆಗಾಲ ಮುಗಿದೇ ಹೋಯ್ತು ಇನ್ನೇನು ಫಸಲು ಕೊಯ್ಯಬೇಕು ಅನ್ನುವಷ್ಟರಲ್ಲಿಯೇ ಮಳೆ ರೈತರನ್ನು ಕಾಡುತ್ತಿದೆ.

ಜಿಲ್ಲೆಯಲ್ಲಿ ಮಳೆ ಇನ್ನೂ ಮುಂದುವರಿದಿದೆ. ಬೆಳೆದು ನಿಂತಿದ್ದ ಬತ್ತ, ಜೋಳ ಮತ್ತಿತರ ಬೆಳೆಗಳು ಹಾನಿಗೊಳಗಾಗುವ ಸಾಧ್ಯತೆ ಇರುವುದರಿಂದ ರೈತರು ತೀವ್ರ ಆತಂಕಕ್ಕೊಳಗಾಗಿದ್ದಾರೆ. ಜಿಲ್ಲೆಯಲ್ಲಿ ಅಡಿಕೆಯೇ ಪ್ರಮುಖ ಬೆಲೆಯಾದರೂ ಜಿಲ್ಲೆಯಲ್ಲಿ ಭತ್ತ, ಜೋಳ, ಹತ್ತಿ ಮುಂತಾದ ಬೆಳೆಯನ್ನೂ ಬೆಳೆಯಲಾಗುತ್ತದೆ.

ಕರಾವಳಿಯಲ್ಲಿ ಬತ್ತದ ಬೆಳೆ, ಘಟ್ಟದ ಮೇಲಿನ ತಾಲೂಕುಗಳಲ್ಲಿ ಜೋಳದ ಬೆಳೆ ಮಳೆಯಿಂದಾಗಿ ಹಾನಿಗೊಳಗಾಗುವ ಅಪಾಯ ಎದುರಾಗಿದೆ.

ಹಳಿಯಾಳ, ದಾಂಡೇಲಿಯಲ್ಲಿ ಜೋಳದ ಬೆಳೆ ಕೊಯ್ಲಿಗೆ ಬಂದಿದೆ. ಶೇ.40ರಷ್ಟು ಕೊಯ್ಲು ಮುಗಿದಿತ್ತು. ಉಳಿದೆಡೆ ಕೊಯ್ಲು ನಡೆಯುತ್ತಿದ್ದಾಗಲೆ ಆರಂಭವಾದ ಮಳೆ ಮುಂದುವರಿದಿದ್ದು ರೈತರು ಕೈಗೆ ಬಂದ ಬೆಳೆಯನ್ನು ಉಳಿಸಿಕೊಳ್ಳಲು ದೇವರ ಮೊರೆ ಹೋಗಿದ್ದು, ಹಲವು ದೇವರಲ್ಲಿ ಹರಕೆ ಹೊತ್ತಿರುವುದಾಗಿ ತಿಳಿದುಬಂದಿದೆ.

ಇನ್ನು ಹತ್ತಿ ಬೆಳೆಯಲ್ಲಿ ಹೆಚ್ಚಾಗಿ ಯಲ್ಲಾಪುರ ತಾಲೂಕಿನ ಕಿರವತ್ತಿಯಲ್ಲಿ ಬೆಳೆಯಲಾಗುತ್ತಿದೆ ಇದಕ್ಕೂ ಕೂಡಾ ಅಪಾಯ ಎದುರಾಗಿದೆ.

ಕರಾವಳಿಯಲ್ಲಿ ಬತ್ತದ ಬೆಳೆ ಕೊಯ್ಲಿಗೆ ಬಂದಿದೆ. ಭಟ್ಕಳದಲ್ಲಿ ಕೊಯ್ಲಿಗಾಗಿ ಯಂತ್ರವನ್ನೂ ತರಿಸಲಾಗಿದೆ. ಇದೇ ಸಮಯದಲ್ಲಿ ಮಳೆ ಆರಂಭವಾಗಿದೆ. ವಾರದಿಂದ ಮಳೆ ಸುರಿಯುತ್ತಲೇ ಇದೆ. ಕಟಾವು ಮಾಡಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗಿದ್ದರಿಂದ ರೈತರು ಕಂಗಾಲಾಗಿದ್ದಾರೆ.

ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ಅಡಕೆ. ನಿರಂತರವಾಗಿ ಕಾಡಿದ ಮಳೆಯಿಂದ ಕೊಳೆರೋಗ ಭಾರಿ ಪ್ರಮಾಣದಲ್ಲಿ ಉಂಟಾಗಿ ಅಡಕೆಯ ಇಳುವರಿ ತೀವ್ರ ಕಡಿಮೆಯಾಗಿದ್ದು ಕೃಷಿಕರು ಆತಂಕದಲ್ಲಿದ್ದಾರೆ. ಈಗ ಬತ್ತ ಹಾಗೂ ಜೋಳದ ಬೆಳೆಗಳಿಗೂ ಮಳೆ ಬಿಟ್ಟೂ ಬಿಡದೆ ಕಾಡುತ್ತಿದೆ.

ಅಡಕೆಗೆ ಮಳೆ ಹಾಗೂ ಬಿಸಿಲು ಎರಡೂ ಬರುತ್ತಿರುವ ಸಂದರ್ಭದಲ್ಲಿ ಕೊಳೆ ರೋಗ ಕಾಣಿಸಿಕೊಂಡು ಮೊದಲೇ ಅಡಕೆ ಬೆಳೆಗಾರರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈಗ ಭತ್ತ, ಜೋಳ, ಹತ್ತಿ ಗಳಿಗೆ ಹಾನಿ ಸಂಭವವಾಗಿದೆ.

ನ.22ರವರೆಗೂ ಮಳೆ ಸಾಧ್ಯತೆ, ಹವಾಮಾನ ಇಲಾಖೆ ಮಾಹಿತಿ

ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ನ.22ರ ತನಕ ಜಿಲ್ಲೆಯ ವಿವಿಧೆಡೆ ಭಾರಿ ಮಳೆ ಸುರಿಯಲಿದೆ. 27ರ ತನಕ ಸಾಧಾರಣ ಮಳೆಯಾಗಲಿದೆ. ಇದರಿಂದ ಬೆಳೆದು ನಿಂತಿರುವ ಬೆಳೆಗಳ ಪರಿಸ್ಥಿತಿ ಇನ್ನೇನಾಗಲಿದೆಯೋ ಎಂದು ರೈತರು ಚಿಂತಿತರಾಗಿದ್ದಾರೆ. ಸದ್ಯಕ್ಕೆ ರೈತರು ಕೊಯ್ಲನ್ನು ಮುಂದೂಡಿದ್ದಾರೆ. ಆದರೆ ಕೆಲವೆಡೆ ಕೊಯ್ಲಿಗೆ ಬಂದ ತೆನೆಗಳು ನೆಲಕ್ಕೊರಗಿದ್ದು ಆ ಬೆಳೆ ನಾಶವಾಗುವ ಸಾಧ್ಯತೆ ಹೆಚ್ಚಿದೆ.

> ಈಗಾಗಲೇ ನಮ್ಮ ಫಸಲು ಮಳೆಗೆ ಸಿಕ್ಕಿ ಸಾಕಷ್ಟು ಹಾನಿಯಾಗಿದೆ. ಮಳೆ ಬರುತ್ತಿರುವುದರಿಂದ ಬೆಳೆ ನಾಶವಾಗುವ ಆತಂಕ ಉಂಟಾಗಿದೆ. ಮುಂಗಾರು ಮಳೆ ಚೆನ್ನಾಗಿ ಆಗಿತ್ತು. ಆದರೆ ಹಿಂಗಾರು ಮಳೆಯಿಂದ ತೊಂದರೆ ಉಂಟಾಗಿದೆ.
>
> -ಹನುಮಂತ ಗೌಡ, ರೈತ.

ಬನವಾಸಿ ಮಧುಕೇಶ್ವರ ದೇವಸ್ಥಾನದಲ್ಲಿ ಕೆಮಿಕಲ್ ವಾಶ್

ಬನವಾಸಿ: ಮಧುಕೇಶ್ವರ ದೇವಸ್ಥಾನ ದಲ್ಲಿ ಭಾರತೀಯ ಪುರಾತತ್ವ ಇಲಾಖೆಯಿಂದ ಮತ್ತೆ ಕೆಮಿಕಲ್ ವಾಶ್ ಆರಂಭಗೊಂಡಿದ್ದು, ದೇವಸ್ಥಾನ ಒಳಭಾಗದಲ್ಲಿ ಕಲ್ಲಿಗೆ ಬಿದ್ದ ಕಪ್ಪು ಕಲೆ, ಕುಂಕುಮ ಕಲೆ ಇತ್ಯಾದಿ ತೊಳೆಯಲು ಮಾತ್ರ ಈ ಕೆಮಿಕಲ್ ವಾಶ್ ಎಂದು ಪುರಾತತ್ವ ಇಲಾಖೆ ಅಧಿಕಾರಿ ಶೀಬಾ ಅವರು ತಿಳಿಸಿದ್ದಾರೆ.

ಈ ಹಿಂದೆ ಕೆಮಿಕಲ್ ವಾಶ್ ಮಾಡಿಯೇ ದೇವಸ್ಥಾನ ಸೋರಲು ಆರಂಭವಾಗಿದೆ ಎಂಬ ಆರೋಪದ ಕೂಗು ಇರುವಾಗಲೇ ಮತ್ತೆ ಕೆಮಿಕಲ್ ವಾಶ್ ಆರಂಭ ಮಾಡಿದ್ದೀರಲ್ಲ ಎಂದು ಬನವಾಸಿ ತಾಲೂಕು ಹೋರಾಟ ಸಮಿತಿ ಪ್ರಶ್ನಿಸಿದಾಗ ಈ ಮೇಲಿನಂತೆ ಉತ್ತರ ನೀಡಿದರು.

ಹೋರಾಟ ಸಮಿತಿ ಅಧ್ಯಕ್ಷ ಹಾಗೂ ಬನವಾಸಿ ಅಭಿವೃದ್ಧಿ ಸಮಿತಿ ಸಂಚಾಲಕ ಉದಯಕುಮಾರ್ ಕಾನಳ್ಳಿ ಮಾತನಾಡಿ, ಮತ್ತೆ ಕಲ್ಲಿನ ಸಂದುಗಳಲ್ಲಿ ಕೆಮಿಕಲ್ ಹೋಗಿ ಸಂದಿನ ಗಾರೆ ಸಡಿಲ ಆಗುವದಿಲ್ಲವೇ ಎಂದು ಕೇಳಿದಾಗ ಹಾಗೆ ಆಗೋದಿಲ್ಲ, ಕಲ್ಲಿನ ಒಳ ಭಾಗದಲ್ಲಿ ಮೇಲ್ಮೈ ಮಾತ್ರ ತೊಳೆಯುತ್ತೇವೆ ಎಂದಿದ್ದಾರೆ. ಹಾಗಾದರೆ ಸೋರಿಕೆ ತಡೆಗಟ್ಟುವ ಕಾರ್ಯ ಯಾವಾಗ ಎಂದು ಕೇಳಿದಾಗ, ಆ ಸೆಕ್ಷನ್ ಅಧಿಕಾರಿಗಳು ಬೇರೆ ಇದ್ದಾರೆ, ಕೇಳಿ ತಿಳಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಮಧು ಡಿ. ಭಟ್, ಸಾಯಿರಾಮ ಕಾನಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ಉಪಚುನಾವಣೆಗೆ ಭರತ್ ಬೊಮ್ಮಾಯಿ ಬಿಜೆಪಿ ಅಭ್ಯರ್ಥಿ ಹೈಮಾಂಡ್ ಘೋಷಣೆ

ಶಿಗ್ಗಾಂವ: ಮಾಜಿ ಸಿ.ಎಂ ಬಸವರಾಜ ಬೊಮ್ಮಾಯಿ ಅವರು ಶಿಗ್ಗಾಂವ್- ಸವಣೂರ ವಿಧಾನಸಭಾ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿ ಈ ಹಿಂದೆ ರಾಜ್ಯದ ಸಿ.ಎಂ ಆಗಿಯೂ ಕೆಲಸ ನಿರ್ವಹಿಸಿದ್ದರು. ತದನಂತರ ಅವರಿಗೆ ಹಾವೇರಿ- ಗದಗ ಲೋಕಸಭಾ ಟಿಕೆಟ್ ನೀಡಿದ್ದ ಬಿಜೆಪಿ ಬಸವರಾಜ ಬೊಮ್ಮಾಯಿ ಅವರು ಸಂಸದರಾಗಿ ಆಯ್ಕೆಯಾದ ಹಿನ್ನೆಲೆ ತೆರವಾದ ಈ ಕ್ಷೇತ್ರಕ್ಕೆ ಮೊನ್ನೆ ಅಷ್ಟೇ ಉಪಚುನಾವಣೆ ದಿನಾಂಕ ನಿಗಧಿಯಾಗಿತ್ತು.

ಇದೆಲ್ಲವನ್ನು ಗಮನಿಸಿದ ಬಿಜೆಪಿ ಹೈ ಕಮಾಂಡ್ ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಬೊಮ್ಮಾಯಿ ಅವರನ್ನು ಬಿಜೆಪಿ ಅಧಿಕೃತ ಅಭ್ಯರ್ಥಿಯನ್ನಾಗಿ ಶನಿವಾರ ರಾತ್ರಿ ಘೋಷಣೆ ಮಾಡಿದೆ.

ಭರತ್ ಬೊಮ್ಮಾಯಿ ಅವರು ಬಿಜೆಪಿ ಅಭ್ಯರ್ಥಿ ಎಂದು ಘೋಷಣೆ ಆಗುತ್ತಿದ್ದಂತೆ ಕ್ಷೇತ್ರ ಜನರು ಎಲ್ಲಿಲ್ಲ ಹರ್ಷ ವ್ಯಕ್ತ ಪಡಿಸಿದ್ದಲ್ಲದೇ ಸಾಮಾಜಿಕ ಜಾಲ ತಾಣದಲ್ಲಿ ಸಹಸ್ರಾರು ಅಭಿಮಾ ನಿಗಳು ಶುಭ ಹಾರೈಸಿದ್ದಾರೆ.

ಈಗ ಮತ್ತೆ ಶಿಗ್ಗಾಂವ್- ಸವಣೂರ ವಿಧಾನಸಭೆಯ ಉಪಚುನಾವಣೆ ಕಣ ಇನ್ನಷ್ಟು ರಂಗೇರಿದೆ. ಕಾಂಗ್ರೆಸ್ ಪಕ್ಷಕ್ಕೆ ಬಿಜೆಪಿ ಬಲವಾದ ಟಕ್ಕರ ನೀಡಿದ್ದು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಘೋಷಣೆ ಬಹಳ ಸವಾಲಿನ ಪ್ರಶ್ನೆ ಎನ್ನಲಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಘೋಷಣೆ ಬಗ್ಗೆ ಕಾದು ನೋಡಬೇಕಾಗಿದೆ.

ಇಂದಿನಿಂದ 27ರವರೆಗೆ ಹಲವು ಧಾರ್ಮಿಕ ಕಾರ್ಯಕ್ರಮ

ಶಿರಸಿ: ಆರ್ಷವಿದ್ಯಾ ಟ್ರಸ್ಟ್, ಆಯುಷ್ಮಾನ್‌ಭವ ವಿಜಯೀಭವ ಬಳಗ ಕರ್ನಾಟಕದ ವತಿಯಿಂದ ನಗರದ ಯೋಗ ಮಂದಿರದಲ್ಲಿ ಅ.21ರಿಂದ 27ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ.

ನಗರದ ಯೋಗ ಮಂದಿರಲ್ಲಿ ಟ್ರಸ್ಟ್ ಪ್ರಮುಖ ಮಂಜುನಾಥ ಭಟ್ ಶನಿವಾರ ಸುದ್ದಿಗೋಷ್ಠಿ ಆಯೋಜಿಸಿ ಮಾಹಿತಿ ನೀಡಿದರು. 'ರಾಷ್ಟ್ರ ಕ್ಷೇಮ ಸಂಕಲ್ಪಿಸಿ 50 ಋತ್ವಿಜರಿಂದ ವೇದಮಾತೆಯ ಆರಾಧನೆ ನಡೆಯಲಿದೆ.

ಅ.21ರಂದು ಬೆಳಿಗ್ಗೆ 5ಕ್ಕೆ ಕಾರ್ಯಕ್ರಮ ಅನುಷ್ಠಾನ ಆರಂಭವಾಗಲಿದೆ. ಬೆಳಿಗ್ಗೆ 9ರಿಂದ ಚತುರ್ವೇದ ಪಾರಾಯಣ ಪ್ರಾರಂಭವಾಗಲಿದೆ. 10.30ಕ್ಕೆ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಕಾರ್ಯಕ್ರಮಕ್ಕೆ ಆಗಮಿಸಲಿದ್ದು, ಆಶೀರ್ವದಿಸಲಿದ್ದಾರೆ. ನಂತರ ಶಾಂಕರಭಾಷ್ಯ, ಗುರುಚರಿತ್ರೆ, ಶ್ರೀಮದ್ರಾಮಾಯಣ, ಶ್ರೀಮದ್ದೇವೀಭಾಗವತ ಪುರಾಣಗಳ ಪಾರಾಯಣ, ಚಂಡೀಹೋಮ, ಆದಿತ್ಯಹೃದಯ ಪಾರಾಯಣದ ಮಹಾಸಮರ್ಪಣೆ ನಡೆಯಲಿದೆ ಎಂದರು.

ಅ.23ರಂದು ಸಂಜೆ 4.30ಕ್ಕೆ ನೆಲೆಮಾವು ಮಠದ ಮಾಧವಾನಂದ ಭಾರತೀ ಸ್ವಾಮೀಜಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಅ.25ಕ್ಕೆ ಕುಂಕುಮಾರ್ಚನೆ, ಅ.26 ಕ್ಕೆ ಭಗವದ್ಗೀತಾ ಪಾರಾಯಣ, ಅ.27 ಮಂಗಲೋತ್ಸವ ನಡೆಯುವುದು. ಸಂಜೆ 5ಕ್ಕೆ ಗೀತೋಪದೇಶ ತಾಳಮದ್ದಳೆ ನಡೆಯಲಿದೆ. ಇದೇ ವೇಳೆ ಆಯುಷ್ಮಾನ್ ವೇದನಿಧಿ ಪುರಸ್ಕಾರ, ಭಾರತಾಷ್ಟಕಮ್ ಸ್ತೋತ್ರ ಗಾಯನದ ಸ್ಪರ್ಧಾ ವಿಜೇತರಿಗೆ ಪುರಸ್ಕಾರ, ವಿದ್ವಾಂಸರಿಂದ ವೇದ ಸಂಸ್ಕೃತಿ ಪರಿಚಯ ಉಪನ್ಯಾಸ, ಯಕ್ಷವೃಕ್ಷಗಳ ಪ್ರದರ್ಶನ ನಡೆಯಲಿದೆ ಎಂದರು.

ಈ ವೇಳೆ ಯೋಗ ಮಂದಿರದ ಉಸ್ತುವಾರಿ ಸಿ.ಎಸ್.ಹೆಗಡೆ, ಪ್ರಮುಖರಾದ ದಾಮೋದರ ಭಟ್, ಭಾಸ್ಕರ್ ಭಟ್, ಎಸ್.ಎನ್.ಉಪಾಧ್ಯ ಇದ್ದರು.

ಶಿಗ್ಗಾಂವ ಕ್ಷೇತ್ರ ಕಾಂಗ್ರೆಸ್‌ಗೆ ಅಭ್ಯರ್ಥಿ ಘೋಷಣೆ ಸವಾಲ್

ಬೈ ಎಲೆಕ್ಷನ್ ದಂಗಲ್ ಆರಂಭ | ಶಿಗ್ಗಾಂವ ಬಿಜೆಪಿಯಿಂದ ಭರತ್ ಬೊಮ್ಮಾಯಿ ಅಖಾಡಕ್ಕೆ

ಹಾವೇರಿ: ಶಿಗ್ಗಾಂವ- ಸವಣೂರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬಿಜೆಪಿ ಕ್ಷೇತ್ರ ಉಳಿಸಿಕೊಳ್ಳಲು ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಬೊಮ್ಮಾಯಿ ಅವರನ್ನು ಅಭ್ಯರ್ಥಿ ಎಂದು ಘೋಷಣೆ ಮಾಡಿದೆ.

ಬಸವರಾಜ ಬೊಮ್ಮಾಯಿ ಅವರು ಈಕ್ಷೇತ್ರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ ಎಂಟು ಬಾರಿ ಜಯ ಪಡೆದಿದ್ದರೇ ಎರಡು ಬಾರಿ ಪಕ್ಷೇತ್ರರು ಶಾಸರಕಾಗಿದ್ದರು. ಒಂದು ಬಾರಿ ಜನತಾ ದಳ ಜ್ಯಾತ್ಯಾತೀತ ಪಕ್ಷ ಅಧಿಕಾರಕ್ಕೆ ಬಂದಿತ್ತು. ಬಸವರಾಜ ಬೊಮ್ಮಾಯಿ ಅವರು 2008 ರಲ್ಲಿ ನಡೆದ ಸಾರ್ವತ್ರಿಕ ವಿಧಾನಸಭೆಯಲ್ಲಿ ಬಿಜೆಪಿಯಿಂದ ಪ್ರಥಮ ಬಾರಿಗೆ ಸ್ಪರ್ಧೆ ಮಾಡಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆ ಮಾಡಿದ್ದ ಅಜ್ಜಂಪೀರ ಖಾದ್ರಿ, ಅವರ ವಿರುದ್ಧ 12 ಸಾವಿರಕ್ಕೂ ಹೆಚ್ಚು ಮತಗಳಿಂದ ಜಯ ಸಾಧಿಸಿ ಪ್ರಥಮವಾಗಿ ಬಿಜೆಪಿ ಪಕ್ಷದ ಬಾವುಟ ಹಾರಿಸಿದರು.

ನಂತರದಲ್ಲಿ ಸತತ ನಾಲ್ಕು ಬಾರಿ ಸೋಲಿಲ್ಲದೇ ಜಯ ಸಾಧಿಸಿ ಸಚಿವರಾಗಿ. ಸಿ.ಎಂ ಆಗಿ ಕೂಡಾ ರಾಜ್ಯದಲ್ಲಿ ಕೆಲಸ ಮಾಡಿದರು. ಬೊಮ್ಮಾಯಿ ಅವರು 2023 ರಲ್ಲಿ ಕೂಡಾ 36 ಸಾವಿರ ಅಂತರದಲ್ಲಿ ಕಾಂಗ್ರೆಸ್ ಪಕ್ಷದ ಅರ್ಭ್ಯಥಿ ಪಠಾಣ ವಿರುದ್ಧ ಜಯ ಪಡೆದು ಹ್ಯಾಟ್ರಿಕ್ ಗೆಲವನ್ನು ಸಾಧಿಸಿದ ನಂತರದಲ್ಲಿ ಅನೀರಿಕ್ಷತವಾಗಿ ಅವರಿಗೆ ಕೇಂದ್ರದ ಬಿಜೆಪಿ ಹೈ ಕಮಾಂಡ್ ಹಾವೇರಿ ಗದಗ ಎಂಪಿ ಕ್ಷೇತ್ರಕ್ಕೆ ಅಭ್ಯರ್ಥಿಯನ್ನಾಗಿಸಿತು. ಇಲ್ಲಿಯೂ ಕೂಡಾ ಜಯ ಸಾಧಿಸಿದ ನಂತರದಲ್ಲಿ ವಿಧಾನಸಭೆ ಕೇತ್ರಕ್ಕೆ ಅವರು ರಾಜಿನಾಮೆ ನೀಡಿದರು. ಇವರು ನಾಲ್ಕು ಬಾರಿ ಶಾಸಕರಾಗಿ ಸಚಿವರಾಗಿ ಮುಖ್ಯಮಂತ್ರಿಯಾಗಿ ಕೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಪಡೆಸಿದ್ದರು. ಇದನ್ನೆ ಬಿಜೆಪಿ ಹೈ ಕಮಾಂಡ್ ಲೆಕ್ಕಾಚಾರ ಹಾಕಿ ಇವರ ಮಗನನ್ನು ಬಿಟ್ಟು ಬೇರೆ ಅವರಿಗೆ ಟಿಕೆಟ ನೀಡಿದರೆ ಕಾಂಗ್ರೆಸ್ ವಿರುದ್ಧ ಚುನಾವಣೆ ಮಾಡುವುದು ಕಷ್ಟ ಸಾಧ್ಯ ಎಂದು ಈ ತೀರ್ಮಾನ ಮಾಡಿದೆ ಎನ್ನಲಾಗುತ್ತಿದೆ.

ಬಸವರಾಜ ಬೊಮ್ಮಾಯಿ ಅವರು ಈ ಕ್ಷೇತ್ರದಲ್ಲಿ ಸಾಕಷ್ಟು ಹಿಡಿತ ಹೊಂದಿದ್ದಾರೆ ಎನ್ನುವುದು ಕಾಂಗ್ರೆಸ್ ಪಕ್ಷಕ್ಕೆ ಗೊತ್ತಿರುವ ಚಿವಾರ ಈ ಕೆತ್ರದ ರಾಜ್ಯದಲ್ಲಿ ಅತ್ಯಂತ್ ಹೈ ಪೋಲ್ವೇಜ್ ಕೇತ್ರವಾಗಿ ಬಿಜೆಪಿ ಭದ್ರ ಕೋಟೆಯಾಗಿದೆ.

ಹಾಗಾಗಿ ಬೊಮ್ಮಾಯಿ ಅವರ ಪುತ್ರ ಭರತ್ ಬೊಮ್ಮಾಯಿ ಅವರನ್ನು ಅಖಾಡಕ್ಕೆ ಇಳಿಸಿರುವ ಬಿಜೆಪಿಯನ್ನು ಕಟ್ಟಿ ಹಾಕಲು ಅಭ್ಯರ್ಥಿ ಘೋಷಣೆಗೆ ಕಾಂಗ್ರೆಸ್ ಬಾರಿ ಲೆಕ್ಕಾಚಾರ ಹಾಕಿ ಅಖಾಡಕ್ಕೆ ಇಳಿಸಲು ತೀರ್ಮಾನ ನಡೆಸಿದೆ. ಈಗಾಗಲೇ ನಾಮಪತ್ರ ಸಲ್ಲಿಕೆ ಅ.18 ರಿಂದಲೇ ಆರಂಭವಾಗಿದು ಅ. 25 ನಾಮಮತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಇನ್ನು ಕೇಲವ ಐದು ದಿನಗಳ ಬಾಕಿ ಇದೆ.

ಇಷ್ಟರಲ್ಲಿಯೇ ಕಾಂಗ್ರೆಸ್ ಅರ್ಭರ್ಥಿಯನ್ನು ಘೋಷಣೆ ಮಾಡಿ ಹಳೆ ಮಾತಾಗಬೇಕಾಗಿತ್ತು. ಜಾತಿ ಲೆಕ್ಕಾಚಾರದ ಕೋಟಾದ ಪ್ರಬಲ ಕೂಗು ಕೇಳಿ ಬರುತ್ತಲೇ ಇದೆ. ಈ ಹಿಂದೆ ನಾಲ್ಕು ಬಾರಿ ಮುಸ್ಲಿಂ ಕೋಟಾ ನೀಡಿದ್ದ ಕಾಂಗ್ರೆಸ್ ಕೈ ಸುಟ್ಟುಕೊಂಡಿದೆ. ಇದನ್ನು ಬಿಟ್ಟು ಅಹಿಂದ ಅಥವಾ ಲಿಂಗಾಯತ ಕೋಟಾ ನೀಡಿದರೆ ಬಿಜೆಪಿಯನ್ನು ಕಟ್ಟಿ ಹಾಕಲು ಸಾಧ್ಯ ಎನ್ನುವುದು ಲೆಕ್ಕಾಚಾರ ಅನೇಕ ಬಾರಿ ವರದಿ ಕಲೆ ಹಾಕಿದೆ. ಇದನ್ನೇ ಗಾಳವಾಗಿರುವ ಕಾಂಗ್ರೆಸ್ ಮುಸ್ಲಿಯೇತರ ಅಭ್ಯರ್ಥಿ ಕೋಟಾ ನೀಡುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.539/2024

ಅರ್ಜಿದಾರರು : 1. ಶ್ರೀ . ರಂಗಪ್ಪ ತಂದೆ ಲೇಟ್ ರಂಗಪ್ಪ ವಯಸ್ಸು: 54 ವರ್ಷ. 2.ಶ್ರೀಮತಿ. ಕಾಳವ್ವ ತಂದೆ ಲೇಟ್ ರಂಗಪ್ಪ ವಯಸ್ಸು: 71 ವರ್ಷ. 3. ಶ್ರೀಮತಿ. ಅಂಜಿನಮ್ಮ ತಂದೆ ಲೇಟ್ ರಂಗಪ್ಪ, ವಯಸ್ಸು: 45 ವರ್ಷ. 4. ಶ್ರೀ ಹನುಮಂತಪ್ಪ ತಂದೆ ಲೇಟ್ ರಂಗಪ್ಪ, ವಯಸ್ಸು: 36 ವರ್ಷ. 5.ಶ್ರೀ ರಾಜಪ್ಪ ರಂಗಪ್ಪ ತಂದೆ ಲೇಟ್ ರಂಗಪ್ಪ, ವಯಸ್ಸು : 41ವರ್ಷ. 6.ಶ್ರೀಮತಿ. ಜಿ.ಸಾಕಮ್ಮ ತಂದೆ ಲೇಟ್ ರಂಗಪ್ಪ, ವಯಸ್ಸು: 36 ವರ್ಷ. 7.ಶ್ರೀಮತಿ. ಕಮಲಮ್ಮ ದುಮ್ಮವ್ವರ ತಂದೆ ಲೇಟ್ ರಂಗಪ್ಪ ವಯಸ್ಸು: 47 ವರ್ಷ. 8. ಶ್ರೀಮತಿ. ದುರುಗಮ್ಮ ತಂದೆ ಲೇಟ್ ರಂಗಪ್ಪ ವಯಸ್ಸು: 57 ವರ್ಷ. ಎಲ್ಲರೂ ಹಿಂದೂಗಳು, ವೃತ್ತಿ: ಕೃಷಿ, ವಾಸ: ಹುರೇಮೆಗಳಗೆರೆ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : 1.ಮಾನ್ಯ ತಹಶಿಲ್ದಾರರು, ಹರಪನ ಹಳ್ಳಿ. 2. ಗ್ರಾಮಲೆಕ್ಕಾಧಿಕಾರಿಗಳು ಹಿರೆಮೆಗಳಗೆರೆ ಗ್ರಾಮ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಸದರಿ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿದಾರರ ದೊಡ್ಡಪ್ಪನಾದ ರಂಗಪ್ಪ ಬಸಪ್ಪ ತಂದೆ ಸಿದ್ದಪ್ಪ ಇವರು ದಿನಾಂಕ:25.07.1998 ರಂದು ಹರಪನಹಳ್ಳಿ ತಾಲೂಕು ಹಿರೇಮೆಗಳಗೆರೆ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 16.11.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11-00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ ಹರಪನಹಳ್ಳಿ

ಅರ್ಜಿದಾರರ ಪರ ವಕೀಲರು
ಶ್ರೀ ಕೆ.ಎಸ್.ಮಂಜಾನಾಯ್ಕ, ವಕೀಲರು
ಸ್ಥಳ: ಹರಪನಹಳ್ಳಿ
ದಿನಾಂಕ: 19/10/2024

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.540/2024

ಅರ್ಜಿದಾರರು : 1. ಶ್ರೀ ರಂಗಪ್ಪ ತಂದೆ ಲೇಟ್ ರಂಗಪ್ಪ ವಯಸ್ಸು: 54 ವರ್ಷ. 2. ಶ್ರೀಮತಿ ಕಾಳವ್ವ ತಂದೆ ಲೇಟ್ ರಂಗಪ್ಪ ವಯಸ್ಸು: 71 ವರ್ಷ. 3. ಶ್ರೀಮತಿ ಅಂಜಿನಮ್ಮ ತಂದೆ ಲೇಟ್ ರಂಗಪ್ಪ, ವಯಸ್ಸು: 45 ವರ್ಷ. 4. ಶ್ರೀ ಹನುಮಂತಪ್ಪ ತಂದೆ ಲೇಟ್ ರಂಗಪ್ಪ, ವಯಸ್ಸು: 36 ವರ್ಷ. 5. ಶ್ರೀ ರಾಜಪ್ಪ ರಂಗಪ್ಪ ತಂದೆ ಲೇಟ್ ರಂಗಪ್ಪ, ವಯಸ್ಸು : 41ವರ್ಷ. 6. ಶ್ರೀಮತಿ ಜಿ.ಸಾಕಮ್ಮ ತಂದೆ ಲೇಟ್ ರಂಗಪ್ಪ, ವಯಸ್ಸು: 36 ವರ್ಷ. 7. ಶ್ರೀಮತಿ ಕಮಲಮ್ಮ ದುಮ್ಮವ್ವರ ತಂದೆ ಲೇಟ್ ರಂಗಪ್ಪ ವಯಸ್ಸು: 47 ವರ್ಷ. 8. ಶ್ರೀಮತಿ ದುರುಗಮ್ಮ ತಂದೆ ಲೇಟ್ ರಂಗಪ್ಪ ವಯಸ್ಸು: 57 ವರ್ಷ. ಎಲ್ಲರೂ ಹಿಂದೂಗಳು ವೃತ್ತಿ: ಕೃಷಿ, ವಾಸ: ಹುರೇಮೆಗಳಗೆರೆ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು: 1.ಮಾನ್ಯ ತಹಶಿಲ್ದಾರರು ಹರಪನಹಳ್ಳಿ 2. ಗ್ರಾಮಲೇಕ್ಕಾಧಿಕಾರಿಗಳು, ಹಿರೆಮೆಗಳಗೆರೆ ಗ್ರಾಮ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಸದರಿ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿದಾರರ ದೊಡ್ಡಪ್ಪನಾದ ರಂಗಪ್ಪ ಹನ್ಮಪ್ಪ ತಂದೆ ಸಿದ್ದಪ್ಪ ಇವರು ದಿನಾಂಕ: 28.03.1970 ರಂದು ಹರಪನಹಳ್ಳಿ ತಾಲೂಕು ಹಿರೇಮೆಗಳಗೆರೆ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 16.11.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11-00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ನ್ಯಾಯಾಲಯ, ಹರಪನಹಳ್ಳಿ

ಅರ್ಜಿದಾರರ ಪರ ವಕೀಲರು
ಶ್ರೀ ಕೆ.ಎಸ್. ಮಂಜಾನಾಯ್ಕ, ವಕೀಲರು
ಸ್ಥಳ: ಹರಪನಹಳ್ಳಿ
ದಿನಾಂಕ: 19/10/2024

ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.541/2024

ಅರ್ಜಿದಾರರು : 1. ಶ್ರೀ ರಂಗಪ್ಪ ತಂದೆ ಲೇಟ್ ರಂಗಪ್ಪ ವಯಸ್ಸು: 54 ವರ್ಷ. 2.ಶ್ರೀಮತಿ ಕಾಳವ್ವ ತಂದೆ ಲೇಟ್ ರಂಗಪ್ಪ ವಯಸ್ಸು: 71 ವರ್ಷ. 3. ಶ್ರೀಮತಿ ಅಂಜಿನಮ್ಮ ತಂದೆ ಲೇಟ್ ರಂಗಪ್ಪ, ವಯಸ್ಸು: 45 ವರ್ಷ. 4. ಶ್ರೀ ಹನುಮಂತಪ್ಪ ತಂದೆ ಲೇಟ್ ರಂಗಪ್ಪ, ವಯಸ್ಸು: 36 ವರ್ಷ. 5.ಶ್ರೀ ರಾಜಪ್ಪ ರಂಗಪ್ಪ ತಂದೆ ಲೇಟ್ ರಂಗಪ್ಪ, ವಯಸ್ಸು : 41ವರ್ಷ. 6.ಶ್ರೀಮತಿ ಜಿ.ಸಾಕಮ್ಮ ತಂದೆ ಲೇಟ್ ರಂಗಪ್ಪ, ವಯಸ್ಸು: 36 ವರ್ಷ. 7.ಶ್ರೀಮತಿ. ಕಮಲಮ್ಮ ದುಮ್ಮವ್ವರ ತಂದೆ ಲೇಟ್ ರಂಗಪ್ಪ ವಯಸ್ಸು: 47 ವರ್ಷ. 8. ಶ್ರೀಮತಿ. ದುರುಗಮ್ಮ ತಂದೆ ಲೇಟ್ ರಂಗಪ್ಪ ವಯಸ್ಸು: 57 ವರ್ಷ. ಎಲ್ಲರೂ ಹಿಂದೂಗಳು ವೃತ್ತಿ: ಕೃಷಿ ವಾಸ: ಹುರೇಮೆಗಳಗೆರೆ ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು: 1.ಮಾನ್ಯ ತಹಶಿಲ್ದಾರರು,ಹರಪನಹಳ್ಳಿ 2. ಗ್ರಾಮಲೇಕ್ಕಾಧಿಕಾರಿಗಳು ಹಿರೆಮೆಗಳಗೆರೆ ಗ್ರಾಮ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಸದರಿ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿದಾರರ ಚಿಕ್ಕಪ್ಪನಾದ ರಂಗಪ್ಪ ಕರೆಹನ್ಮಪ್ಪ ತಂದೆ ಸಿದ್ದಪ್ಪ ಇವರು ದಿನಾಂಕ:05.12.1968 ರಂದು ಹರಪನಹಳ್ಳಿ ತಾಲೂಕು ಹಿರೇಮೆಗಳಗೆರೆ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 16.11.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11-00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ನ್ಯಾಯಾಲಯ ಹರಪನಹಳ್ಳಿ

ಅರ್ಜಿದಾರರ ಪರ ವಕೀಲರು
ಶ್ರೀ ಕೆ.ಎಸ್. ಮಂಜಾನಾಯ್ಕ, ವಕೀಲರು
ಸ್ಥಳ: ಹರಪನಹಳ್ಳಿ
ದಿನಾಂಕ: 19/10/2024

ಸ್ವಚ್ಛವಾಹಿನಿಯವರಿಗೆ ಖಾತ್ರಿ ಕೆಲಸ ನೀಡಿ

ನೌಕರರ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಎಂ.ಬಿ ನಾಡಗೌಡ ಒತ್ತಾಯ

ಹಾವೇರಿ: ಗ್ರಾಮಗಳ ಸ್ವಚ್ಛತೆಯ ಜವಾಬ್ದಾರಿ ನಿರ್ವಹಿಸಿ ಗ್ರಾಮೀಣ ಜನತೆಯ ನೈರ್ಮಲ್ಯ ಕಾಪಾಡುತ್ತಿರುವ ಸ್ವಚ್ಛವಾಹಿನಿ ನೌಕರರಿಗೆ ಸರಕಾರ ಕೆಲಸ ಒದಗಿಸಿ, ಘನತೆಯ ಬದುಕನ್ನು ಖಾತ್ರಿ ಪಡಿಸಬೇಕು ಎಂದು ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಎಂ.ಬಿ ನಾಡಗೌಡ ಒತ್ತಾಯಿಸಿದರು.

ನಗರದ ಸರಕಾರಿ ನೌಕರರ ಸಂಘದ ಸಭಾಭವನದಲ್ಲಿ ಶನಿವಾರ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ಸ್ವಚ್ಛವಾಹಿನಿ ನೌಕರರ ಜಿಲ್ಲಾ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಕಸ ವಿಲೇವಾರಿ ಮಾಡುವ ಕಾರ್ಮಿಕರಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಶೋಷಣೆ ಗೊಳಪಡಿಸುತ್ತಿರುವುದು ಖಂಡನೀಯ. ಕೂಡಲೇ ಸರಕಾರ ತರಭೇತಿ ಪಡೆದ ಎಲ್ಲ ಸ್ವಚ್ಛವಾಹಿನಿ ನೌಕರರಿಗೆ ಗ್ರಾಮ ಪಂಚಾಯತಿಗಳಲ್ಲಿ ಕೆಲಸ ನೀಡಬೇಕು ಹಾಗೂ ಪ್ರತಿ ತಿಂಗಳು ವೇತನ ಪಾವತಿ ಮಾಡಬೇಕು ಎಂದು ಆಗ್ರಹಿಸಿದರು.

ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ, ಸಮಾಜದ ನೈರ್ಮಲ್ಯ ಕಾಪಾಡುವ ಸ್ವಚ್ಛವಾಹಿನಿ ಸಿಬ್ಬಂದಿಗಳ ಜೀವನವೂ ಸಹ ನಮ್ಮ ನಾಗರೀಕ ಸಮಾಜದಲ್ಲಿ ಘನತೆಯಿಂದ ಕೂಡಿರಬೇಕು. ಆದರೆ ಸರಕಾರಗಳು ಕನಿಷ್ಠ ಮೂಲ ಸೌಲಭ್ಯ ಒದಗಿಸದಿರುವುದು ನಾಚಿಕೆಗೇಡಿನ ಸಂಗತಿ.

ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಎಂ.ಬಿ ನಾಡಗೌಡ ಮಾತನಾಡಿದರು.

ಎಲ್ಲ ನೌಕರರು ಸಂಘಟಿತರಾಗಿ ಐಕ್ಯತೆಯಿಂದ ಹೋರಾಡಿ ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಂದಾಗಬೇಕು ಎಂದು ಕರೆ ನೀಡಿದರು.

ಸಂಘಟನೆಯ ರಾಜ್ಯ ಮುಖಂಡ ಡಿ.ಎಂ ಮಲಿಯಪ್ಪ ಮಾತನಾಡಿ, ಖಾಯಂ ಸ್ವರೂಪದ ಕೆಲಸ ಮಾಡುತ್ತಿರುವ ಸ್ವಚ್ಛವಾಹಿನಿ ಸಿಬ್ಬಂದಿಗಳಿಗೆ ಕೆಲಸ ಖಾಯಂ ನೀಡದೇ ವಂಚಿಸಲಾಗುತ್ತಿದೆ.

ಮಾಡಿದ ಕೆಲಸಕ್ಕೂ ವೇತನ ನೀಡದೇ ಬಾಕಿ ಉಳಿಸಿಕೊಳ್ಳುತ್ತಿದ್ದು ಕಾರ್ಮಿಕರು ಬದುಕು ನಡೆಸುವುದಾದರೂ ಹೇಗೆ ಎಂದು ಪ್ರಶ್ನಿಸಿದರು. ಬಾಕಿಯಿರುವ ಎಲ್ಲ ವೇತನವನ್ನು ಕೂಡಲೇ ಸಿಬ್ಬಂದಿಗಳಿಗೆ ಜಮಾ ಮಾಡಲು ಕ್ರಮ ಕೈಗೊಳ್ಳಬೇಕು ಎಂದರು.

ಗ್ರಾಮ ಪಂಚಾಯತಿ ನೌಕರ ಸಂಘದ ಜಿಲ್ಲಾಧ್ಯಕ್ಷ ಅಂದಾನೆಪ್ಪ ಹೆಬಸೂರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಮಾವೇಶದಲ್ಲಿ ಜಿಲ್ಲಾ ಪಂಚಾಯತಿ ಸಹಾಯಕ ನಿರ್ದೇಶಕರಾದ ವಿ. ಕೆ. ಶಿವಲಿಂಗಪ್ಪ ಅವರು ಮನವಿ ಸ್ವೀಕರಿಸಿ ಮಾತನಾಡಿ, ಮೇಲಾಧಿಕಾರಿಗಳ ನೇತೃತ್ವದಲ್ಲಿ ಸಭೆ ಕರೆಯುವುದಾಗಿ ಹೇಳಿದರು.

ಸಂಘಟನೆಯ ಜಿಲ್ಲಾ ಮುಖಂಡರಾದ ಸುಭಾಸ್ ಸೊಟ್ಟಪ್ಪನವರ, ಶಿಲ್ಪಾ ಶೇಷಗಿರಿ, ಗೀತಾ ಬಾಗಿಲದ, ರಚನಾ ಎಚ್, ಫಕ್ಕಿರೇಶ ಹಕ್ಕಿಮರಣ್ಣನವರ, ಆದಂ ಸೇರಿದಂತೆ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಿಲ್ಲೆಯ ವಿವಿಧ ತಾಲೂಕುಗಳ ನೂರಾರು ಸ್ವಚ್ಛವಾಹಿನಿ ಸಿಬ್ಬಂದಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಸಮಾಚಾರ ಸಣ್ಣದಲ್ಲ

ಅ.21ಕ್ಕೆ ಹಲವುಕಡೆ ವಿದ್ಯುತ್ ವ್ಯತ್ಯಯ

ಹುಬ್ಬಳ್ಳಿ: ತುರ್ತುಪಾಲನಾ ಕಾಮಗಾರಿ ಹಿನ್ನೆಲೆಯಲ್ಲಿ ಕುಂದಗೋಳ ಹಾಗೂ ನವಲಗುಂದ ತಾಲೂಕಿನ ವಿವಿದೇಡೆ ಅ.21ರ ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಕುಂದಗೋಳ ತಾಲೂಕಿನ ಅಲ್ಲಾಪುರ, ಕಡಪಟ್ಟಿ, ಗುಡೇನಕಟ್ಟಿ, ಯರಿನಾರಾಯಣಪುರ, ಬೆನಕನಹಳ್ಳಿ, ಹಿರೇನರ್ತಿ, ಬಸಾಪೂರ, ಚಿಕ್ಕನರ್ತಿ, ಯರಗುಪ್ಪಿ, ಮುಳ್ಳೊಳ್ಳಿ, ರೊಟ್ಟಿಗವಾಡ, ಕೊಂಕಣಕುರಹಟ್ಟಿ, ಚಾಕಲಬ್ಬಿ, ಹಿರೇಹರಕುಣಿ, ಚಿಕ್ಕಹರಕುಣಿ, ಬು.ತರ್ಲಘಟ್ಟ, ಬು.ಕೊಪ್ಪ, ನೆಲಗುಡ್ಡ, ಇಂಗಳಗಿ, ಹಿರೇಬೂದಿಹಾಳ, ಮತ್ತಿಗಟ್ಟಿ, ರಾಮಾಪುರ, ಹನುಮನಹಳ್ಳಿ, , ಗುಡಗೇರಿ, ಮಂಡಿಗನಾಳ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯವಾಗಲಿದೆ. ನವಲಗುಂದ ತಾಲೂಕಿನ ಬೆಳವಟಗಿ, ಅಮರಗೋಳ, ಗುಡಿಸಾಗರ, ನಾಗನೂರ, ಸೊಟಕನಾಳ, ಕಡದಲ್ಲಿ, ಅರಹಟ್ಟಿ, ತಡಹಾಳ, ಕೊಂಡವಾಡ, ಇಬ್ರಾಹಿಂಪೂರ, ಶಲವಡಿ, ಖನ್ನೂರ, ಭೋಗಾನೂರ, ನಾಯ್ಕನೂರ, ದಾಟನಾಳ, ಅರಹಟ್ಟಿ, ತಡಹಾಳ, ಕೊಂಗವಾಡ, ಶಾನವಾಡ, ಹಾಲಕುಸುಗಲ್ಲ, ಅಳಗವಾಡಿ, ಗೊಬ್ಬರಗುಂಪಿ, ಹೆಬ್ಬಾಳ, ಭದ್ರಾಪೂರ, ನಲವಡಿ, ಮಣಕವಾಡ, ಶಿಶ್ವಿನಹಳ್ಳಿ, ಸೈದಾಪೂರ, ಕೊಂಡಿಕೊಪ್ಪ, ಸಾಸ್ವಿಹಳ್ಳಿ, ಹಳ್ಳಿಕೇರಿ, ಅಡ್ನೂರು, ಕಿತ್ತೂರ, ನಾವಳ್ಳಿ, ತುಪ್ಪದಕುರಹಟ್ಟಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಗರ್ಭ ಸಂಸ್ಕಾರ ಅರಿವು ಕಾರ್ಯಕ್ರಮ ಮುಕ್ತಾಯ

ಧಾರವಾಡ: ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ , ಸಿ. ಬಿ.ಗುತ್ತಲ ಆಯುರ್ವೇದಿಕ ವೈದ್ಯಕೀಯ ಮಹಾವಿದ್ಯಾಲಯ, ಬಿ ಡಿ ಜತ್ತಿ ಹೋಮಿ ಯೋಪತಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರೋಟರಿ ಕ್ಲಬ್ ಧಾರವಾಡ ಹಮ್ ಫೌಂಡೇಶನ್ ಭಾರತ ಸಂಯುಕ್ತಾಶ್ರಯದಲ್ಲಿ ಪುರುಷೋತ್ತಮದಾಸ ಟಂಡನ್ ಹಿಂದ್ ಭವನದಲ್ಲಿ ವಿವಾಹಯೋಗ್ಯ ವಯಸ್ಕರಿಗೆ ನವವಿವಾಹಿತರಿಗೆ ಹಾಗು ಗರ್ಭಿಣಿಯರಿಗೆ ಗರ್ಭಸಂಸ್ಕಾರ ಉಚಿತ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅಧ್ಯಕ್ಷತೆ ವಹಿಸಿದ್ದ ಮಾಜಿ ಮಹಾಪೌರ ಈರೇಶ ಅಂಚಟಗೇರಿ ಮಾತನಾಡಿ, ಇಂತಹ ವಿನೂತನ ಕಾರ್ಯಕ್ರಮಗಳನ್ನು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಿ ಜನತೆಗೆ ಅರಿವು ಮೂಡಿಸಬೇಕು ಹಾಗೂ ವಿಶೇಷವಾಗಿ ದಂಪತಿಗಳಿಗೆ ಇಂತಹ ಮಾಹಿತಿ ಅವಶ್ಯಕತೆ ಇರುವದು ಕಾರ್ಯಕ್ರಮದ ಆಯೋಜಕರಿಗೆ ಅಭಿನಂದನೆಗಳು ಸಲ್ಲಿಸಿ ಎಲ್ಲರಿಗು ಶುಭ ಕೋರಿದರು. ಡಾಕ್ಟರ್ ವೀಣಾ ಬ್ರಿಗೇಟಜಾ, ಡಾಕ್ಟರ್ ಅಶ್ವಿನಿ ವೆಂಕಟೇಶ್ ಮಾತನಾಡಿದರು.ಈ ಸಂದರ್ಭದಲ್ಲಿ ಡಾ ವೀಣಾ ಬ್ರಗೆಂಝಾ, ಡಾ.ಅಶ್ವಿನಿ ವೆಂಕಟೇಶ, ಜಗದೀಶ್ ಮಳಗಿ, ಎಸ್‌ರಾಧಾಕೃಷ್ಣನ್, ಸುನೀತಾ ಪುರೋಹಿತ, ಲಕ್ಷ್ಮಿಕಾಂತ ನಾಯಕ, ಲಕ್ಷ್ಮಿ ಪಾಟೀಲ ಉಪಸ್ಥಿತರಿದ್ದರು.

ಜಿಲ್ಲಾ ಪಂಚಾಯಿತಿ ಕೆಡಿಪಿ ಸಭೆ ನಾಳೆ

ಧಾರವಾಡ: 2024-25 ನೇ ಸಾಲಿನ ಸೆ. 2024 ರ ಅಂತ್ಯಕ್ಕೆ ಕೊನೆಗೊಂಡಂತೆ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಯಡಿ ಎರಡನೇ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯನ್ನು ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್ 22 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಎಲ್ಲ ಜಿಲ್ಲಾಮಟ್ಟದ ಅಧಿಕಾರಿಗಳು ಕೆಡಿಪಿ ಸಭೆಗೆ ತಮ್ಮ ಇಲಾಖೆಯ ಪ್ರಗತಿ ವರದಿ ಮತ್ತು ಅನುಪಾಲನಾ ವರದಿಯೊಂದಿಗೆ ನಿಗದಿತ ಸಮಯಕ್ಕೆ ಹಾಜರಾಗಲು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬದುಕಿನ ಕಷ್ಟ ಮರೆಸಿದ ಕಾಮಿಡಿ ಕಿಲಾಡಿ

ಝೀ ಕನ್ನಡದ ಪ್ರಸಿದ್ದ ರಿಯಾಲಿಟಿ ಶೋ ಕಾಮಿಡಿ ಕಿಲಾಡಿ ಪ್ರೀಮಿಯರ್ ಲೀಗ್ ನಲ್ಲಿ ಸ್ಥಾನ ಪಡೆದ ಮಾಂತೇಶ

ಮಾಳಿಂಗರಾಯ ಪೂಜಾರ

ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣದ ಯುವ ಪ್ರತಿಭೆ ಮಾಂತೇಶ ಝೀ ಕನ್ನಡ ವಾಹಿನಿಯಲ್ಲಿ ಕಾಮಿಡಿ ಕಿಲಾಡಿಯಲ್ಲಿ ಭಾಗವಹಿಸಿದ ತಂಡ ಖ್ಯಾತ ನಿರೂಪಕಿ ಅನುಶ್ರೀ ತಂಡ ಗೆದ್ದಿರುವುದು.

ಗದಗ: ಕಿತ್ತು ತಿನ್ನುವ ಬಡತನ ಹಾಗೂ ಆರ್ಥಿಕ ಸಮಸ್ಯೆ ನಡುವೆಯೇ ತನ್ನ ಕಲೆಯನ್ನು ವ್ಯಕ್ತಪಡಿಸಿ ಮೂಲಕ ಜಿಲ್ಲೆಯ ಯುವ ಪ್ರತಿಭೆ ನಾಡಿನ ಜನಮನ ಗೆದ್ದಿದ್ದಾನೆ.

ಝೀ ಕನ್ನಡದ ಪ್ರಸಿದ್ದ ರಿಯಾಲಿಟಿ ಶೋ ಕಾಮಿಡಿ ಕಿಲಾಡಿ ಪ್ರೀಮಿಯರ್ ಲೀಗ್ ನಲ್ಲಿ ಹಾಸ್ಯದ ನಟನೆ ಮೂಲಕ ಮನೆ ಮಾತಾಗುತ್ತಿರುವ ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣದ ಯುವ ಉತ್ಸಾಹಿ ಕಾಮಿಡಿಯನ್ ಮಾಂತೇಶ ಕರಮಣ್ಣವರ ಭಾಗವಹಿಸಿದ್ದ ಖ್ಯಾತ ನಿರೂಪಕಿ ಅನುಶ್ರೀಯವರ ತಂಡ ಗೆಲುವು ಸಾಧಿಸಿದ್ದು, ಈ ತಂಡದಲ್ಲಿ ಮಾಂತೇಶ ಎನ್ನುವ ಪ್ರತಿಭೆ ತನ್ನ ನಟನೆಯ ಮೂಲಕ ಕಲಾರಸಿಕರ ಮನಸೆಳೆದಿದ್ದಾನೆ.

ಕಲೆ ಎನ್ನುವದು ಯಾರ ಸ್ವತ್ತಲ್ಲ ಈ ಮಾತು ಅಕ್ಷರಶಃ ಗದಗ ಜಿಲ್ಲೆ ಲಕ್ಷ್ಮೇಶ್ವರದ ಮಾಂತೇಶ ಎಂ. ಕರಮಣ್ಣವರಗೆ ಒಪ್ಪುತ್ತದೆ ಅವರಿಗೆ ಕುಟುಂಬದ ಹಿನ್ನೆಲೆ ಯಾರು ಕಲಾವಿದರು ಇರಲಿಲ್ಲ ಇವರು ತಮ್ಮ ಸ್ವಂತ ಬಲದಿಂದ ಕಲೆಯನ್ನು ಕಲಿತಿದ್ದಾರೆ. ಸಾಧಿಸಿಬೇಕು ಎಂದರೆ ಛಲ ಕಠಿಣ ಶ್ರಮ ಹೊಂದಿದ್ದರೆ ಏನನ್ನಾದರು ಸಾಧನೆ ಮಾಡಬಹುದು ಎನ್ನುವುದನ್ನು ತೋರಿಸಿಕೊಟ್ಟಿರುವ ಈ ಕಲಾವಿದ ಬಾಲ್ಯದಿಂದ ಕಷ್ಟದಲ್ಲಿ ಬೆಂದು ಈಗ ಅರಳಿದ್ದಾನೆ.

ಜಿಲ್ಲೆಯ ಲಕ್ಷ್ಮೇಶ್ವರದ ಈ ಪೋರ ಮಾಂತೇಶ ಕರಮಣ್ಣವರ ತಂದೆ ಮಲ್ಲೇಶಪ್ಪ, ತಾಯಿ ಗಂಗವ್ವ ಎನ್ನುವ ಈ ದಂಪತಿಯ ಮುದ್ದಿನ ಇರುವ ಏಕೈಕ ಪುತ್ರನನ್ನು ಅಭಿಲಾಷೆ ತಕ್ಕಂತೆ ಬೆಳೆಸಲು ಶ್ರಮಿಸುತ್ತಿರುವ ತಂದೆ-ತಾಯಿಯ ಪ್ರೀತಿಯಲ್ಲಿ ಬೆಳೆಸಿದ್ದಾರೆ ಮಗನೂ ದೊಡ್ಡ ಸಾಧನೆ ಮಾಡಬೇಕು ಎಂಬ ಹಿರಿದಾಸೆ ಹೊಂದಿ ಮಗನಿಗೆ ಕಲಿಯಲು ಯಾವುದೇ ಅಡ್ಡಿ ಪಡಿಸದೆ ಅವನಿಗೆ ಯಾವುದು ಆಸಕ್ತಿ ಇದೆಯೋ ಅದನ್ನು ಕಲಿಸಲು ತಾವು ಕಷ್ಟಪಟ್ಟು ಹಣ ನೀಡಿ ಕಲಿಸಿದ್ದಾರೆ.

ಈ ಬಡ ಕುಟುಂಬ ಚಿಕ್ಕದಾಗಿ ಇಡ್ಲಿ ವಡಾ, ದೋಸೆ ಮಾರುವ ಅಂಗಡಿ ಇಟ್ಟಿಕೊಂಡಿದ್ದು ಈ ವ್ಯಾಪಾರದಿಂದ ಬಂದಿರುವ ಲಾಭದಿಂದ ಜೀವನ ನಡೆಸುತ್ತಿದ್ದಾರೆ. ಮಾಂತೇಶ ವ್ಯಾಸಂಗ ಮಾಡುತ್ತಾ ತನ್ನ ತಂದೆಗೆ ಹೋಟೆಲ್ ನಲ್ಲಿ ಸಹಾಯ ಮಾಡುತ್ತಾ ಬೆಳೆದಿದ್ದಾನೆ. ಇದರ ಜೊತೆಗೆ ಇವನಿಗೆ ಡ್ಯಾನ್ಸ್ ಅಂದರೆ ತುಂಬಾ ಆಸಕ್ತಿ ಇದ್ದು, ಶಾಲಾ ಕಾಲೇಜು ಸೇರಿದಂತೆ ಜಿಲ್ಲೆಯ ಅನೇಕ ಸಾಂಸ್ಕೃತಿಕ ಮನರಂಜನೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ನೃತ್ಯವನ್ನು ಮಾಡಿರುವ ಇವನು ಈಗ ಝೀ ಕನ್ನಡ ವಾಹಿನಿಯ ಕಾಮಿಡಿ ಕಿಲಾಡಿ ಎನ್ನುವ ವೇದಿಕೆಯಲ್ಲಿ ಕಲಾ ಪ್ರೇಕ್ಷಕರನ್ನು ಮೋಡಿ ಮಾಡುತ್ತಿರುವುದು ನಿಜಕ್ಕೂ ಅಭಿನಂದನೀಯ.

ಅಲ್ಲದೆ ಗದಗ ಸಂಭ್ರಮ , ಪುಲಗೇರಿ ಉತ್ಸವ, ಬೆಂಗಳೂರನಲ್ಲಿ ಡ್ಯಾನ್ಸ ಪ್ರದರ್ಶನ ಕೊಡುವ ಮೂಲಕ ಹಲವು ಪ್ರಶಸ್ತಿಗಳನ್ನು ಮೂಡಿಗೆರಿಸಿಕೊಂಡಿದ್ದು, ನೃತ್ಯ,ಕರಾಟೆ ಸೇರಿದಂತೆ ಅನೇಕ ವಿಧದ ಪ್ರತಿಭೆ ಹೊಂದಿರುವ ಈ ಪ್ರತಿಭೆ ಶಾಲಾ ಮಟ್ಟದ, ಜಿಲ್ಲಾ ಮಟ್ಟದ, ವಿಭಾಗ ಮಟ್ಟದ ಮತ್ತು ರಾಜ್ಯಮಟ್ಟದ ಸ್ಪರ್ಧೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರಶಸ್ತಿ ಹೊತ್ತು ತಂದಿದ್ದನು ಪದಕ,ಪಾರಿತೋಷಕ, ಪ್ರಶಸ್ತಿ ಪತ್ರಗಳನ್ನು ಪಡೆದಿದ್ದ ಲೆಕ್ಕವೇ ಇಲ್ಲ. ಪೂರ್ವ ಪ್ರಾಥಮಿಕ ಹಂತದಿಂದಲೇ ಧೈರ್ಯದಿಂದ ಪ್ರತಿಯೊಂದು ಆಟೋಟಗಳಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪ್ರತಿಭೆ ಮೆರೆದಿದ್ದ ಇವನು, ಈಗ ಝೀ ಕನ್ನಡ ವಾಹಿನಿಯ ಕಾಮಿಡಿ ಕಿಲಾಡಿ ವೇದಿಕೆಯಲ್ಲಿ ಅವರು ಭಾಗವಹಿಸಿದ ತಂಡಕ್ಕೆ ಗೆಲುವು ತಂದುಕೊಟ್ಟಿದ್ದಾನೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಮಾಂತೇಶ ಇವರು ನೃತ್ಯ, ನಟನೆ ಹಾಗೂ ಕರಾಟೆ ಮಾಡಬಲ್ಲವನಾಗಿದ್ದು, ಇದರಿಂದ ಪ್ರತಿಯೊಂದು ಎಪಿಸೋಡಿನಲ್ಲಿ ತೀರ್ಪುಗಾರರ ಮೆಚ್ಚುಗೆ ಗಳಿಸಿರುವುದೆ ಇದಕ್ಕೆ ಸಾಕ್ಷಿಯಾಗಿದೆ.

ಶಾಲೆ ಕಲಿಯುವ ಸಂದರ್ಭದಲ್ಲಿ ಹುಬ್ಬಳ್ಳಿಗೆ ದಿನನಿತ್ಯ ಶಾಲೆ ಮುಗಿಸಿಕೊಂಡು ಡ್ಯಾನ್ಸ್ ಕಲಿಯಲು ಹೋಗುತ್ತಿದ್ದ ಮಾಂತೇಶ ಇವನಿಗೆ ಡ್ಯಾನ್ಸ್ ಶೋನಲ್ಲಿ ಸ್ಪರ್ಧಿಸಬೇಕು ಎನ್ನುವ ಮಹದಾಸೆ ಹೊಂದಿದ್ದ ಆದರೆ ಇವನಿಗೆ ಕಾಮಿಡಿ ಕಿಲಾಡಿ ಶೋನಲ್ಲಿ ಸ್ಪರ್ಧಿಸುವ ಅವಕಾಶ ದೊರೆಯಿತು.

ನೃತ್ಯ ಸೈ ನಟನೆಗೂ ಸೈ ಎನಿಸಿಕೊಂಡ ಇವನೂ ಕಾಮಿಡಿ ಕಿಲಾಡಿಯಲ್ಲಿ ಸ್ಪರ್ಧಿಸಿ ಜಿಲ್ಲೆಯ ಕೀರ್ತಿ ಬೆಳಗಿಸಿದ್ದಾನೆ. ಕನ್ನಡದ ರಿಯಾಲಿಟಿ ಶೋ ಡಿಕೆಡಿಗೆ ಆಯ್ಕೆ ಆಗಬೇಕು ಎನ್ನುವ ಆಸೆ ಇರುವ ಇವನಿಗೆ ಡಿಕೆಡಿ ಹಾಗೂ ಕಾಮಿಡಿ ಕಿಲಾಡಿ ಮಹಾಸಂಗಮ ವೇದಿಕೆಯಲ್ಲಿ ಭಾಗವಹಿಸಿ, ಡ್ಯಾನ್ಸ್‌ನಲ್ಲಿ ಸೈ ಎನಿಸಿಕೊಂಡಿದ್ದಾರೆ.

ಅನೇಕ ಬಾರಿ ಆಡಿಷನ್ ಕೊಟ್ಟರು ಅದೃಷ್ಟ ಕೈ ಹಿಡಿಯಲಿಲ್ಲ, ಡ್ಯಾನ್ಸ ನಲ್ಲಿ ಕೈ ಕೊಟ್ಟರು ಝೀ ಕನ್ನಡದ ಕಾಮಿಡಿ ರಿಯಾಲಿಟಿ ಶೋ, ಕಾಮಿಡಿ ಕಿಲಾಡಿಗಳು ಪ್ರಿಮಿಯರ ಲೀಗ್ ನಲ್ಲಿ ಅದೃಷ್ಟ ಕೈ ಹಿಡಿದಿದ್ದು ರಾಜ್ಯದ ಜನತೆಯನ್ನು ಹಾಸ್ಯದ ಹೊನಲುನಲ್ಲಿ ತೆಲಿಸುವ ಮೂಲಕ ಎಲ್ಲರ ಮನ ಗೆದ್ದಿದ್ದಾರೆ. ಡ್ಯಾನ್ಸ್ ಕಲಿಯಬೇಕು ಎಂದು ಗದಗ ನಗರಕ್ಕೆ ಬಂದಾಗ ಸೋಮಶೇಖರ ಚಿಕ್ಕಮಠ ಎಂಬುವರು ಪರಿಚಯವಾಗಿ

ಗದಗದ ನಟರಂಗದಲ್ಲಿ ಇವನಿಗೆ ನಟನೆ ಕಲಿಯಲು ವೇದಿಕೆ ಕಲ್ಪಿಸಿಕೊಟ್ಟರು.

> ಮಗನು ಡ್ಯಾನ್ಸ್ ಹಾಗೂ ನಟನೆಯಲ್ಲಿ ಸಾಧಿಸಿ ಊರಿನ ಹೆಸರನ್ನು ತರಬೇಕು ಅವನು ಚಿಕ್ಕವನಿದ್ದಾಗಿನಿಂದ ಡ್ಯಾನ್ಸ್ ಹಾಗೂ ನಟನೆ ಮನರಂಜನೆ ಕಾರ್ಯಕ್ರಮ ಕೊಡುವ ಮೂಲಕ ಗಮನ ಸೆಳೆದಿದ್ದ ಅದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕು ಎನ್ನುವುದು ನಮ್ಮ ಆಸೆಯಾಗಿದೆ.
>
> -ಗಂಗವ್ವ, ಮಾಂತೇಶ ತಾಯಿ

> ಕಲಿಸಿದ ಗುರುಗಳು, ತಂದೆ ತಾಯಿಗಳು ಹಿರಿಯರು ಅನೇಕರ ಪ್ರೋತ್ಸಾಹ ಕೊಟ್ಟದ್ದರ ಪರಿಣಾಮ ಈ ಹಂತಕ್ಕೆ ಬೆಳೆಯಲು ಸಾಧ್ಯವಾಗಿದ್ದು, ಗದಗ ಜಿಲ್ಲೆಯಿಂದ ಕನ್ನಡ ಚಿತ್ರರಂಗದಲ್ಲಿ ನಟನಾಗಬೇಕು ಎಂಬುವುದು ಬಹಳ ಆಸೆ ಇದೆ.
>
> -ಮಾಂತೇಶ ಕರಮಣ್ಣವರ,
> ಝೀ ಕನ್ನಡದ ಕಾಮಿಡಿ ಕಿಲಾಡಿಗಳು ಗೆದ್ದಿರುವ ಯುವಕ

ನಟರಂಗದಲ್ಲಿ ನಟನೆ (ಆಕ್ಟಿಂಗ್)ಮಾಡುವುದು ಕಲಿ ಎಂದು ಧೈರ್ಯ ಕೊಟ್ಟರು ಅದೇ ರೀತಿ ಗದಗದಲ್ಲಿ ಇರುವ ಪ್ರಸಿದ್ಧ ಮಠಗಳಲ್ಲಿ ದಿನನಿತ್ಯ ಊಟ ಗೆಳೆಯರ ಜೊತೆಗೆ ಅಡುಗೆ ಮಾಡಿಕೊಂಡು ಕಷ್ಟಪಟ್ಟು ನಟರಂಗದಲ್ಲಿ ಸತತವಾಗಿ 6 ವರ್ಷದಿಂದ ನಟನೆ ಮಾಡುವ ಮೂಲಕ ಎಲ್ಲರ ಗಮನ ಸೆಳೆದಿದ್ದ ಯುವಕ ಇವನಿಗೆ ಉತ್ತರ ಕರ್ನಾಟಕದ ಹಾಸ್ಯ ಕಲಾವಿದ ಉಮೇಶ ಕಿನ್ನಾಳ ಗುರುಗಳಾಗಿ ಎಲ್ಲಾ ರೀತಿಯ ನಟನೆಯ ಆಯಾಮಗಳನ್ನು ಹೇಳಿಕೊಟ್ಟಿದನ್ನು ನೆನಪಿಸಿಕೊಳ್ಳುತ್ತಾನೆ.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಶ್ರೀ ತಾಯಿ ಪಾರ್ವತಿ ಮಕ್ಕಳ ಬಳಗ ಶಾಲೆಯಲ್ಲಿ ಹಾಗೂ ಗದಗನ ಕೆ ಎಲ್ ಇ ಸಂಸ್ಥೆಯ ಜಗದ್ಗುರು ತೊಂಟದಾರ್ಯ ಕಾಲೇಜನಲ್ಲಿ ಪಿ ಯು ಸಿ ಓದಿರುವ ಇವನು ಸದ್ಯ ಅದೇ ಕಾಲೇಜನಲ್ಲಿ ಪದವಿ ಓದುತ್ತಿದ್ದಾನೆ. ಅಲ್ಲದೆ ಕರಾಟೆಯಲ್ಲಿ ಅಂತಾರಾಷ್ಟ್ರೀಯ ಸಂಸ್ಥೆ ಮಾನ್ಯತೆ ಪಡೆದ ಮತ್ತು ಕೇಂದ್ರ ಸರಕಾರ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದಲೂ ಮಾನ್ಯತೆ ಪಡೆದ ಸಂಸ್ಥೆಯೊಂದರಿಂದ ಕರಾಟೆಯಲ್ಲಿನ ಎಲ್ಲಾ ಹಂತದ ಬೆಲ್ಟ್‌ಗಳನ್ನು ಪಡೆದಿದ್ದಾನೆ.

ವಂಚನೆ ಪ್ರಕರಣ; ಪ್ರಹ್ಲಾದ ಜೋಶಿ ಕೈವಾಡವಿಲ್ಲ

ಹುಬ್ಬಳ್ಳಿ: ಕಳೆದೆರಡು ದಿನಗಳಿಂದ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿಯವರ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿರುವವರ ಬಗ್ಗೆ ಸ್ವತಃ, ಪ್ರಕರಣದ ಕುರಿತು ದೂರುದಾರೆ ಆಗಿರುವ ಸುನೀತಾ ಚೌಹಾಣ ಸ್ಪಷ್ಟನೆ ನೀಡಿದ್ದು, ಪ್ರಕರಣದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಹೆಸರಿಲ್ಲ ಅದಕ್ಕೂ ಇವರಿಗೂ ಸಂಬಂಧವೇ ಇಲ್ಲ ಎಂದಿದ್ದಾರೆ.

ಈ ಕುರಿತು ಸ್ಪಷ್ಟನೆ ನೀಡಿದ್ದು ಸುನಿತಾ ಅವರು, ಈ ವಿಷಯದಲ್ಲಿ ಪ್ರಲ್ಹಾದ ಜೋಶಿಯವರ ಪಾತ್ರ ಏನು ಇಲ್ಲವೆಂದು, ಸಾರಿ ಸಾರಿ ಹೇಳಿದ್ದಾರೆ.

ಕಾರ್ಯಕರ್ತರು ಹಾಗೂ ಜನತೆಗೆ ನಾನು ನೀಡುವ ಮಾತೇನೆಂದರೆ ಮತನೀಡಿದ ಜನತೆ ಎಂದು ತಲೆ ತಗ್ಗಿಸೊ ಕೆಲಸ ನಾನು ಮಾಡಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ಸ್ಪಷ್ಟನೆ ಕೊಟ್ಟಿದ್ದಾರೆ.

ಅಕ್ಷರಶಃ ಪ್ರಲ್ಹಾದ ಜೋಶಿಯವರ ಮೇಲೆ ಕೆಲವೊಂದಿಷ್ಟು ಜನರು ಹುರುಳಿಲ್ಲದ ಆರೋಪ ಮಾಡುತ್ತಿದ್ದಾರೆ.

ಅದರನ್ವಯ ನುಡಿದಂತೆ ನಡೆಯುವ ನಮ್ಮ ನಾಯಕರು ಕೇಂದ್ರ ಸಚಿವರು ಪ್ರಲ್ಹಾದ ಜೋಶಿಯವರು. ನಾವು ಹಾಗೂ ಕ್ಷೇತ್ರದ ಜನತೆಗೆ ನಿಮ್ಮೊಂದಿಗಿದ್ದೇವೆ ಎಂದು ಅಭಿಮಾನಿಗಳು ಹಾಗೂ ಬಿಜೆಪಿ ಮುಖಂಡರು ಕೇಂದ್ರ ಸಚಿವರ ಜತೆಗೆ ನಿಂತಿದ್ದಾರೆ ೦ದು ಸುನೀತಾ ಚೌಹಾಣ ಸ್ಪಷ್ಟನೆ ನೀಡಿದ್ದಾರೆ.

ವಿಶ್ವ ಶರೀರ ರಚನಾಶಾಸ್ತ್ರ ದಿನ ಸಂಪನ್ನ

ಧಾರವಾಡ: ಎಸ್‌ಡಿಎಂ ವೈದ್ಯಕೀಯ ಮಹಾ ವಿದ್ಯಾಲಯದ ಶರೀರ ರಚನಾಶಾಸ್ತ್ರ ವಿಭಾಗದಿಂದ ವಿಶ್ವ ಶರೀರ ರಚನಾಶಾಸ್ತ್ರ ದಿನವನ್ನು ಆಚರಿಸಲಾಯಿತು. ಎಸ್ .ಡಿ.ಎಂ. ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಡಾ. ನಿರಂಜನ್ ಕುಮಾರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಜೆಎನ್‌ಎಂಸಿ ಬೆಳಗಾವಿ ಕಾಲೇಜಿನ ಶರೀರ ರಚನಾ ಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ.ವೀರೇಶ ಕುಮಾರ ಶಿರೋಳ ಅವರು, ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ತಮ್ಮ ಕಲಿಕೆಗೆ ಮಿಸಲಿಟ್ಟ ಶವವನ್ನು ತಮ್ಮ ಶಿಕ್ಷಕರೆಂದು ಪರಿಗಣಿಸಬೇಕು, ಏಕೆಂದರೆ ಅದು ಮಾನವ ದೇಹದ ಒಳನೋಟಗಳನ್ನು ವಿದ್ಯಾರ್ಥಿಗಳಿಗೆ ಕಲಿಸುತ್ತದೆ.

ದೇಹ ದಾನಿಗಳ ಅವರ ಉದಾತ್ತ ನಿರ್ಧಾರವನ್ನು ಗುರುತಿಸಿ ಗೌರವಿಸಬೇಕು. ವಿದ್ಯಾರ್ಥಿಗಳು ತಮ್ಮ ವೈದ್ಯಕೀಯ ವೃತ್ತಿಯನ್ನು ಆರಂಭದಿಂದಲೇ ಗಂಭೀರವಾಗಿ ಪರಿಗಣಿಸಬೇಕು. ವೈದ್ಯಕೀಯ ವಿದ್ಯಾರ್ಥಿಗಳ ಕಠಿಣ ಪರಿಶ್ರಮವು ಅವರನ್ನು ಉತ್ತಮ ವೃತ್ತಿಪರರನ್ನಾಗಿ ಮಾಡುತ್ತದೆ ಎಂದರು.

ಶರೀರ ರಚನಾ ಶಾಸ್ತ್ರ ದಿನದ ಅಂಗವಾಗಿ ಶರೀರ ರಚನಾ ಶಾಸ್ತ್ರ ಮಾದರಿ ಪ್ರದರ್ಶನ ಮತ್ತು ರಂಗೋಲಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ನಿರ್ದೇಶಕಿಯವರಾದ ಪದ್ಮಲತಾ ನಿರಂಜನ್, ಸಹ ಉಪ ಕುಲತಿಗಳಾದ ವಿ. ಜೀವಂಧರ ಕುಮಾರ, ಕುಲಸಚಿವರಾದ ಡಾ. ಚಿದೇಂದ್ರ ಶೆಟ್ಟರ, ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ರತ್ನಮಾಲಾ ದೇಸಾಯಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಡಾ. ವೀಣಾ ಕುಲಕರ್ಣಿ, ಅತಿಥಿಗಳನ್ನು ಸ್ವಾಗತಿಸಿದರು. ಡಾ. ಸುರೇಶ ಮನಗುತ್ತಿ ಸನ್ಮಾನಿತರನ್ನು ಪರಿಚಯಿಸಿದರು., ಡಾ. ವಿನಯ ಕುಲಕರ್ಣಿ ಕಾರ್ಯಕ್ರಮವನ್ನು ನಿರೂಪಿಸಿದರು. ಡಾ. ರೋಶನಿ ಸದಾಶಿವ ವಂದನಾರ್ಪಣೆ ಸಲ್ಲಿಸಿದರು.

ನಾವು ಸಬಲರಾದರೆ ದೇಶವೂ ಸಬಲ

ಸೂಡಿ ಪ್ರಾಥಮಿಕ ಕೇಂದ್ರದ ವೈದ್ಯಾಧಿಕಾರಿ ಶರಣು ಗಾಣಗೇರ ಅಭಿಪ್ರಾಯ

ಗಜೇಂದ್ರಗಢ: ಯುವ ಸಮೂಹ ದೈಹಿಕ ಮತ್ತು ಮಾನಸಿಕ ಸಬಲರಾಗುವ ಮೂಲಕ ಸಮೃದ್ಧ ರಾಷ್ಟ್ರ ನಿರ್ಮಾಣಕ್ಕೆ ಮುಂದಾಗಬೇಕಿದೆ. ಈ ನಿಟ್ಟಿನಲ್ಲಿ ನಿಜವಾದ ಪ್ರತಿಭೆ ಅನಾವರಣ ಗ್ರಾಮೀಣ ಭಾಗಗಳಿಂದಲೇ ಎಂದು ಸೂಡಿ ಪ್ರಾಥಮಿಕ ಕೇಂದ್ರದ ವೈದ್ಯಾಧಿಕಾರಿ ಶರಣು ಗಾಣಗೇರ ಹೇಳಿದರು.

ಪಟ್ಟಣದ ಎಸ್.ಎಂ. ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಪ್ರಸಕ್ತ ವರ್ಷದ ವಿದ್ಯಾರ್ಥಿಗಳ ಸ್ವಾಗತ, ಸಾಂಘಿಕ, ಸಾಂಸ್ಕೃತಿಕ, ಕ್ರೀಡೆ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪದವಿ ಹಂತದಲ್ಲಿ ವಿದ್ಯಾರ್ಥಿಗಳು ಪರಿಶ್ರಮದಿಂದ ಅಧ್ಯಯನ ನಡೆಸಿ, ಕುಟುಂಬದ ಸದಸ್ಯರ ನಂಬಿಕೆ ಉಳಿಸಿಕೊಳ್ಳಬೇಕು. ತಂದೆ ತಾಯಿಯವರ ಪರಿಶ್ರಮ ಸಾರ್ಥಕ ಪಡಿಸಬೇಕು ಅದು ಪದವಿ ಹಂತದಲ್ಲಿ ಮಾತ್ರ ಸಾಧ್ಯ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಪ್ರತಿಭಾವಂತರಾಗಿದ್ದು, ಉತ್ತಮ ವೇದಿಕೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಪ್ರಸ್ತುತ ದಿನಗಳಲ್ಲಿ ಕೆಲವು ಮಕ್ಕಳಿಗೆ ಅಪಾರವಾದ ಪ್ರತಿಭೆ ಇರುತ್ತದೆ. ಆದರೆ ಸರಿಯಾದ ವೇದಿಕೆ ದೊರೆಯುವುದಿಲ್ಲ. ಇನ್ನು ಕೆಲವು ವಿದ್ಯಾರ್ಥಿಗಳಿಗೆ ಎಲ್ಲ ಸೌಕರ್ಯಗಳಿದ್ದರೂ ಸಹ ಉತುಕತೆ ಕಳೆದುಕೊಂಡಿರುತ್ತಾರೆ. ಹೀಗಾಗಿ ಸಿಕ್ಕ ಅವಕಾಶವನ್ನು ಸದ್ವಿನಿಯೋಗಿಸಿಕೊಳ್ಳಬೇಕು ಎಂದರು.

ಗಜೇಂದ್ರಗಢ ಪಟ್ಟಣದ ಎಸ್.ಎಂ. ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಪ್ರಸಕ್ತ ವರ್ಷದ ಸಾಂಘಿಕ, ಸಾಂಸ್ಕೃತಿಕ, ಕ್ರೀಡೆ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ವೈದ್ಯಾಧಿಕಾರಿ ಶರಣು ಗಾಣಗೇರ ಚಾಲನೆ ನೀಡಿದರು.

ಪದವಿ ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಎಸ್.ಎನ್ ಶಿವರಡ್ಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲೇಜಿನ ವಿದ್ಯಾರ್ಥಿಗಳು ಪ್ರತಿಭಾವಂತರಾಗಿದ್ದು, ಇಲ್ಲಿ ಕಲಿತ ನೂರಾರು ವಿದ್ಯಾರ್ಥಿಗಳು ಉತ್ತಮ ಸ್ಥಾನದಲ್ಲಿ, ಸಮಾಜದ ಗೌರವಾಧರಕ್ಕೆ ಪಾತ್ರರಾಗಿದ್ದಾರೆ. ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಸಾಕಷ್ಟು ಅನೂಕೂಲಗಳಿದ್ದು, ಅವುಗಳನ್ನು ಸಮರ್ಪಕವಾಗಿ ಸದುಪಯೋಗ ಪಡಿಸಿಕೊಂಡು ಸರ್ವಾಂಗೀಣ ಅಭಿವೃದ್ಧಿ ಹೊಂದಬೇಕು ಎಂದರು.

ಎನ್ ಎಸ್‌ಎಸ್ ಅಧಿಕಾರಿ ಎಸ್.ಕೆ. ಕಟ್ಟಿಮನಿ, ಎಂ.ಎಲ್. ಕ್ವಾಟಿ, ಎಸ್.ಎಸ್. ಚುಂಚಾ, ಎಸ್.ಎಚ್. ಪವಾರ, ಎಲ್.ಕೆ. ವದ್ನಾಳ, ಎಲ್.ಕೆ. ಹಿರೇಮಠ, ಮೌಲಾ ರಾಮತಾಳ, ಎಸ್.ವಿ. ಪತ್ತಾರ, ಮಹಾದೇವಿ ವಕ್ರಾಣಿ, ಯು.ಎಸ್. ತಿಮ್ಮನಗೌಡ, ಎಸ್.ಆರ್. ರಜಪೂತ, ಪ್ರತಾಪ ಸೇರಿದಂತೆ ಇನ್ನಿತರರು ಇದ್ದರು.

ತಾಲೂಕಿನ ಹೆಸರೇ ಹಾಳಾಯ್ತು: ಮಹೇಶ

ಗದಗ: ಲಕ್ಷ್ಮೇಶ್ವರ ಪಟ್ಟಣದ ವಿಷಯವನ್ನು ರಾಷ್ಟ್ರೀಯ ಸುದ್ದಿಯನ್ನಾಗಿ ಮಾಡಿ ಪಟ್ಟಣದ ಘನತೆ ಗೌರವ ಹಾಳೂ ಮಾಡಿರುವ ತಾಲೂಕ ಆಡಳಿತ ಮಂಡಳಿ ಹಾಗೂ ಪೊಲೀಸ್ ಇಲಾಖೆಯ ವೈಫಲ್ಯತೆಯೇ ಕಾರಣ ಎಂದು ಕರವೇ(ಪ್ರವೀಣ ಶೆಟ್ಟಿ) ಬಣದ ತಾಲೂಕ ಅಧ್ಯಕ್ಷ ಮಹೇಶ ಬ ಕಲಘಟಗಿ ಆರೋಪಿಸಿದರು.

ಅವರು ಈ ಕುರಿತು ಪತ್ರಿಕಾ ಹೇಳಿಕೆಯನ್ನು ನೀಡಿ, ದಸರಾ ಹಬ್ಬದ ವೇಳೆ ಮುಸ್ಲಿಂ ಯುವಕರು ಗೋಸಾವಿ ಸಮಾಜದ ಯುವಕರ ಮೇಲೆ ಹಲ್ಲೆ ಮಾಡಿರುವ ಕುರಿತು ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆದರೆ ಠಾಣಾಧಿಕಾರಿಗಳು ಮುಸ್ಲಿಂ ಯುವಕರನ್ನು ಮಾತ್ರ ಬಂಧಿಸಿ, ಗೋಸಾವಿ ಯುವಕರನ್ನು ಏಕೆ ಬಂಧಿಸಲಿಲ್ಲಾ, ಗೋಸಾವಿ ಸಮಾಜದ ಪರವಾಗಿ ಶ್ರೀರಾಮ ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಖಾನಪ್ಪನವರ ಅವರು ಮಾನ್ಯ ಠಾಣಾಧಿಕಾರಿಗಳ ಅಮಾನತ್ತಿಗೆ ಅ.19ರಂದು ಲಕ್ಷ್ಮೇಶ್ವರ ಬಂದ್ ಕರೆ ನೀಡುತ್ತಾರೆ. ಇನ್ನೊಬ್ಬ ಹೋರಾಟಗಾರರಿಂದ ನಿಮ್ಮ ಪರವಾಗಿ ಹೇಳಿಕೆ ಕೊಡಿಸಿದ್ದು ಏಕೆ ಎಂದು ಪ್ರಶ್ನಿಸಿದರು. ಪೊಲಿಸ್ ಇಲಾಖೆಯ ವಿರುದ್ಧ ದಿಕ್ಕಾರ ಕೂಗಿದವರನ್ನು ಬಂಧನ ಮಾಡಿ, ಪೊಲೀಸ್ ಪರ ಘೋಷಣೆ ಕೂಗಿದವರನ್ನು ಬಂಧನ ಏಕೆ ಮಾಡಿಲ್ಲ ಹೋರಾಟದಲ್ಲಿ ಸಂಬಂಧ ಪಡದವರಿಗೆ ನನ್ನ ಸೇರಿದಂತೆ ಹಲವರಿಗೆ ನಿಮ್ಮ ಇಲಾಖೆಯಿಂದ ನೋಟೀಸ್ ಜಾರಿಮಾಡಿದ್ದಾರೆ.

ಯಾವ ಕಾರಣಕ್ಕೆ, ನಿಮ್ಮ ವೈಫಲ್ಯವನ್ನು ಖಂಡಿಸಿ ನಮ್ಮ ವೇದಿಕೆ ಅ.23 ರಂದು ಮಾನ್ಯ ಉತ್ತರ ವಲಯ ನೀರೀಕ್ಷಕರು ಬೆಳಗಾವಿ ಇವರು ಹೋರಾಟದ ಸ್ಥಳಕ್ಕೆ ಆಗಮಿಸುವವರೆಗೂ ಶ್ರೀಸೋಮೇಶ್ವರ ಪಾದಗಟ್ಟಿಯ ಬಳಿ ಇರುವ ಮಹಾತ್ಮ ಗಾಂಧಿ ಪ್ರತಿಮೆಯ ಬಳಿ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳುತ್ತೇವೆಂದು ಹೇಳಿದರು.

ರಾಜ್ಯೋತ್ಸವ ಅರ್ಥಪೂರ್ಣವಾಗಿ ಆಚರಿಸಿ: ಡಿಸಿ

ಗದಗ: ಜಿಲ್ಲೆಯಲ್ಲಿ ನ.1 ರಂದು ಕನ್ನಡ ರಾಜ್ಯೋತ್ಸವವನ್ನು ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಕನ್ನಡ ರಾಜ್ಯೋತ್ಸವ ಅಚರಣೆಯ ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಯಾವುದೇ ಲೋಪಗಳಿಲ್ಲದಂತೆ ಆಚರಿಸಲು ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು ಸಮಿತಿಯವರು ವಿಶೇಷ ಆಸಕ್ತಿಯಿಂದ ಕೆಲಸ ನಿರ್ವಹಿಸಬೇಕೆಂದು ಸೂಚಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಕನ್ನಡ ರಾಜ್ಯೋತ್ಸವದ ದಿನದ ಹಿಂದಿನ ದಿನ ಹಾಗೂ ಕನ್ನಡ ರಾಜ್ಯೋತ್ಸವದ ದಿನ ಎರಡು ದಿನ ಸರ್ಕಾರಿ ಕಚೇರಿ ಹಾಗೂ ನಗರದ ವಿವಿಧ ವೃತ್ತಗಳಲ್ಲಿ ಸ್ವಚ್ಚತೆಯೊಂದಿಗೆ ವಿದ್ಯುತ್ ದೀಪಾಲಂಕಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದರು.

ಅಅದು ಬೆಳಿಗ್ಗೆ 7.30 ಗಂಟೆಗೆ ಗದಗ ಬೆಟಗೇರಿ ನಗರಸಭೆ ಪದವಿ ಪೂರ್ವ ಕಾಲೇಜ ಆವರಣದಿಂದ ತಾಯಿ ಭುವನೇಶ್ವರಿಯ ಮೆರವಣಿಗೆಯು ವಿವಿಧ ವೃತ್ತಗಳಲ್ಲಿ ಸಂಚರಿಸಿ ನಂತರ ಜಿಲ್ಲಾ ಕ್ರೀಡಾಂಗಣಕ್ಕೆ ಬಂದು ತಲುಪಲಿದೆ. ಬೆ.9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ.ಪಾಟೀಲ ಅವರು ಸಾರ್ವಜನಿಕ ಧ್ವಜಾರೋಹಣ

ಕಾರ್ಯಕ್ರಮ ನೆರವೇರಿಸುವರು. ಕಾರ್ಯಕ್ರಮಕ್ಕೆ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿರಬೇಕಾಗುತ್ತದೆ. ನಂತರ ಪೊಲೀಸ್ ಪಡೆ, ಹೋಮಗಾರ್ಡ, ಭಾರತ ಸೇವಾ ದಳಗಳಿಂದ ಪರೇಡ್, ಪಥ ಸಂಚಲನ ಜರುಗಲಿವೆ. ಕಾರ್ಯಕ್ರಮದ ಸ್ಥಳದ ಸ್ವಚ್ಛತೆ ಹಾಗೂ ಅತಿಥಿಗಳಿಗೆ ಆಸನದ ವ್ಯವಸ್ಥೆ , ಅಲ್ಪೋಪಹಾರದ ವ್ಯವಸ್ಥೆ ಕುರಿತು ಕ್ರಮ ಕೈಗೊಳ್ಳಬೇಕು. ಶಿಷ್ಟಾಚಾರದನ್ವಯ ಅತಿಥಿ ಗಣ್ಯರ ಆಹ್ವಾನ ಹಾಗೂ ಆಮಂತ್ರಣ ಪತ್ರಿಕೆ ಮುದ್ರಣಕ್ಕೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ವಿವಿಧ ರಂಗಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಪರಿಣಿತರಿಗೆ ಇದೇ ಸಂದರ್ಭದಲ್ಲಿ ಸನ್ಮಾನಿಸುವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಜಿಲ್ಲಾ ಪಂಚಾಯತ್‌ದ ಯೋಜನಾಧಿಕಾರಿ ನಿರ್ಮಲಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟ್ಟೂರ, ಗದಗ ಬೆಟಗೇರಿ ನಗರಸಭೆ ಪೌರಾಯುಕ್ತ ಮಹೇಶ ಪೋತದಾರ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ಯುವಜನ ಮತ್ತು ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕ ಶರಣು ಗೋಗೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯ ಸ್ವಾಮಿ ಬಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ.ಎಲ್. ಬಾರಾಟಕ್ಕೆ, ಲೋಕೋಪಯೋಗಿ ಇಲಾಖೆ ಅಧಿಕಾರಿ ಪಾಟೀಲ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಕಾಂಗ್ರೆಸ್ ಡೋಲಾಯಮಾನ ಸ್ಥಿತಿ: ಶೆಟ್ಟರ್

ಗದಗ: ದೇಶದಲ್ಲಿ ಕಾಂಗ್ರೆಸ್ ಪಕ್ಷ ಡೋಲಾಯಮಾನ ಸ್ಥಿತಿಯಲ್ಲಿದ್ದು, ದಿನದಿಂದ ದಿನಕ್ಕೆ ಕಾಂಗ್ರೆಸ್ ಪಕ್ಷ ಶೋಚನೀಯ ಪರಿಸ್ಥಿಯಲ್ಲಿ ಒದ್ದಾಡುತ್ತಿದೆ, ಅದಕ್ಕೆ ಸೂಕ್ತ ನಾಯಕತ್ವದ ಕೊರತೆ ಇದೆ ಕರ್ನಾಟಕದಲ್ಲಿ ಸಿ.ಎಂ. ಸಿದ್ದರಾಮಯ್ಯನವರು ಅಧಿಕಾರಕ್ಕೆ ಅಂಟಿಕೊಅಡು ಕುಳಿತುಕೊಂಡಿದ್ದರೆ, ಅವರನ್ನು ಕೆಳಗಿಳಿಸಲು ಅವರ ಪಕ್ಷದವರೆ ಸನ್ನದ್ದರಾಗಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಜಗದೀಶ ಶೆಟ್ಟರ್ ಹೇಳಿದರ

ಅವರು ಗದಗ ಜಿಲ್ಲೆಯ ಲಕ್ಷ್ಮೇಶ್ವರ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಕರ್ನಾಟಕದಲ್ಲಿ ಮೂಡಾ ಹಗರಣ, ವಾಲ್ಮೀಕಿ ನಿಗಮದ ಹಗರಣ ಇವೆಲ್ಲವೂಗಳು ಆದರೂ ಸಹ ಸಿದ್ದರಾಮಯ್ಯನವರು ಅಧಿಕಾರಕ್ಕೆ ಅಂಟಿಕೊಂಡು ಕುಳಿತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಹಗರಣಗಳ ಬಗ್ಗೆ ಲೋಕಾಯುಕ್ತ, ಇಡಿ ತನಿಖೆ ನಡೆಯುತ್ತಿದೆ,

ಆದರೆ ಲೋಕಾಯುಕ್ತ ಸರಕಾರದ ಅಧೀನದಲ್ಲಿರುವದರಿಂದ ಸಿಎಂ ಅವರು ಅಧಿಕಾರದಲ್ಲಿದ್ದರೆ ಸರಿಯಾದ ತನಿಖೆ ಆಗುವದಿಲ್ಲ, ಅದಕ್ಕಾಗಿ ಅವರು ರಾಜೀನಾಮ ನೀಡಿ ತನಿಖೆ ಎದುರಿಸಿ ನಿರಪರಾಧಿ ಎಂದು ಸಾಭೀತಾದ ಮೇಲೆ ಮತ್ತೆ ಅವರೇ ಮುಖ್ಯಮಂತ್ರಿಗಳಾಗಲಿ ಎಂದ ಅವರು ಹಗರಣಗಳ ಸರಮಾಲೆ ಹೊರಬೀಳುತ್ತಲೆ ಬಿಜೆಪಿ ಸಿದ್ದರಾಮಯ್ಯನವರ ರಾಜೀನಾಮೆಗೆ ಒತ್ತಾಯಿಸುತ್ತಿದೆ ಎಂದು ಹೇಳಿದರು. ಅವರಿಗೆ ಬೆಂಬಲ ಸೂಚಿಸುವುದಾಗಿ ಕಾಂಗ್ರೆಸ್‌ನವರು ಸಿದ್ದರಾಮಯ್ಯನವರಿಗೆ ಬೆಂಬಲ ಸೂಚಿಸುವದಾಗಿ ಹೇಳಿಕೆ ನೀಡುತ್ತಾ ಒಳಗೊಳಗೆ ಮುಖ್ಯಮಂತ್ರಿಯಾಗಲು ಕನಸು ಕಾಣುತ್ತಿದ್ದಾರೆ ಎಂದು ಟೀಕಿಸಿದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಕುಟುಂಬದ ವಿಚಾರವಾಗಿ ಈಗಾಗಲೇ ಅವರು ಸ್ಪಷ್ಟನೆ ನೀಡಿದ್ದಾರೆ ಅದು ತನಿಖೆ ಆದ ಮೇಲೆ ಸತ್ಯಾಸತ್ಯತೆ ಹೊರಬೀಳಲಿದೆ ಎಂದು ಹೇಳಿದ ಅವರು ಶಿರಹಟ್ಟಿ ಕ್ಷೇತ್ರ ಮಾಜಿ ಶಾಸಕ ರಾಮಣ್ಣ ಲಮಾಣಿ ಮತ್ತೆ ಬಿಜೆಪಿ ಪಾಳಯಕ್ಕೆ ಬರುವ ಸೂಚನೆಗಳಿವೆಯೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ನಮ್ಮ ಹಳೆಯ ಸ್ನೇಹಿತರು, ಇಲ್ಲಿಗೆ ಬಂದಿರುವ ವಿಷಯ ತಿಳಿದು ಬಂದು ಸ್ವಾಗತಿಸಿದ್ದಾರೆ, ಪಕ್ಷಕ್ಕೆ ಸೇರ್ಪಡೆ ಕುರಿತು ಯಾವುದೇ ಚರ್ಚೆ ನಡೆದಿಲ್ಲ, ಮುಂದಿನ ದಿನಗಳಲ್ಲಿ ನೋಡೋಣ ಎಂದು ಮಾರ್ಮಿಕವಾಗಿ ಉತ್ತರಿಸಿದರು.

ಈ ಸಂದರ್ಭದಲ್ಲಿ ಶಾಸಕ ಡಾ.ಚಂದ್ರು ಲಮಾಣಿ, ಮುಖಂಡರಾದ ಎಂ.ಎಸ್ .ದೊಡ್ಡಗೌಡ್ರ, ಸುನೀಲ ಮಹಾಂತಶೆಟ್ಟರ, ನಿಂಬಣ್ಣ ಮಡಿವಾಳರ, ನವೀನ ಬೆಳ್ಳಟ್ಟಿ, ದುಂಡೇಶ ಕೊಟಗಿ, ಗಂಗಾಧರ ಮೆಣಸಿನಕಾಯಿ ಸೇರಿದಂತೆ ಅನೇಕರಿದ್ದರು.

ಸಮಾಚಾರ ಸಣ್ಣದಲ್ಲ

ಲಿಂಗಾಯತ ಸ್ವತಂತ್ರ ಧರ್ಮ ನಿಶ್ಚಿತ

ಬೀದರ್: ಬಸವಣ್ಣನವರ ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಆಗುವ ಕಾಲ ಬಂದೇಬರುತ್ತದೆ ಎಂದು ಭಾಲ್ಕಿಯ ಹಿರೇ ಸಂಸ್ಥಾನ ಮಠದ ಬಸವ ಲಿಂಗ ಪಟ್ಟದೇವರು ಸ್ವಾಮೀಜಿ ವಿಶ್ವಾಸ ವ್ಯಕ್ತ ಪಡಿಸಿದ್ದಾರೆ. ಬಸವ ಕಲ್ಯಾಣದ ಕಲ್ಯಾಣಪರ್ವ ವೇದಿಕೆ ಕಾರ್ಯಕ್ರಮ ದಲ್ಲಿ ಪಟ್ಟದೇವರು ಸ್ವಾಮೀಜಿ ಸ್ವತಂತ್ರ ಧರ್ಮದ ಕೂಗು ಎತ್ತಿದ್ದಾರೆ. ಬಸವಣ್ಣನವರ ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಆಗಬಾರದು ಅಂತ ಅನೇಕ ಶಕ್ತಿಗಳು ವಿರೋಧ ಮಾಡುತ್ತಿವೆ. ಆದ್ರೆ ಲಿಂಗಾಯತ ಧರ್ಮ ಸ್ವತಂತ್ರ ಧರ್ಮವಾಗುವ ಕಾಲ ಬಂದೇ ಬರುತ್ತೆ ಎಂದು ಸ್ವಾಮೀಜಿ ಹೇಳಿದ್ದಾರೆ.

200 ಸ್ವಾಮೀಜಿಗಳ ನಿಯೋಗ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿಮಾಡಿ ಮನವಿ ಸಲ್ಲಿಸಿದ ಬಳಿಕ ಸರಕಾರ ಕೆಲವೇ ದಿನಗಳಲ್ಲಿ ಬಸವಣ್ಣರನ್ನು ನಾಯಕ ಎಂದು ಘೋಷಣೆ ಮಾಡಿತು. ಅದೇ ರೀತಿ ಲಿಂಗಾಯತ ಸ್ವತಂತ್ರ ಧರ್ಮ ಆಗುವ ಕಾಲ ಬರುವುದು ನಿಶ್ಚಿತ. ನಾವೆಲ್ಲಾ ನಿರಾಸೆಯಾಗದೇ ಸ್ವತಂತ್ರ ಧರ್ಮಕ್ಕೆ ಹೋರಾಡಬೇಕು ಜಿಲ್ಲೆ, ತಾಲೂಕು, ಗ್ರಾಮಗಳಲ್ಲಿ ಲಿಂಗಾಯತ ಜಾಗೃತಿ ಸಮಾವೇಶ ಮಾಡಬೇಕು ಎಂದು ಕರೆ ನೀಡಿದ್ದಾರೆ.

ಮಣ್ಣು ಕುಸಿದು ಕಾರ್ಮಿಕ ಸಾವು

ಗದಗ: ಜಿಲ್ಲೆಯಲ್ಲಿ ಅವಳಿ ನಗರದ ಪೈಪ್‌ಲೈನ್ ದುರಸ್ತಿ ವೇಳೆ ಮಣ್ಣು ಕುಸಿದು ಕಾರ್ಮಿಕರನೋರ್ವ ಸಾವನ್ನಪ್ಪಿದ್ದು, ಮತ್ತೋರ್ವ ಗಾಯಗೊಂಡ ಘಟನೆ ನಗರದ ಕೋರ್ಟ್ ಸರ್ಕಲ್ ಬಳಿ ನಡೆದಿದೆ. ಘಟನೆಯಲ್ಲಿ ಗಾಯಗೊಂಡಿದ್ದ ಕಾರ್ಮಿಕ ನಜೀರ್ ಸಾಬ್ (44) ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ. ಮತ್ತೋರ್ವ ಕಾರ್ಮಿಕ ಮಂಜುನಾಥ್ ಜಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ನಗರದ ಕೋರ್ಟ್ ಸರ್ಕಲ್ ಬಳಿ ಗ್ಯಾಸ್ ಪೈಪ್‌ಲೈನ್ ದುರಸ್ತಿ ವೇಳೆ, ಗದಗ-ಬೆಟಗೇರಿ ಅವಳಿ ನಗರದ 24★ 7 ಪೈಪ್‌ಲೈನ್ ಹಾನಿ ಆಗಿತ್ತು. ಶನಿವಾರ ರಾತ್ರಿ ಆ ನೀರಿನ ಪೈಪ್ ದುರಸ್ತಿ ಮಾಡಲು ಈ ಇಬ್ಬರು ಕಾರ್ಮಿಕರು ಮುಂದಾಗಿದ್ದರು. ಏಕಾಏಕಿ ಭೂಮಿ ಕುಸಿತದಿಂದಾಗಿ ಮಣ್ಣಿನ ಅಡಿಯಲ್ಲಿ ಇಬ್ಬರು ಕಾರ್ಮಿಕರು ಸಿಲುಕಿದ್ದರು. ಸ್ಥಳೀಯರ ಕಾರ್ಯಾಚರಣೆ ಮೂಲಕ ಅವರನ್ನು ಜಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಚಿಕಿತ್ಸೆ ಫಲಿಸದೇ ನಜೀರಸಾಬ್ ಕಾರ್ಮಿಕ ಸಾವನ್ನಪ್ಪಿದ್ದಾನೆ.

ಮಗನಿಂದಲೇ ಹೆತ್ತಮ್ಮನ ಹತ್ಯೆ

ಕಲಬುರಗಿ: ಸ್ವಂತ ಮಗನೇ ತನ್ನ ತಾಯಿಯನ್ನು ಕೊಲೆ ಮಾಡಿದ ಘಟನೆ ಜಿಲ್ಲೆಯ ಚಿತ್ತಾಪುರ ತಾಲೂಕಿನ ರಾಜೋಳ್ಳ ಗ್ರಾಮದಲ್ಲಿ ನಡೆದಿದೆ.

ರಾಜೋಳ್ಳ ಗ್ರಾಮದ ದೇವಕಮ್ಮ ಪೂಜಾರಿ (65) ಕೊಲೆಯಾದ ಮಹಿಳೆ.ಆಕೆಯ ಮಗ ಜೆಟ್ಟೆಪ್ಪ ಪೂಜಾರಿ ಕೊಲೆ ಮಾಡಿದ ಆರೋಪಿ. ಜೆಟ್ಟೆಪ್ಪ ತನ್ನ ಪತ್ನಿ ಮಾಲಾಶ್ರೀಗೆ ಹೊಡೆಬಡೆ ಮಾಡುತ್ತಿದ್ದರಿಂದ ನಾಲ್ಕೈದು ವರ್ಷದ ಹಿಂದೆ ತವರು ಮನೆಯಾದ ಹಂದರಕಿಗೆ ಹೋಗಿದ್ದಳು. ತಾಯಿ ದೇವಕಮ್ಮನ ಜತೆ ಜೆಟ್ಟಪ್ಪ ವಾಸವಾಗಿದ್ದ. ಎರಡು ದಿನಗಳ ಹಿಂದೆ ದೇವಕಮ್ಮಳು ಪುತ್ರಿಯ ಊರು ಲಕ್ಷ್ಮೀಪುರವಾಡಿಗೆ ಹೋಗಿ, ಶುಕ್ರವಾರ ವಾಪಸ್ ಬಂದಿದ್ದಳು. ಇದಕ್ಕೆ ಆಕ್ಷೇಪಿಸಿದ ಜೆಟ್ಟೆಪ್ಪ ಮೂರು ದಿನ ಊರಿಗೆ ಹೋದರೆ ಊಟ ಹೇಗೆ ಮಾಡುವುದು, ಸರಿಯಾಗಿ ಊಟ ನೀಡುತ್ತಿಲ್ಲ ಎಂದು ತಾಯಿಗೆ ಬಡಿಗೆಯಿಂದ ಹೊಡೆದಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಪ್ರಕರಣದ ಆರೋಪಿ ಜಟ್ಟೆಪ್ಪ ತಂದೆ ದೊಡ್ಡಬೀರಪ್ಪ ಪೂಜಾರಿ ರಾಜೋಳ ಪ್ರಕರಣ ದಾಖಲಾದ 6 ಗಂಟೆಯ ಒಳಗಾಗಿ ಬಂಧಿಸಿ ನ್ಯಾಯಾಂಗ ಬಂಧನ ಒಪ್ಪಿಸಲಾಗಿದೆ.

ಮಂಗಳೂರಲ್ಲಿ ರೈಲು ಹಳಿ ತಪ್ಪಿಸಲು ಸಂಚು?

ಮಂಗಳೂರು: ಮಂಗಳೂರಿನ ಉಳ್ಳಾಲ ತಾಲೂಕಿನ ತೊಕ್ಕುಟ್ಟುವಿನಲ್ಲಿ ರೈಲು ಹಳಿ ತಪ್ಪಿಸಲು ಯತ್ನಿಸಿರುವ ಘಟನೆ ನಡೆದಿದೆ. ಮಂಗಳೂರು- ಕೇರಳ ನಡುವಿನ ರೈಲು ಹಳಿ ತಪ್ಪಿಸಲು ಸಂಚು ನಡೆದಿರುವುದು ಭಾರೀ ಆತಂಕ ಹುಟ್ಟಿಸಿದೆ. ರೈಲ್ವೇ ಹಳಿಗಳಲ್ಲಿ ಕಲ್ಲುಗಳನ್ನಿಡಲಾಗಿತ್ತು. ರೈಲ್ವೇ ಹಳಿಯ ಎರಡೂ ಬದಿಗಳಲ್ಲಿ ಆಗಂತುಕರಿಬ್ಬರು ಜಲ್ಲಿಕಲ್ಲು ಗಳನ್ನಿಟ್ಟು ಪರಾರಿಯಾಗಿದ್ದಾರೆ. ಎರಡು ರೈಲುಗಳು ಚಲಿಸುವ ಸಂದರ್ಭ ದೊಡ್ಡ ಸದ್ದು ಕೇಳಿ ಸ್ಥಳೀಯರು ಆತಂಕಗೊಂಡಿದ್ದರು. ಇಬ್ಬರು ಅಗಂತುಕರನ್ನು ತೊಕ್ಕೊಟ್ಟು ಓರ್ವ ಬ್ರಿಡ್ಜ ನಿವಾಸಿ ಮಹಿಳೆಯರು ಕಂಡಿದ್ದರು. ರೈಲೊಂದು ಕೇರಳ ಕಡೆಗೆ ತೆರಳಿದ ವೇಳೆ ದೊಡ್ಡ ಸದ್ದು ಕೇಳಿಸಿತು. ಬಳಿಕ ಇನ್ನೊಂದು ರೈಲು ಚಲಿಸುವಾಗ ಮತ್ತೊಮ್ಮೆ ದೊಡ್ಡ ಸದ್ದು ಕೇಳಿತು. ಪರಿಣಾಮ ಸ್ಥಳೀಯ ಕೆಲವು ಮನೆಗಳಲ್ಲಿಯೂ ಭಾರೀ ಕಂಪನ ಉಂಟಾಯಿತು.

{ **ಕೆ.ಎಸ್.ಈಶ್ವರಪ್ಪ** } ಮಾಜಿ ಡಿಸಿಎಂ

ಬಿಜೆಪಿಯಿಂದ ನನಗೆ ಅನ್ಯಾಯವಾಗಿಲ್ಲ. ಕೆಲವರ ಹೊಂದಾಣಿಕೆ ರಾಜಕಾರಣ ದಿಂದ ಕಾರ್ಯಕರ್ತರಿಗೆ ಅನ್ಯಾಯ ವಾಗುತ್ತಿದೆ. ಪಕ್ಷದ ವ್ಯವಸ್ಥೆಯಲ್ಲಿದ್ದಾಗ ಹಿರಿಯರ ಮಾತಿಗೆ ಬೆಲೆಕೊಟ್ಟು, ಬ್ರಿಗೇಡ್ ಚಟುವಟಿಕೆ ನಿಲ್ಲಿಸಿದ್ದೆ. ಈ ಬಾರಿ ಬ್ರಿಗೇಡ್ ಸಂಘಟಿಸುವುದು ನಿಶ್ಚಿತ.

ವರುಣನ ಅಬ್ಬರಕ್ಕೆ 5 ಮನೆ ಗೋಡೆ ಕುಸಿತ | ಹತ್ತಾರು ಮನೆಗಳು, ತೋಟಕ್ಕೆ ನುಗ್ಗಿದ ನೀರು | ನಾನಾ ಬೆಳೆ ನಾಶ

ರಾಜ್ಯದಲ್ಲಿ ನಿಲ್ಲದ ಮಳೆ: ಜನಜೀವನ ಅಸ್ತವ್ಯಸ್ತ

ಬೆಂಗಳೂರು: ಬಂಗಾಳ ಕೊಲ್ಲಿಯಲ್ಲಿ ಎದ್ದಿರುವ ಡಾನಾ ಚಂಡಮಾರುತದ ಪರಿಣಾಮವಾಗಿ ಬೆಂಗಳೂರು, ಕರಾವಳಿ, ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆಯಾಗುತ್ತಿದೆ. ಇನ್ನೂ 2-3 ದಿನಗಳ ಕಾಲ ಮಳೆ ಪರಿಸ್ಥಿತಿ ಮುಂದುವರಿಯಲಿದೆ. ವರುಣನ ಅಬ್ಬರದಿಂದಾಗಿ ಅಪಾರ ಪ್ರಮಾಣದ ಬೆಳೆ ನಷ್ಟವುಂಟಾಗಿದ್ದು, ಅನೇಕ ಹಳ್ಳಿಗಳಿಗೆ ಜಲಕಂಟಕ ಎದುರಾಗಿದೆ. ಭಾನುವಾರವೂ ಮಳೆಯ ಅರ್ಭಟ ಮುಂದುವರಿದಿದ್ದು ಮನೆಗಳಿಗೆ ನೀರು ನುಗ್ಗಿದ್ದರಿಂದ ಜನರು ಸಂಕಷ್ಟಕ್ಕೆ ಗುರಿಯಾಗಿದ್ದಾರೆ.

ಉಕ್ಕಿ ಹರಿದ ತುಂಗಾ ಕಾಲುವೆ: ಶಿವಮೊಗ್ಗ ನಗರದಲ್ಲಿ ಚಂಡಮಾರುತದ ಪರಿಣಾಮ ಜಿಲ್ಲೆಯಲ್ಲಿ ಭಾನುವಾರ ಮುಂಜಾನೆಯಿಂದ ಸತತ ಐದು ಗಂಟೆಗಳ ಕಾಲ ಮಳೆ ಸುರಿದಿದೆ.ನಗರ ಮಧ್ಯಭಾಗದಲ್ಲಿ ಹರಿದು ಹೋಗುವ ತುಂಗಾ ಕಾಲುವೆ ಉಕ್ಕಿ ಹರಿದಿದೆ. ಇದರಿಂದಾಗಿ ವಿನೋಬನಗರ ಮೊದಲನೇ ಹಂತದಲ್ಲಿ 5 ಮನೆಗಳ ಗೋಡೆ ಕುಸಿದಿವೆ. ಹೊಸಮನೆಯಲ್ಲಿ ಹಾದುಹೋಗುವ ರಾಜಕಾಲುವೆಯ ನೀರು ವೆಂಕಟೇಶ ನಗರದ ಹಲವೆಡೆ ನುಗ್ಗಿದೆ. ಇದರಿಂದ ಮನೆಗಳು ಜಲಮ ಯವಾಗಿದ್ದು, ಮೂರು ಅಡಿಯಷ್ಟು ನೀರು ನಿಂತಿದೆ. ಮನೆಗಳಲ್ಲಿನ ದಿನಸಿ ಸಾಮಗ್ರಿ ನೀರು ಪಾಲಾಗಿದೆ. ಹಾಗೆಯೇ ಗೋಪಾಲ ಬಡಾವಣೆಯಲ್ಲಿ ರಸ್ತೆಗಳ ಮೇಲೆಯೇ ನೀರು ಉಕ್ಕಿ ಹರಿಯುತ್ತಿದ್ದು, ವಾಹನ ಸಂಚಾರ ಸ್ಥಗಿತವಾಗಿದೆ.

ಗ್ರಾಮಾಂತರ ಭಾಗದಲ್ಲೂ ಅನಾಹುತ: ಶಿವಮೊಗ್ಗ ತಾಲೂಕು ಬಿಕ್ಕೊನಹಳ್ಳಿಯಲ್ಲಿ ಬೆಟ್ಟದ ಮೇಲಿಂದ ಹರಿದುಬರುವ ನೀರು ಶಿವಮೊಗ್ಗ-ಸವಳಂಗ ರಸ್ತೆ ಮೇಲೆ ಹರಿಯುತ್ತಿದೆ. ಇದರಿಂದಾಗಿ ಕೆಲಕಾಲ ರಸ್ತೆ ಸಂಚಾರ ಸ್ಥಗಿತವಾಗಿತ್ತು. ಗಾಜನೂರಿನ ಸಕ್ರೆಬೈಲು ಬಳಿಯ ಮೀನಿನ ಹೋಟೆಲ್ ಜಲಾವೃತಗೊಂಡಿದೆ. ತುಂಗಾ ಕಾಲುವೆಯ ನೀರು ನವೋದಯ ಶಾಲೆಯ ಬಳಿ ನೀರು ಉಕ್ಕಿ ಹರಿದು ಅಡಕೆ ತೋಟ ಹಾಗೂ ಭತ್ತದ ಗದ್ದೆಗೆ ನುಗ್ಗಿದೆ.

ಮಲೆನಾಡಿನಂತಾದ ಹೊಸಪೇಟೆ ಪಟ್ಟಣ: ವಿಜಯನಗರದ ಹೊಸಪೇಟೆ ಪಟ್ಟಣ ಮಿನಿ ಮಲೆನಾಡಿನಂತಾಗಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ನಿರಂತರ ಮಳೆಯಾಗುತ್ತಿದ್ದು, ಇಡೀ ಹೊಸಪೇಟೆ ತಾಲೂಕು ಮಂಜಿನಿಂದ ಆವರಿಸಿದೆ. ಐತಿಹಾಸಿಕ ಜೋಳದ ರಾಶಿ ಗುಡ್ಡ ಸೇರಿದಂತೆ ನಾನಾ ಕಡೆ ಮಂಜಿನ ವಾತಾವರಣಕ್ಕೆ ಜನರ ಸಂತಸ ಇಮ್ಮಡಿಸಿದೆ.ಮಂಜಿನಲ್ಲೇ ಕುಳಿತು ಪ್ರಕೃತಿ ಸೌಂದರ್ಯ ಸವಿಯುತ್ತಿದ್ದಾರೆ.

ಶಿವಮೊಗ್ಗದಲ್ಲಿ ಮಳೆಗೆ ದೇವಸ್ಥಾನ ಸುತ್ತುವರಿದಿರುವ ನೀರು.

ಜಲಾವೃತಗೊಂಡ ಚಳ್ಳಕೆರೆ ತಾಲೂಕಿನ ಬಂಗಾರ ದೇವರಹಟ್ಟಿ ಗ್ರಾಮ.

ಮೆಕ್ಕೆಜೋಳ ಬೆಳೆ ನಾಶ: ರೈತರಿಗೆ ಸಂಕಷ್ಟ

ಕಳೆದ ಕೆಲವು ದಿನಗಳಿಂದ ಸುರಿದ ಧಾರಾಕಾರ ಮಳೆಗೆ ಗುಡ್ಡೆ ಹಾಕಿದಲ್ಲೇ ಮೆಕ್ಕೆಜೋಳದ ತೆನೆಗಳು ಮೊಳಕೆ ಒಡೆಯುತ್ತಿದೆ. ಇದರಿಂದಾಗಿ ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಿನ ಮಲ್ಲೂರು ಗ್ರಾಮದ ರೈತರು ಕಂಗಾಲಾಗಿದ್ದಾರೆ. ಮೆಕ್ಕೆಜೋಳ ಬೆಳೆದ ರೈತರ ಪರಿಸ್ಥಿತಿಯಂತೂ ತೀರ ಹದಗೆಟ್ಟಿದೆ. ಗ್ರಾಮದ ಶಿವನಗೌಡ ಸೊಲಬಗೌಡ್ರ ತಮ್ಮ ಮೂರು ಎಕರೆ ಜಮೀನಿನಲ್ಲಿ ಮೆಕ್ಕೆಜೋಳ ಬೆಳೆದಿದ್ದು, ಭರ್ಜರಿ ಫಸಲು ಕೂಡ ಬಂದಿತ್ತು. ಮೆಕ್ಕೆಜೋಳ ಕಟಾವು ಮಾಡಿ ರಾಶಿಮಾಡಲು ಗುಡ್ಡೆ ಹಾಕಿದ್ದರು. ಆದರೆ ನಿರಂತರವಾಗಿ ಸುರಿದ ಧಾರಾಕಾರ ಮಳೆಯಿಂದ ಮೆಕ್ಕೆಜೋಳ ಗುಡ್ಡೆ ಹಾಕಿದಲ್ಲೇ ಮೊಳಕೆ ಒಡೆಯುತ್ತಿದೆ. ಜಿಲ್ಲೆಯಲ್ಲಿ ಶೇ.80ರಷ್ಟು ರೈತರು ಮೆಕ್ಕೆಜೋಳ ಬೆಳೆಯುತ್ತಾರೆ. ನಿರಂತರ ಮಳೆಗೆ ಅನ್ನದಾತರು ಕಂಗಾಲಾಗಿದ್ದಾರೆ.

ಬ್ಯಾಡಗಿ ತಾಲೂಕಿನ ಮಲ್ಲೂರು ಗ್ರಾಮದಲ್ಲಿ ಧಾರಾಕಾರ ಮಳೆಗೆ ಗುಡ್ಡೆ ಹಾಕಿದಲ್ಲೇ ಮೆಕ್ಕೆಜೋಳದ ತೆನೆಗಳು ಮೊಳಕೆ ಒಡೆಯುತ್ತಿ ರುವುದು.

ಕೋಡಿ ಬಿದ್ದ ಕೆರೆಗಳು

ದಾವಣಗೆರೆ ಜಿಲ್ಲೆಯಲ್ಲಿ ಚಳ್ಳಕೆರೆ ವಾರ ದಿಂದ ಸುರಿಯುತ್ತಿರುವ ನಿರಂತರ ಮಳೆಗೆ ತಾಲೂಕಿನ ಹಲವು ಕೆರೆಗಳು ಕೋಡಿ ಬಿದ್ದಿವೆ. ನನ್ನಿವಾಳ ಗ್ರಾಮ ಪಂಚಾಯಿತಿ ವ್ಯಾಪ್ತಿ ಯ ಅಜ್ಜನಗುಡಿ ಕೆರೆ, ಸೋಮಗುದ್ದು ಗ್ರಾಮ ಪಂಚಾಯಿತಿ ವ್ಯಾಪ್ತಿ ಹಿರೇಮ ದುರೆ ಕೆರೆ, ದೊಡ್ಡೇರಿ ಚಿಕ್ಕಕೆರೆ, ನಗರಂಗೆರೆ ಕೆರೆ ತುಂಬಿ ಕೋಡಿ ಬಿದ್ದು ನೀರು ರಭಸವಾಗಿ ಮೀರಾಸಾಬಿಹಳ್ಳಿ ಗ್ರಾಮದ ರಾಣಿಕೆರೆಗೆ ಹರಿಯುತ್ತಿದೆ. ಅಜ್ಜನಗುಡಿಕೆರೆ ಕೋಡಿಯಿಂದ ಚಳ್ಳಕೆರೆ ನಗರದ ಪಾವಗಡ ರಸ್ತೆ ಮಾರ್ಗ ದ ಹಳ್ಳದ ಮೂಲಕ ಹೆಚ್ಚು ನೀರು ಹರಿಯು ತ್ತಿರುವುದರಿಂದ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ. ನಗರಪ್ರ ದೇಶಕ್ಕೆ ಬರಲು ಗ್ರಾಮೀಣ ಪ್ರದೇಶದ ಜನರು ಹರಸಹಾಸ ಪಡುವಂತಾಗಿದೆ. ತಳಕು ಗ್ರಾಮದ ಭೀಮನಕೆರೆ, ಹೊಸ ಹಳ್ಳಿ ಕೆರೆಗಳು ಕೂಡ ಕೋಡಿ ಬಿದ್ದಿದ್ದು, ಬೆಳೆ ಪ್ರದೇಶಕ್ಕೆ ನೀರು ನುಗ್ಗಿದೆ. ಇದರಿಂದ ಮೆಕ್ಕೆಜೋಳ, ಈರುಳ್ಳಿ ಬೆಳೆ ಹಾನಿಯಾಗಿದೆ.

ಜಲಪಾತದಂತೆ ಹರಿದ ನೀರು

ಚಿಕ್ಕಮಗಳೂರು ಪ್ರಸಿದ್ಧ ಪ್ರವಾಸಿತಾಣ ಹಾಗೂ ಧಾರ್ಮಿಕ ಕ್ಷೇತ್ರವಾದ ಮುಳ್ಳಯ್ಯನಗಿರಿ ಪ್ರದೇಶ ದಲ್ಲಿ ಭಾರಿ ಪ್ರಮಾಣದಲ್ಲಿ ಮಳೆಯಾಗಿದೆ. ಮುಳ್ಳಯ್ಯನಗಿರಿ ಪ್ರದೇಶಕ್ಕೆ ಸಾಗುವ ಮಾರ್ಗ ದಲ್ಲಿನ ರಸ್ತೆ ಮೇಲೆ ಎರಡು ಅಡಿಗಳಷ್ಟು ನೀರು ಹರಿದಿದೆ. ಗುಡ್ಡದ ಇಳಿಜಾರು ಪ್ರದೇಶದಲ್ಲಿಂದ ಮಳೆಯ ನೀರು ಜಲಪಾತದಂತೆ ಹರಿದು ಬಂದಿದ್ದು, ಇಲ್ಲಿಗೆ ತೆರಳಿದ್ದ ಪ್ರವಾಸಿಗರು ಮಳೆಯಲ್ಲಿ ನೆನೆದು ತೊಪ್ಪೆಯಾಗಿದ್ದಾರೆ. ಪ್ರವಾಸಿಗರೊಬ್ಬರು ತಮ್ಮ ಮೊಬೈಲ್ ನಲ್ಲಿ ಗಿರಿ ಪ್ರದೇಶದ ರಸ್ತೆ ಮೇಲೆ ನೀರು ಹರಿಯುತ್ತಿರುವು ದನ್ನು ವಿಡಿಯೊ ಮಾಡಿದ್ದು, ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗುತ್ತಿದೆ.

ಕುಸಿದು ಬಿದ್ದ ಮನೆ

ಕಳೆದ ನಾಲ್ಕೈದು ದಿನಗಳಿಂದ ಸುರಿಯುತ್ತಿರುವ ಮಳೆಗೆ ಮನೆಯೊಂದು ಕುಸಿದುಬಿದ್ದ ಘಟನೆ ಮಂಡ್ಯ ಜಿಲ್ಲೆಯ ಕೆಆರ್ ಪೇಟೆ ತಾಲೂಕಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಚಿನ್ನೇನಹಳ್ಳಿ ಗ್ರಾಮದ ಪಾರ್ವತಮ್ಮ ಎಂಬ ಮಹಿಳೆಗೆ ಸೇರಿದ್ದ ಮನೆ ಮಳೆಯಿಂದ ಕುಸಿದು ಬಿದ್ದಿದೆ. ಕಳೆದ ನಾಲ್ಕು ದಿನಗಳಿಂದ ಮಳೆ ಸುರಿಯು ತ್ತಿರುವ ಕಾರಣ ಪಾರ್ವತಮ್ಮ ಅವರ ಮನೆ ಶನಿವಾರ ರಾತ್ರಿ ಕುಸಿದು ಬಿದ್ದಿದೆ. ಇದರಿಂದ ಪಾರ್ವತಮ್ಮ ಪ್ರಾಣಪಾಯದಿಂದ ಕೂದಲೆಳೆಯ ಅಂತರದಲ್ಲಿ ಪಾರಾಗಿದ್ದಾರೆ. ಮನೆ ಕುಸಿದು ಬಿದ್ದ ಕಾರಣ ಮನೆಯಲ್ಲಿ ಇದ್ದ ವಸ್ತುಗಳೆಲ್ಲವೂ ನಾಶವಾಗಿವೆ. ಪಾರ್ವತಮ್ಮ ಅವರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



ಕುಮುಟಾ ಬಳಿಯಿರುವ ಸಮುದ್ರದಲ್ಲಿ ಶನಿವಾರ ರಾತ್ರಿ ಆಗಸದಲ್ಲಿ ಕಂಡು ಬಂದ ಧೂಮಕೇತುವಿನ ದೃಶ್ಯ

ಯೋಗೇಶ್ವರ್‌ಗೆ ಗೆಲ್ಲುವ ಅವಕಾಶ

ಹುಬ್ಬಳ್ಳಿ: ಚುನಾವಣೆ ಸ್ಪರ್ಧೆ ಮುಖ್ಯವಲ್ಲ, ಗೆಲುವು ಮುಖ್ಯ. ಸಿ.ಪಿ ಯೋಗೇಶ್ವರ್ ಚನ್ನಪಟ್ಟಣದಲ್ಲಿ ಗೆಲ್ಲುವ ಅಭ್ಯರ್ಥಿ. ಚನ್ನಪಟ್ಟಣದಲ್ಲಿ ಅವರಿಗೆ ಗೆಲುವಿನ ವಾತಾವರಣವಿದೆ ಅವರೇ ಎನ್‌ಡಿಎ ಅಭ್ಯರ್ಥಿಯಾಗಬೇಕು ಎನ್ನುವ ಮೂಲಕ ಸಿಪಿವೈಗೆ ವಿಧಾನಸಭೆಯ ಪ್ರತಿಪಕ್ಷ ಉಪನಾಯಕ ಅರವಿಂದ್ ಬೆಲ್ಲದ ಮತ್ತೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಯೋಗೇಶ್ವರ್ ಮೇಲೆ ಜನರಿಗೆ ಪ್ರೀತಿ, ಅನುಕಂಪವಿದೆ. ಕುಮಾರಸ್ವಾಮಿ ಅವರು ಅತ್ಯಂತ ಪ್ರಬುದ್ಧ ರಾಜಕಾರಣಿ. ಅವರು ಅತ್ಯುತ್ತಮ ನಿರ್ಧಾರ ತೆಗೆದುಕೊಳ್ಳುತ್ತಾರೆ. ಕುಮಾರಸ್ವಾಮಿ ಬಳಿಕ ಅಲ್ಲಿ ಎನ್‌ಡಿಎಯಿಂದ ಹೊಸ ಅಭ್ಯರ್ಥಿ ಆಗಬೇಕು. ಈ ಹಿಂದೆ ಕುಮಾರಸ್ವಾಮಿ ಮತ್ತು ಡಾ. ಮಂಜುನಾಥ್ ಚುನಾವಣೆಯಲ್ಲಿ ಯೋಗೇಶ್ವರ ಒಳ್ಳೆಯ ಕಾರ್ಯ ಮಾಡಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಸಿಪಿವೈಗೆ ಟಿಕೆಟ್ ನೀಡುವ ಭರವಸೆ ಇದೆ ಎಂದರು.

ಅಪಘಾತ; ಸಾವಿನ ಸಂಖ್ಯೆ ಇಳಿಕೆ

← ಮೊದಲಪುಟದಿಂದ

ಅಸುರಕ್ಷಿತ ರಸ್ತೆಗಳು, ಮಿತಿ ಮೀರಿದ ವೇಗ, ಮದ್ಯ ಸೇವನೆ ಸೇರಿದಂತೆ ವಿವಿಧ ಕಾರಣಗಳಿಂದ ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಸಂಭವಿಸಿದ್ದ ರಸ್ತೆ ಅಪಘಾತಗಳಲ್ಲಿ ಸಾಯುವವರ ಸಂಖ್ಯೆಯಲ್ಲಿ ಏರಿಕೆಯಾಗಿತ್ತು. ಹೆಚ್ಚೆಚ್ಚು ಅಪಘಾತ ಸಂಭವಿಸುವ ಹೆದ್ದಾರಿಗಳಲ್ಲಿ ವೇಗದ ಚಾಲನೆ ನಿಗದಿ, ಶಿಸ್ತುಪಥ, ಕಣ್ಣುಕುಕ್ಕುವ ಹೈಬೀಮ್ ಲೈಟ್ ಬಳಕೆಗೆ ಕಡಿವಾಣ, ಬ್ಲಾಕ್ ಸ್ಪಾಟ್‌ಗಳಲ್ಲಿ ಸಿಸಿಟಿವಿ ಅಳವಡಿಕೆ ಸೇರಿದಂತೆ ಮೊದಲಾದ ಕ್ರಮಗಳನ್ನು ಕೈಗೊಂಡ ಪರಿಣಾಮ ಅಪಘಾತಗಳಲ್ಲಿ ಬಲಿಯಾಗುವವರ ಪ್ರಮಾಣ ಕಡಿಮೆಯಾಗಿದೆ.

3 ವರ್ಷಗಳಲ್ಲಿ 23,738 ಸಾವಿರ ಮಂದಿ ಸಾವು: ರಾಜ್ಯದ ವಿವಿಧ ಜಿಲ್ಲೆಗಳಿಗೆ ಹೋಲಿಸಿದರೆ ಬೆಂಗಳೂರು ಹೊರವಲಯ ಹಾಗೂ ಸುತ್ತಲಿನ ರಸ್ತೆಗಳೇ ಅಪಾಯಕಾರಿಯಾಗಿ ಕಂಡು ಬಂದಿವೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 23,738 ಸಾವಿರ ಮಂದಿ ರಸ್ತೆ ಅಪಘಾತಗಳಲ್ಲಿ ಮೃತಪಟ್ಟಿದ್ದಾರೆ. ಬೆಂಗಳೂರು ಜತೆ ಹೊರವಲಯ ಭಾಗಗಳಲ್ಲಿ ಕೈಗಾರಿಕೆ, ಕಂಪನಿಗಳ ನಿರ್ಮಾಣ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರ ಹೆಚ್ಚಾಗುತ್ತಿದ್ದಂತೆ ವಾಹನ ಸವಾರರ ಸಂಖ್ಯೆಯು ಕ್ರಮೇಣ ಹೆಚ್ಚಾಗುತ್ತಿದ್ದು, ರಸ್ತೆ ಅಗಲೀಕರಣ ಸೇರಿದಂತೆ ಇನ್ನಿತರ ಮೂಲಸೌಕರ್ಯ ಕಲ್ಪಿಸದ ಪರಿಣಾಮ ಭೀಕರ ಅಪಘಾತ ಸಂಭವಿಸಿ ಮರಣ ಹೊಂದುವವರ ಸಂಖ್ಯೆ ಏರಿಕೆಯಾಗಿದೆ.

ಚನ್ನಪಟ್ಟಣ; ನೀ ಕೊಡೆ, ನಾ ಬಿಡೆ

← ಮೊದಲಪುಟದಿಂದ

ಇನ್ನೆರೆಡು ದಿನಗಳಲ್ಲಿ ಚನ್ನಪಟ್ಟಣ ಟಿಕೆಟ್ ಫೈನಲ್: ಸರಣಿ ಸಭೆಯ ಬಳಿಕವೂ ಚನ್ನಪಟ್ಟಣ ಅಭ್ಯರ್ಥಿ ವಿಷಯದಲ್ಲಿ ಸ್ಪಷ್ಟ ತೀರ್ಮಾನ ಕೈಗೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಈ ಬಗ್ಗೆ ಮಾತನಾಡಿರುವ ಕೇಂದ್ರ ಸಚಿವ ಕುಮಾರಸ್ವಾಮಿ, ಜೆಡಿಎಸ್ ಮತ್ತು ಬಿಜೆಪಿ ನಡುವೆ ಒಡಕು ಉಂಟು ಮಾಡಬೇಕು ಎಂದು ಕೆಲವರು ಷಡ್ಯಂತ್ರ ರೂಪಿಸಿದ್ದಾರೆ. ಆದರೆ, ಅವರ ಆಸೆ ಈಡೇರುವುದಿಲ್ಲ. ಬೆಂಗಳೂರು ಗ್ರಾಮಾಂತರ ಲೋಕಸಭೆ ಕ್ಷೇತ್ರದಲ್ಲಿ ನಮ್ಮ ಕುಟುಂಬದವರನ್ನೇ ಬಿಜೆಪಿ ಅಭ್ಯರ್ಥಿಯಾಗಿ ನಿಲ್ಲಿಸಿದ್ದೇವೆ. ಹೀಗಾಗಿ ನಮ್ಮ ಮಿತ್ರಪಕ್ಷವೂ ಔದಾರ್ಯ ತೋರಲಿ ಎನ್ನುವ ಆಶಯ ನನ್ನದು. ಅವರು ಔದಾರ್ಯ ತೋರುತ್ತಾರೆ ಎನ್ನುವ ನಂಬಿಕೆ ನನಗಿದೆ ಎಂದರು.

ಯೋಗೇಶ್ವರ್ ಅವರು ನಾಮಪತ್ರ ಸಲ್ಲಿಸುವ ವಿಚಾರ ನನ್ನೊಂದಿಗೆ ಚರ್ಚೆಯಾ ಗಿಲ್ಲ. ಆ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನನ್ನ ಮುಂದೆ ಆ ಕುರಿತು ಪ್ರಸ್ತಾಪವೂ ಬಂದಿಲ್ಲ. ಮಂಗಳವಾರ ಅಥವಾ ಬುಧವಾರ ಟಿಕೆಟ್ ಯಾರಿಗೆ ಸಿಗಲಿದೆ ಎನ್ನುವುದು ಸ್ಪಷ್ಟವಾಗಲಿದೆ ಎಂದು ಹೇಳಿದರು. ಚನ್ನಪಟ್ಟಣ ಟಿಕೆಟ್ ಸಮಸ್ಯೆ ದೆಹಲಿ ಮಟ್ಟದಲ್ಲಿ ಇಲ್ಲ, ಕಳೆದ 2 ಬಾರಿ ಚನ್ನಪಟ್ಟಣ ಕ್ಷೇತ್ರವನ್ನು ನಾನು ಪ್ರತಿನಿಧಿ ಸಿದ್ದೇನೆ. ದೆಹಲಿ ಮಟ್ಟದಲ್ಲಿ ಜೆಡಿಎಸ್ ಕ್ಷೇತ್ರ ಅನ್ನೋದು ಗೊತ್ತಿದೆ ಎನ್ನುವ ಮೂಲಕ ಜೆಡಿ ಎಸ್‌ಗೆ ಟಿಕೆಟ್ ಖಚಿತ ಎನ್ನುವ ಸ್ಪಷ್ಟ ಸಂದೇಶ ರವಾನಿಸಿದರು.

ಜೆಡಿಎಸ್‌ಗೆ ಸೀಟು ಬಹುತೇಕ ಖಚಿತ

ಚನ್ನಪಟ್ಟಣದಿಂದ ನಾಮಪತ್ರ ಸಲ್ಲಿಸಲು ಯೋಗೇಶ್ವರ್ ಸಿದ್ಧತೆ ನಡೆಸಿಕೊಂಡಿದ್ದರೂ, ಜೆಡಿಎಸ್‌ಗೆ ಚನ್ನಪಟ್ಟಣ ಬಿಟ್ಟುಕೊಡಲು ಬಿಜೆಪಿ ವರಿಷ್ಠರೇ ಮಾನಸಿಕವಾಗಿ ಸಜ್ಜಾಗಿದ್ದಾರೆ ಎನ್ನಲಾಗಿದೆ. ಉಪಚುನಾವಣೆಯಲ್ಲಿ ಮೂರಕ್ಕೆ ಮೂರು ಕ್ಷೇತ್ರಗಳಲ್ಲಿಯೂ ಬಿಜೆಪಿಯೇ ಸ್ಪರ್ಧಿಸಿದರೆ ಮೈತ್ರಿಕೂಟದಲ್ಲಿ ಕೆಟ್ಟ ಸಂದೇಶ ರವಾನೆಯಾಗಲಿದೆ. ಆದ್ದರಿಂದ ಚನ್ನಪಟ್ಟಣವನ್ನು ಜೆಡಿಎಸ್ ಬಿಟ್ಟುಕೊಡಲು ದೆಹಲಿ ನಾಯಕರು ತೀರ್ಮಾನಿಸಿದ್ದಾರೆ. ಇದಕ್ಕೆ ಪೂರಕವಾಗಿ ಕುಮಾರಸ್ವಾಮಿ ಅವರು ಮಾತನಾಡಿದ್ದು, 'ಬೆಂಗಳೂರು ಗ್ರಾಮಾಂತರವನ್ನು ನಮ್ಮ ಸಂಬಂಧಿಯನ್ನು ಬಿಜೆಪಿಯಿಂದ ನಿಲ್ಲಿಸಿದ ವರಿಷ್ಠರು ಔದಾರ್ಯ ತೋರಿದ್ದರು. ಇದೀಗ ಚನ್ನಪಟ್ಟಣವನ್ನು ನಮಗೆ ಬಿಟ್ಟುಕೊಟ್ಟು ಔದಾರ್ಯ ತೋರಲಿದ್ದಾರೆ. ಚನ್ನಪಟ್ಟಣದ ಬಗ್ಗೆ ದೆಹಲಿ ನಾಯಕರಿಗೆ ಸ್ಪಷ್ಟತೆಯಿದೆ' ಎನ್ನುವ ಮೂಲಕ ನಿಖಿಲ್ ಸ್ಪರ್ಧೆಯನ್ನು ಖಚಿತಪಡಿಸಿದ್ದಾರೆ.

ಮುಂದುವರಿದ ವಿಮಾನಗಳಿಗೆ ಬಾಂಬ್ ಬೆದರಿಕೆ

← ಮೊದಲಪುಟದಿಂದ

ಎಲ್ಲವೂ ಹುಸಿ ಬೆದರಿಕೆಗಳು ಎಂಬುದು ಖಚಿತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ 7-8 ದಿನಗಳಲ್ಲಿ 70ಕ್ಕೂ ಅಧಿಕ ಬೆದರಿಕೆ ಸಂದೇಶಗಳು ಬಂದಿವೆ. ಭಾರತದ ನಾಗರಿಕ ವಿಮಾನಯಾನ ಕ್ಷೇತ್ರಕ್ಕೆ ಬೆದರಿಕೆ ಸಂದೇಶ ದುಃಸ್ವಪ್ನದಂತಾಗಿದೆ. ಕೆಲವು ಸಂದೇಶ ವಿಮಾನ ನಿಲ್ದಾಣದ ಶೌಚಾಲಯಗಳ ಗೋಡೆಗಳಲ್ಲಿ ಬರೆದಿದ್ದರೆ, ಕೆಲ ಸಂದೇಶಗಳನ್ನು ಸಾಮಾಜಿಕ ಮಾಧ್ಯಮ, ಇಮೇಲ್‌ಗಳಲ್ಲಿ ಕಳುಹಿಸಲಾಗಿದೆ.

ಕರಾಳ ಭಾನುವಾರ ರಾಜ್ಯದಲ್ಲಿ ಒಂದೇ ದಿನ 12 ಮಂದಿ ಸಾವು

ಬೆಂಗಳೂರು: ಕರ್ನಾಟಕಕ್ಕೆ ಭಾನುವಾರ ಕರಾಳ ದಿನವಾಗಿದೆ. ರಾಜ್ಯದ ವಿವಿಧೆಡೆ ಸಂಭವಿಸಿದ ಅವಘಡಗಳಲ್ಲಿ 10 ಜನರು ಮೃತಪಟ್ಟಿದ್ದಾರೆ. ಧಾರವಾಡ, ಹುಬ್ಬಳ್ಳಿ, ಮಡಿಕೇರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅವಘಡಗಳು ಸಂಭವಿಸಿವೆ. ಧಾರವಾಡದ ಸಂಪಿಗೆ ನಗರದ ಬಳಿ ಲಾರಿ ಮತ್ತು ಆಟೋ ಮಧ್ಯೆ ಅಪಘಾತ ಸಂಭವಿಸಿ ಮೂವರು ಮೃಪಟ್ಟಿದ್ದಾರೆ. ಆಟೋಚಾಲಕ ರಮೇಶ್ ಹಂಚಿನಮನಿ (35), ಮರೆವ್ವ ಹಂಚಿನಮನಿ (55) ಪ್ರಣವ್ (06) ಮೃತ ದುರ್ದೈವಿಗಳು. ಮೃತರು ಕೆಲಗೇರಿ ಬಡಾವಣೆ ನಿವಾಸಿಗಳು ಎಂದು ತಿಳಿದು ಬಂದಿದೆ.

ಘಟನೆಯಲ್ಲಿ ರೇಣುಕಾ (25) ಮತ್ತು ಪೃಥ್ವಿ (4) ಎಂಬುವರಿಗೆ ಗಂಭೀರ ಗಾಯವಾಗಿದ್ದು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಟೋ ರೈಲು ನಿಲ್ದಾಣಕ್ಕೆ ಹೊರಟಿತ್ತು. ದಾರಿ ಮಧ್ಯೆ ಬಿಡಾಡಿ ದನಗಳು ಮಲಗಿದ್ದವು. ದನಗಳಿಗೆ ತಪ್ಪಿಸಲು ಹೋಗಿ ಎದುರಿಗೆ ಬರುತ್ತಿದ್ದ ಲಾರಿಗೆ ಆಟೋ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ರಮೇಶ್ ಮತ್ತು ಮರೆವ್ವ ಸ್ಥಳದಲ್ಲೇಮೃತಪಟ್ಟಿದ್ದಾರೆ. ನಂತರ ಚಿಕಿತ್ಸೆ ಫಲಕಾರಿಯಾಗದೆ ಪ್ರಣವ್ ಮೃತಪಟ್ಟಿದ್ದಾನೆ. ಧಾರವಾಡ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಘಟನೆ ನಡೆದಿದೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತ: ಇಬ್ಬರ ಸಾವು

ಹುಬ್ಬಳ್ಳಿ: ಹುಬ್ಬಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೀಕರ ಅಪಘಾತ ಸಂಭವಿಸಿದ್ದು ಇಬ್ಬರು ಮೃತಪಟ್ಟಿದ್ದಾರೆ. ಕಾರು ಡಿಕ್ಕಿಯಾಗಿ ಬೈಕ್‌ನಲ್ಲಿದ್ದ ಶಿವರಾಜ್, ಗದಿಗೆಪ್ಪ ಎಂಬುವರು ಸ್ಥಳದಲ್ಲೇ ಸಾವೀಗಿಡಾಗಿದ್ದಾರೆ. ಮೃತರು ಕುಂದಗೋಳದ ಕುಂಬಾರ ಓಣಿ ನಿವಾಸಿಗಳು ಎಂದು ತಿಳಿದು ಬಂದಿದೆ. ಘಟನಾ ಸ್ಥಳಕ್ಕೆ ಉತ್ತರ ಸಂಚಾರಿ ಠಾಣೆ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ.

ಬೈಕ್ ಅಪಘಾತ: ಒಬ್ಬ ಸಾವು

ಮಡಿಕೇರಿ: ಟಿ.ಟಿ ವಾಹನ ಮತ್ತು ಸ್ಕೂಟಿ ನಡುವೆ ಅಪಘಾತ ಸಂಭವಿಸಿ ಒಬ್ಬರು ಮೃತಪಟ್ಟ ಘಟನೆ ಮಡಿಕೇರಿ ನಗರದ ಚೈನ್ ಗೇಟ್ ಬಳಿ ನಡೆದಿದೆ. ಬೈಕ್ ಸವಾರ ಗಜೇಶ್ವರ್ (42) ಮೃತ ದುರ್ದೈವಿ. ಬೈಕ್ ಹಿಂಬದಿ ಸವಾರ ಕಿಶೋರ್ ಎಂಬುವರಿಗೆ ಗಂಭೀರ ಗಾಯವಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಕಿಶೋರ್ ಅವರನ್ನು ಮಂಗಳೂರು ಅಸ್ಪತ್ರೆಗೆ ದಾಖಲಿಸಲಾಗಿದೆ.

ವಿದ್ಯುತ್ ತಂತಿ ಸ್ಪರ್ಶಿಸಿ ಇಬ್ಬರು ಸಾವು

ವಿದ್ಯುತ್ ತಂತಿ ಸ್ಪರ್ಶಿಸಿ ಇಬ್ಬರು ಮೃತಪಟ್ಟ ಘಟನೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಕೃಷ್ಣಾಪುರ ಗ್ರಾಮದ ಜಯರಾಂ ಎಂಬುವರ ಅಡಕೆ ತೋಟದಲ್ಲಿ ನಡೆದಿದೆ. ಮಧ್ಯಪ್ರದೇಶ ಮೂಲದ ಮೋಹಿತ್ (24), ಕತರ್ವ (38) ಮೃತರು. ಜಯರಾಂ ಅವರ ಅಡಕೆ ತೋಟದಲ್ಲಿನ ಶ್ರೀಗಂಧ ಮರಗಳನ್ನು ಕಳ್ಳತನಕ್ಕೆ ಬಂದಿದ್ದರು ಎಂಬ ಶಂಕೆ ವ್ಯಕ್ತವಾಗಿದೆ. ಅಬ್ಬಿನಹೊಳೆ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ, ಪರಿಶೀಲನೆ ನಡೆಸಿದ್ದಾರೆ. ಅಬ್ಬಿನಹೊಳೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ವಿದ್ಯುತ್ ಶಾಕ್‌ನಿಂದ ಯುವಕ ಸಾವು

ಧಾರವಾಡ: ನೀರು ಕಾಯಿಸಲು ಬೋರ್ಡ್‌ಗೆ ಕಾಯಿಲ್ ಹಾಕುವ ವೇಳೆ ವಿದ್ಯುದಾಘಾತದಿಂದ ಯುವಕ ಮೃತಪಟ್ಟ ಘಟನೆ ಕುಂದಗೋಳ ತಾಲೂಕಿನ ಕುಂಕೂರ ಗ್ರಾಮದಲ್ಲಿ ನಡೆದಿದೆ. ಕುಂಕೂರ ನಿವಾಸಿ ಮೌಲಾಲಾ ದೊಡ್ಮನಿ (21) ಮೃತ ದುರ್ದೈವಿ. ಯುವಕ ಕುಂಕೂರ ಜಾಮೀಯಾ ಮಸೀದಿಯಲ್ಲಿ ಕೆಲಸ ಮಾಡುತ್ತಿದ್ದ. ನೀರು ಕಾಯಿಸಲು ಹೋದಾಗ ಸ್ವಿಚ್‌ಗೆ ಕಾಯಿಲ್ ಹಾಕಲು ಹೋದಾಗ ದುರ್ಘಟನೆ ನಡೆದಿದೆ.

ಸಾಲಬಾಧೆ ತಾಳಲಾರದೆ ರೈತ ಆತ್ಮಹತ್ಯೆ

ದಾವಣಗೆರೆ: ಸಾಲಬಾಧೆ ತಾಳಲಾರದೆ ರೈತ ಆತ್ಮಹತ್ಯೆ ಮಾಡಿಕೊಂಡ ಘಟನೆ ಚನ್ನಗಿರಿ ತಾಲೂಕಿನ ಕಬ್ಬಳದಲ್ಲಿ ನಡೆದಿದೆ. ಧನು ಕೆ (27) ಮೃತ ರೈತ. ಧನು ತನ್ನ ಒಂದು ಎಕರೆ ಜಮೀನಿನ ಜತೆಗೆ ನಾಲ್ಕು ಎಕರೆ ಜಮೀನನ್ನು ಗುತ್ತಿಗೆ ಪಡೆದು ಕೃಷಿ ಮಾಡುತ್ತಿದ್ದರು.

ಈಜಲು ಹೋಗಿ ಇಬ್ಬರು ಬಾಲಕರು ಸಾವು

ಮದ್ದೂರು: ಸಮೀಪದ ದೇಶಹಳ್ಳಿ ಗ್ರಾಮದ ಮದ್ದೂರಮ್ಮನ ಕೆರೆಯಲ್ಲಿ ಈಜಲು ಹೋದ ಇಬ್ಬರು ಬಾಲಕರು ನೀರು ಪಾಲಾದ ಘಟನೆ ಭಾನುವಾರ ನಡೆದಿದೆ. ಶಂಕರಪುರದ ಸೋಮು ಅವರ ಪುತ್ರ ಮುತ್ತುರಾಜು (14), ತೇಜಸ್‌ರ ಪುತ್ರ ರಂಜು (17) ಮೃತಪಟ್ಟ ಬಾಲಕರು. ಭಾನುವಾರ ರಜೆ ಇದ್ದುದರಿಂದ ತಮ್ಮ ಸ್ನೇಹಿತರೊಂದಿಗೆ ಕೆರೆಗೆ ಈಜಲು ಹೋಗಿ ಆಯತಪ್ಪಿ ನೀರಿನಲ್ಲಿ ಸಿಲುಕಿ ಮೃತ ಪಟ್ಟಿದ್ದಾರೆಂದು ತಿಳಿದು ಬಂದಿದೆ. ಐವರು ಹದಿಹರೆಯದ ಬಾಲಕರು ಈಜಲು ಹೋಗಿದ್ದು, ಇಬ್ಬರು ಮೃತಪಟ್ಟಿದ್ದು, ಮೂವರು ಆತಂಕ ಗೊಂಡು ಸ್ಥಳದಿಂದ ಓಡಿಹೋಗಿದ್ದಾರೆ . ಮುತ್ತು ರಾಜು ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿದ್ದು, ರಂಜು ಸೋಮನಹಳ್ಳಿಯ ಐಟಿಐ ವ್ಯಾಸಂಗ ಮಾಡುತ್ತಿದ್ದ ಎಂದು ತಿಳಿದು ಬಂದಿದೆ. ಮೃತ ಬಾಲಕರ ಶವಗಳಿಗಾಗಿ ಅಗ್ನಿಶಾಮಕ ದಳದವರು ಶೋಧನೆ ಕೈಗೊಂಡಿದ್ದಾರೆ. ಬೆಸಗರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಟ್ವೀಟೂ-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಡತನದಲ್ಲೂ ಬಿಎಡ್ ಕಲಿಕೆಯೆಡೆಗಿನ ಯುವಕನ ಹಂಬಲ ಕಂಡು ನನಗೆ ಖುಷಿಯಾಯಿತು.ಗೃಹಲಕ್ಷ್ಮೀ ಯೋಜನೆ ನಿಜವಾಗಿ ತಲುಪಬೇಕಿರುವುದು ಮತ್ತು ತಲುಪುತ್ತಿರುವುದು ಇಂತಹ ಜನರನ್ನೇ. ತನಗೆ ಬಂದ ಗೃಹಲಕ್ಷ್ಮೀ ಹಣವನ್ನು ಕಡುಬಡತನದಲ್ಲೂ ಕೂಡಿಟ್ಟು ಮಗನ ಶಿಕ್ಷಣಕ್ಕಾಗಿ ಕೊಟ್ಟ ಆ ತಾಯಿಯ ಪ್ರೀತಿ-ಕಾಳಜಿಗೆ ಧನ್ಯವಾದ



ನರ್ವೆ ಮುರಳಿ, ಬೆಂಗಳೂರು

ಉಚಿತ ಶಿಕ್ಷಣ ಕೊಡುವುದು ಬಿಟ್ಟು ಈ ತರಹದ ನಾಟಕ ಆಡುತ್ತೀರಾ...!!

ಸಮಾಚಾರ ಸಣ್ಣದಲ್ಲ

ವಿಚಿತ್ರ ಕರು ಜನನ

ವಿಜಯಪುರ: ವಿಚಿತ್ರವಾದ ಆಕಳು ಕರುವೊಂದು ಜನಿಸಿರುವ ಘಟನೆ ಜಿಲ್ಲೆಯ ತಿಕೋಟಾ ತಾಲೂಕಿನ ಬಾಬಾನಗರದಲ್ಲಿ ನಡೆದಿದೆ. ಈ ಕರುವಿಗೆ ಒಂದು ಮುಖ, ಎರಡು ನಾಲಿಗೆ, ಎರಡು ಮೂಗು, ಮೂರು ಕಣ್ಣುಗಳು ಇವೆ. ರೈತ ಮಹಿಳೆ ಸಾವಿತ್ರಿ ನಾಗೂರಿ ಎಂಬುವರ ತೋಟದ ಮನೆಯಲ್ಲಿ ಹಸುವೊಂದು ಕರುವಿಗೆ ಜನ್ಮ ನೀಡಿದೆ. ಈ ಕರುವಿಗೆ ಎರಡು, ನಾಲಿಗೆ, ಮೂರು ಕಣ್ಣು ಇರುವುದನ್ನು ಕಂಡು ಕುಟುಂಬಸ್ಥರು ಮತ್ತು ಗ್ರಾಮಸ್ಥರಿಗೆ ಆಶ್ಚರ್ಯವಾಗಿದೆ. ಇದನ್ನು ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಜನರು ಸಹ ಆಗಮಿಸುತ್ತಿದ್ದಾರೆ. ಸದ್ಯ ಕರು ಹಾಗೂ ತಾಯಿ ಹಸು ಆರೋಗ್ಯವಾಗಿದೆ. ವಿಚಿತ್ರ ಕರುವಿನ ವಿಷಯ ತಿಳಿದು ಪಶು ವೈದ್ಯರು ಸಹ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಆರೋಗ್ಯ ಪರೀಕ್ಷೆ ನಡೆಸಿರುವ ವೈದ್ಯರು, ಕರುವಿನ ಆರೋಗ್ಯದಲ್ಲಿ ಯಾವುದೇ ತೊಂದರೆ ಇಲ್ಲ ಎಂದು ತಿಳಿಸಿದ್ದಾರೆ.

ಸಂಪುಟ ಸಭೆಗೆ ಮುನ್ನ ವೀರಶೈವರ ಸಭೆ

ದಾವಣಗೆರೆ: ಜಾತಿಗಣತಿ ಹಿನ್ನೆಲೆಯಲ್ಲಿ ಸಂಪುಟ ಸಭೆಗೆ ಮೊದಲೇ ಬೆಂಗಳೂರಿನಲ್ಲಿ ವೀರಶೈವ-ಲಿಂಗಾಯತ ಮಹಾಸಭಾ ಮುಖಂಡರ ಸಭೆ ನಡೆಯಲಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ತಿಳಿಸಿದ್ದಾರೆ. ಜಾತಿಗಣತಿ ವರದಿ ಸರಕಾರ ಬಿಡುಗಡೆ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಯಾಬಿನೆಟ್ ಸಭೆಗೂ ಮುನ್ನವೇ ವೀರಶೈವ-ಲಿಂಗಾಯತ ಮುಖಂಡರ ಸಭೆ ಅ.22ರ ಮಂಗಳವಾರ ನಡೆಯಲಿದೆ ಎಂದರು. ಇದರಲ್ಲಿ ಬಿಜೆಪಿ ಅಥವಾ ಕಾಂಗ್ರೆಸ್ ಎಂಬ ವಿಚಾರ ಬರುವುದಿಲ್ಲ, ಲಿಂಗಾಯತ ಸಮಾಜದ ಎಲ್ಲಾ ಮುಖಂಡರು ಸೇರಿ ಸಭೆ ಮಾಡುತ್ತಿದ್ದೇವೆ. ಈ ಸಭೆ ನಡೆದೇ ನಡೆಯುತ್ತದೆ. ಇದು ನಮ್ಮ ಸಮಾಜದ ಪ್ರಶ್ನೆಯೇ ಹೊರತು ಪಕ್ಷದ ಪ್ರಶ್ನೆಯಲ್ಲ ಎಂದು ಶಾಮನೂರು ಸ್ಪಷ್ಟಪಡಿಸಿದರು.



ಆದಷ್ಟು ಬೇಗ ಡಿಕೆಶಿ ಸಿಎಂ ಮಾಡಿ

ಗದಗ: ಡಿಸಿಎಂ ಡಿ.ಕೆ ಶಿವಕುಮಾರ್ ಆದಷ್ಟೂ ಬೇಗನೇ ಮುಖ್ಯಮಂತ್ರಿ ಆಗಲಿದ್ದಾರೆ. ಅವರನ್ನು ಸಿಎಂ ಮಾಡಿ ಈ ಮುಕ್ತಿಮಂದಿರ ಜಾಗಕ್ಕೆ ಕರೆದುಕೊಂಡು ಬಂದು ತ್ರಿಕೋಟಿ ಲಿಂಗ ಸ್ಥಾಪನೆ ಮಾಡಿದರು ಎಂದು ನಾಡಿಗೆ ತೋರಿಸೋಣ ಎಂದು ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಕರಿವೃಷಭ ರಾಜದೇಶಿಕೇಂದ್ರ ಶಿವಯೋಗೀಶ್ವರ ಶಿವಾಚಾರ್ಯ ಸ್ವಾಮಿಜೀ ಹೇಳಿಕೆ ನೀಡಿದ್ದಾರೆ. ಲಕ್ಷ್ಮೇಶ್ವರದ ಮುಕ್ತಿ ಮಂದಿರದ ಕಾರ್ಯಕ್ರಮದಲ್ಲಿ ಮಾತನಾಡಿ, ಮಂದಿರದಲ್ಲಿ ತ್ರಿಕೋಟಿ ಲಿಂಗ ಸ್ಥಾಪನೆ ನನೆಗುದಿಗೆ ಬಿದ್ದಿದೆ. ಇದಕ್ಕೆ ಎಲ್ಲ ಕಾರಣ ದುಡ್ಡೇ ದೊಡ್ಡಪ್ಪ. ಲಿಂಗ ಸ್ಥಾಪನೆಗೆ 15 ಕೋಟಿ ರು. ಆದರೂ ಬೇಕು ಎಂದರು.

ವಿರಾಮ
ಪ್ರತಿ ಭಾನುವಾರ

ಯಾವುದೇ ಸಮುದಾಯಕ್ಕೆ ಅನ್ಯಾಯವಾಗಲು ಬಿಡುವುದಿಲ್ಲ | ಬಿಜೆಪಿ ಸುಳ್ಳುಗಳನ್ನು ಎದುರಿಸಲು ಎಲ್ಲ ಸಚಿವರು ಸಜ್ಜಾಗಬೇಕು | ಜಾತಿಗಣತಿ ಬಗ್ಗೆ ಕೆಲ ಸಚಿವರ ಅನುಮಾನ

ಉಪಚುನಾವಣೆ ಬಳಿಕವೇ ಜಾತಿಗಣತಿ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದ್ದ ಜಾತಿ ಗಣತಿಯ ವಿಷಯವನ್ನು ಉಪಚುನಾವಣೆ ಪ್ರಕ್ರಿಯೆ ಮುಗಿಯುವ ತನಕ ಯಾವುದೇ ತೀರ್ಮಾನ ಕೈಗೊಳ್ಳುವುದು ಬೇಡ ಎನ್ನುವ ತೀರ್ಮಾನಕ್ಕೆ ಬರಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸದಲ್ಲಿ ನಡೆದ ಸಚಿವ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪಿಸಲಾಗಿದೆ. ಜಾತಿ ಗಣತಿ ಹಾಗೂ ಒಳ ಮೀಸಲು ಜಾರಿ ವಿಷಯದಲ್ಲಿ ಸರಕಾರದ ನಿಲುವು ಸ್ಪಷ್ಟವಾಗಿದೆ. ಆದರೂ, ಬಿಜೆಪಿಗರು ಚುನಾವಣಾ ಸಮಯದಲ್ಲಿ ಸುಳ್ಳುಗಳ ಮೂಲಕ ಜನರ ದಿಕ್ಕುತಪ್ಪಿಸುವ ಸಾಧ್ಯತೆಯಿದೆ. ಆದ್ದರಿಂದ ಉಪಚುನಾವಣೆ ಮುಗಿಯುವ ತನಕ ಈ ವಿಷಯದಲ್ಲಿ 'ಮೌನ'ವಾಗಿರುವುದು ಸೂಕ್ತ ಎನ್ನುವ ಚರ್ಚೆ ನಡೆದಿದೆ ಎಂದು ತಿಳಿದುಬಂದಿದೆ.

ಕಾಂಗ್ರೆಸ್ ಸರಕಾರ ಈ ಮೂರು ಉಪಚುನಾವಣೆಗಳು ಪ್ರತಿಷ್ಠೆಯ ಕಣವಾಗಿದೆ. ಒಂದು ವೇಳೆ ಮೂರರಲ್ಲಿ ಯಾವುದ ರಲ್ಲಿಯೇ ಹಿನ್ನಡೆಯಾದರೂ, ಬಿಜೆಪಿಗರು 'ಸರಕಾರ ವಿಶ್ವಾಸ' ಕಳೆದುಕೊಂಡಿದೆ ಎನ್ನುವ ಸುಳ್ಳು ಸಂದೇಶ ಹಬ್ಬಿಸುತ್ತಾರೆ. ಆದ್ದರಿಂದ ಈ ಮೂರು ಚುನಾವಣೆಯಲ್ಲಿ ಯಾವುದೇ ಕಾರಣಕ್ಕೂ ಹಿನ್ನಡೆಯಾಗಬಾರದು. ಮೂರು ಕ್ಷೇತ್ರಗಳನ್ನು ಗೆಲ್ಲುವ ಮೂಲಕ ವಿಧಾನಸಭಾ ಸಂಖ್ಯಾಬಲವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳ ಬೇಕು ಎನ್ನುವ ಸೂಚನೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ ಎಂದು ತಿಳಿದುಬಂದಿದೆ.

ಸದ್ಯಕ್ಕಿಲ್ಲ ಜಾತಿ ಗಣತಿ: ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಜಾತಿಗಣತಿಯನ್ನು ಮಂಡಿಸುವ ಸಾಧ್ಯತೆಯಿದೆ ಎನ್ನುವ ಮಾತುಗಳು ಕೇಳಿಬಂದಿತ್ತು.

ಸಿಎಂ ಅಧಿಕೃತ ನಿವಾಸದಲ್ಲಿ ಸಚಿವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ನಡೆಸಿದರು.

- ಉಪಚುನಾವಣೆಯಲ್ಲಿ ಮೂರು ಕ್ಷೇತ್ರಗಳು ಗೆಲ್ಲಲು ಕೈ ನಾಯಕರಿಗೆ ಸೂಚನೆ
- ಮೂರು ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಸಂಖ್ಯಾಬಲ ಹೆಚ್ಚಿಸಿಕೊಳ್ಳಲು ಸಿದ್ಧತೆ
- ಉಪಚುನಾವಣೆಯಲ್ಲಿ ಯಾವುದೇ ಕಾರಣಕ್ಕೂ ಪಕ್ಷಕ್ಕೆ ಹಿನ್ನಡೆಯಾಗದಿರಲು ಸಚಿವರಿಗೆ ಸೂಚನೆ

ಬಿಜೆಪಿ ಅಪಪ್ರಚಾರ: ಸಿಎಂ

ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಮಾತನಾಡಿ, ಜಾತಿ ಸಮೀಕ್ಷೆ, ಒಳ ಮೀಸಲು, ಪಂಚಮಸಾಲಿ ಸಮುದಾಯದ ಬೇಡಿಕೆ ಕುರಿತಂತೆ ಬಿಜೆಪಿಗರು ಅಪಪ್ರಚಾರ ಮಾಡುತ್ತಾರೆ. ಈ ಎಲ್ಲಾ ವಿಚಾರಗಳ ಬಗ್ಗೆಯೂ ನಮ್ಮ ನಿಲುವು ಸ್ಪಷ್ಟವಾಗಿದ್ದು ಆಯಾ ಸಮುದಾಯದ ಮುಖಂಡರು ಮತ್ತು ಜನಪ್ರತಿನಿಧಿಗಳ ಜತೆ ಸಭೆ ನಡೆಸಿ ನಮ್ಮ ಬೆಂಬಲ ಇರುವುದನ್ನು ಮನದಟ್ಟು ಮಾಡಿಸಿದ್ದೇವೆ. ಆದರೂ ಬಿಜೆಪಿ ಸರಣಿ ಸುಳ್ಳುಗಳ ಮೂಲಕ ಭಯಾನಕ ಅಪಪ್ರಚಾರ ಮಾಡುತ್ತದೆ. ಸುಳ್ಳುಗಳ ಹೊರತಾಗಿ ಬಿಜೆಪಿಗೆ ಬೇರೆ ಬಂಡವಾಳ ಇಲ್ಲ. ಆದ್ದರಿಂದ ಬಿಜೆಪಿಗರ ಈ ಎಲ್ಲ ಆರೋಪಗಳಿಗೆ ಕೌಂಟರ್ ನೀಡಬೇಕು ಎಂದು ಸೂಚನೆ ನೀಡಿದ್ದಾರೆ.

ಈ ಬಗ್ಗೆ ಸಿದ್ದರಾಮಯ್ಯ ಅವರು ಹೇಳಿದ್ದರು. ಆದರೀಗ ಉಪಚುನಾವಣೆಯಿರುವುದರಿಂದ ಯಾವುದೇ 'ರಿಸ್ಕ್' ತಗೆದುಕೊಳ್ಳುವುದು ಬೇಡ. ನೀತಿ ಸಂಹಿತೆಯಿರುವುದರಿಂದ ಸಹಜವಾಗಿಯೇ

ಪ್ರತಿ ಕ್ಷೇತ್ರಕ್ಕೆ 10 ಸಚಿವರು?

ಮೂರು ಕ್ಷೇತ್ರಗಳ ಉಪಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ರಾಜ್ಯ ಸರಕಾರ ಮೂರು ಉಪಚುನಾವಣೆಗೆ ತನ್ನೆಲ್ಲ ಶಕ್ತಿ ಬಳಸಿಕೊಳ್ಳಲು ತೀರ್ಮಾನಿಸಿದೆ. ಸಚಿವರಾದ ಎಂ.ಬಿ.ಪಾಟೀಲ್, ಡಾ.ಜಿ.ಪರಮೇಶ್ವರ್ ಅವರಿಗೆ ಮಹಾರಾಷ್ಟ್ರ ಚುನಾವಣಾ ಉಸ್ತುವಾರಿ ನೀಡಿರರವುದರಿಂದ ಅವರನ್ನು ಹೊರತುಪಡಿಸಿ ಇನ್ನುಳಿದ ಎಲ್ಲ ಸಚಿವರನ್ನು ಉಪಚನಾವಣೆ ನಡೆಯುವ ಕ್ಷೇತ್ರಗಳಿಗೆ ನಿಯೋಜಿಸಲು ನಿರ್ಧರಿಸಲಾಗಿದೆ. 30 ಸಚಿವರನ್ನು ಮೂರು ಕ್ಷೇತ್ರಗಳಿಗೆ ಹಂಚಿಕೆ ಮಾಡಿ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಮೂರು ಕ್ಷೇತ್ರಗಳ ಮೇಲುಸ್ತುವಾರಿ ವಹಿಸಿಕೊಳ್ಳುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ತೀರ್ಮಾನ ಕೈಗೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಇದನ್ನೇ ಮುಂದಿಟ್ಟುಕೊಂಡು ಜಾತಿ ಗಣತಿಯನ್ನು ಉಪಚುನಾವಣೆ ಬಳಿಕ ಕೈಗೆತ್ತಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಅಭ್ಯರ್ಥಿಗಳ ಹೆಸರು ಇಂದು ಅಂತಿಮ

ಹಾವೇರಿ: ರಾಜ್ಯದ ಮೂರು ಕ್ಷೇತ್ರಗಳ ಉಪಚುನಾವಣೆಗೆ ಶೀಘ್ರದಲ್ಲಿ ಅಭ್ಯರ್ಥಿಗಳ ಹೆಸರು ಅಂತಿಮವಾ ಗುತ್ತದೆ. ಶಿಗ್ಗಾವಿಯಲ್ಲಿ ಸಾಮಾಜಿಕ ನ್ಯಾಯ ಗಮನದಲ್ಲಿಟ್ಟುಕೊಂಡು ಅಭ್ಯರ್ಥಿ ಆಯ್ಕೆ ಮಾಡುತ್ತೇವೆ. ಕಾಂಗ್ರೆಸ್ ಹೈಕಮಾಂಡ್‌ಗೆ ನಮ್ಮ ಅಭಿಪ್ರಾಯ ತಿಳಿಸಿದ್ದು, ಸೋಮವಾರ ಸಂಜೆಯೊಳಗೆ ಅಭ್ಯರ್ಥಿ ಘೋಷಣೆ ಆಗಲಿದೆ ಎಂದು ಸಚಿವ ಎಚ್.ಕೆ.ಪಾಟೀಲ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ತನ್ನ ತತ್ವ-ಸಿದ್ಧಾಂತ ಬಿಡುವುದಿಲ್ಲ. ಮುಸ್ಲಿಂ ಸಮುದಾಯದ ಇಬ್ಬರು ಆಕಾಂಕ್ಷಿಗಳ ಬಳಿ ಮಾತಾಡಿ ಅಂತಿಮ ಮಾಡುತ್ತೇವೆ. ಕಾರ್ಯಕರ್ತರ ಅಭಿಪ್ರಾಯ, ನಾಯಕರ ಶಿಫಾರಸು ಹೈಕಮಾಂಡ್‌ಗೆ ಕಳುಹಿಸಲಾಗಿದೆ ಎಂದರು.

ಶಿಗ್ಗಾವಿಯಲ್ಲಿ ಟಿಕೆಟ್ ಬದಲಾವಣೆ ಆಗುತ್ತದೆ ಎಂದು ಹೇಳಲಾಗುವುದಿಲ್ಲ. ಕಾಂಗ್ರೆಸ್‌ನಲ್ಲಿ ಮ್ಯಾಚ್ ಫಿಕ್ಸಿಂಗ್ ನಡೆಯುವುದಿಲ್ಲ. ರಾಜಕಾರಣದಲ್ಲಿ ಸಾಫ್ಟ್, ಹಾರ್ಡ್ ರಾಜಕಾರಣ ಕಾಂಗ್ರೆಸ್‌ನಲ್ಲಿಲ್ಲ. ಉಪಚುನಾವಣೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯನವರ ನಾಯಕತ್ವ ಕ್ರಿಯಾಶೀಲವಾಗಿದೆ ಎಂದು ತೋರಿಸುತ್ತದೆ. ಮುಡಾ ಪ್ರಕರಣದಲ್ಲಾದ ರಾಜಕಾರಣ ಬಗ್ಗೆ ಜನರು ಚುನಾವಣೆಯಲ್ಲಿ ಉತ್ತರ ಕೊಡುತ್ತಾರೆ ಎಂದು ಪಾಟೀಲ್ ತಿಳಿಸಿದರು.

ರಾಜಕೀಯ ದುರುದ್ದೇಶಕ್ಕೆ ಇಡಿ ಬಳಕೆ

ಚುನಾವಣೆ ಘೋಷಣೆಗೂ ಇ.ಡಿ. ದಾಳಿಗೂ ಏನು ಸಂಬಂಧ. ಚುನಾವಣೆ ಘೋಷಣೆ ಆಗುತ್ತಿದ್ದಂತೆ ಇ.ಡಿ. ಕ್ರಿಯಾಶೀಲ ವಾಯ್ತಾ? ಮುಡಾ ಪ್ರಕರಣದಲ್ಲಿ ಯಾವುದಾದರೂ ಹಣಕಾಸು ಬದಲಾವಣೆ ಆಗಿದೆಯಾ? ಯಾರಾದರೂ ಆಸ್ತಿ ತಗೊಂಡು ಓಡಿಹೋಗಿದ್ದಾರಾ? ರಾಜಕೀಯ ದುರುದ್ದೇಶ, ಕುತಂತ್ರ ಪ್ರಜಾ ಪ್ರಭುತ್ವಕ್ಕೆ ಸೂಕ್ತವಲ್ಲ. ಇ.ಡಿ.ಯನ್ನು ರಾಜಕೀಯ ದುರುದ್ದೇಶಕ್ಕೆ ಕೇಂದ್ರ ಬಳಸಿಕೊಳ್ಳುತ್ತಿದೆ. ಇ.ಡಿ.ಇಟ್ಟಿರುವ ಈ ಹೆಜ್ಜೆ ಆ ಸಂಸ್ಥೆಯ ಘನತೆ ಕಡಿಮೆ ಮಾಡುತ್ತದೆ. ಲೋಕಾಯುಕ್ತ ತನಿಖೆ ನಡೆಯುತ್ತಿದೆ, ಈ ಸಂದರ್ಭದಲ್ಲಿ ಇ.ಡಿ. ದಾಳಿ ಮಾಡಿದ್ದು ಏಕೆ ಎಂದು ಸಚಿವ ಎಚ್.ಕೆ.ಪಾಟೀಲ್ ಪ್ರಶ್ನಿಸಿದರು.

ನನ್ನ ಮಗನಲ್ಲದೇ ಯಾರಿಗೆ ಟಿಕೆಟ್ ನೀಡಿದ್ದರೂ ಸ್ಪರ್ಧಿಸುತ್ತಿದೆ: ಸಂಸದ ಬಸವರಾಜ ಬೊಮ್ಮಾಯಿ

ಬಿಜೆಪಿ ತೀರ್ಮಾನಕ್ಕೆ ಪುತ್ರನ ಸ್ಪರ್ಧೆಗೆ ಒಪ್ಪಿದೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಕ್ಷದ ಹಿತದೃಷ್ಟಿ, ಪ್ರಸ್ತುತ ರಾಜಕೀಯ ಹಿತದೃಷ್ಟಿ ಹಾಗೂ ಕ್ಷೇತ್ರದ ದೃಷ್ಟಿಯಿಂದ ಪುತ್ರ ಭರತ್ ಬೊಮ್ಮಾಯಿಗೆ ಟಿಕೆಟ್ ನೀಡಲು ನಿರ್ಧಾರ ಕೈಗೊಂಡಿರುವುದಾಗಿ ಹೈಕಮಾಂಡ್ ನಾಯಕರು ತಿಳಿಸಿದ್ದಾರೆ. ಪಕ್ಷ ನನ್ನ ಮೇಲೆ ಭರವಸೆಯಿಟ್ಟು ಜವಾಬ್ದಾರಿ ನೀಡಿದ್ದು, ಪಕ್ಷದ ನಿರ್ಧಾರಕ್ಕೆ ತಲೆ ಬಾಗಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನಸಲ್ಲಿ ಏನೇ ಇದ್ದರೂ ಪಕ್ಷಕ್ಕಾಗಿ, ಸಮಾಜಕ್ಕಾಗಿ, ಕಾರ್ಯಕರ್ತರಿಗಾಗಿ ಪಕ್ಷದ ತೀರ್ಮಾನಕ್ಕೆ ತಲೆ ಬಾಗುತ್ತೇನೆ. ನಾನು ಎರಡು ದಿನ ಸಮಯ ಕೇಳಿದ್ದೆ. ಆದರೆ, ಸಮಯ ಕೊಡದೇ ಘೋಷಣೆ ಮಾಡಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ನನಗೆ ಮಾತನಾಡಲು ಅವಕಾಶವೇ ನೀಡಲಿಲ್ಲ, ನಿಮ್ಮ ಮಗನಿಗೆ ಟಿಕೆಟ್ ನೀಡಲು ನಿರ್ಧರಿಸಿದ್ದೇವೆ. ಅಲ್ಲಿ ನಿಮಗೆ ಹೆಸರಿದೆ ಮತ್ತು ಗೆಲುವು ಮುಖ್ಯ. ಸರ್ವೆ ವರದಿ ಕೂಡ ಭರತ್ ಪರಯಿದೆ ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ದೂರವಾಣಿ ಮೂಲಕ ಮಾತನಾಡಿ ಚುನಾವಣೆ ಎದುರಿಸಬೇಕು. ಚುನಾವಣೆ ಗೆಲ್ಲಬೇಕು ಎಂದರು. ಹೀಗಾಗಿ ನಾನು ವರಿಷ್ಠರ ನಿರ್ಧಾರಕ್ಕೆ ತಲೆ ಬಾಗಿದ್ದೇನೆ. ಪಕ್ಷ ತೀರ್ಮಾನ ಮಾಡಿದೆ. ನಂಗೆ ಈ ಬಾರಿ ಭರತ್‌ಗೆ ಟಿಕೆಟ್ ಬೇಡ ಅನ್ನುವುದು ಇತ್ತು. ಆದರೆ ಪಕ್ಷ ನಂಬಿಕೆ ಇಟ್ಟು ಅವಕಾಶ ಕೊಟ್ಟಿದೆ. ನಾ ಏನೇ ಆಗಿದ್ದರೂ ಅದಕ್ಕೆ ಪಕ್ಷ ಕಾರಣ. ವಿಶ್ವಾಸ ಇಟ್ಟು ಪಕ್ಷ ತೀರ್ಮಾನ ಮಾಡಿರುವಾಗ ನಾನು ಬೇಡ ಎನ್ನಲು ಆಗಲಿಲ್ಲ. ನನ್ನ ಮನಸ್ಸಿನ ಭಾವನೆ ಏನೇ ಇದ್ದರು, ಪಾರ್ಟಿಯ ತೀರ್ಮಾನ ಮಾಡಿರುವಾಗ ಒಪ್ಪಿದೆ ಎಂದು ಹೇಳಿದರು.

ಶಿಗ್ಗಾಂವಿ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅವರು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿಯಾದರು. ಸಂಸದ ಬಸವರಾಜ ಬೊಮ್ಮಾಯಿ ಇದ್ದರು.

ನಮ್ಮ ಪಕ್ಷ ಯಾವಾಗಲೂ ವ್ಯಕ್ತಿಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು ಎಂದು ಹೇಳುತ್ತದೆ. ಪಕ್ಷದ ವರಿಷ್ಠರು ನನ್ನ ಮೇಲೆ ವಿಶ್ವಾಸ ಇಟ್ಟು ಜವಾಬ್ದಾರಿ ಕೊಟ್ಟಾಗ ನಾನು ಹಿಂದೆ ಸರಿದರೆ ನನ್ನ ಜವಾಬ್ದಾರಿಯಿಂದ ಹಿಂದೆ ಸರಿದಂತಾಗುತ್ತದೆ. ಹೀಗಾಗಿ ನನ್ನ ಮನಸ್ಸಲ್ಲಿ ಏನೇ ಭಾವನೆ ಇದ್ದರೂ, ನಾನು ತಲೆಬಾಗುವ ಪ್ರಸಂಗ ಬಂದಿದೆ. ನನಗೆ ಇಷ್ಟೆಲ್ಲ ಸ್ಥಾನಮಾನ ಸಿಗಲು ಪಕ್ಷ ಕಾರಣ. ಹೀಗಾಗಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ತೀರ್ಮಾನಕ್ಕೆ ತಲೆ ಬಾಗಿದ್ದೇನೆ ಎಂದು ಹೇಳಿದರು.

ಪಕ್ಷದ ನಾಯಕರಿಗೆ ಭರತ್ ಧನ್ಯವಾದ: ಶಿಗ್ಗಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಮಾತನಾಡಿದ್ದು,

> ನಾನು ಟಿಕೆಟ್ ಕೇಳಿರಲಿಲ್ಲ, ವರಿಷ್ಠರು ಲೆಕ್ಕಾಚಾರ ಮಾಡಿ ಒಂದು ತೀರ್ಮಾನ ಮಾಡಿದ್ದಾರೆ ಅವರ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ನಾನು 2018ರಿಂದ ತಂದೆಯ ಪರವಾಗಿ ಚುನಾವಣೆಯಲ್ಲಿ ಕೆಲಸ ಮಾಡಿದ್ದೇನೆ. 2023ರ ವಿಧಾನಸಭೆ ಚುನಾವಣೆಯಲ್ಲಿ ಮನೆ ಮನೆಗೆ ತೆರಳಿ ತಂದೆಯ ಪರವಾಗಿ ಪ್ರಚಾರ ಮಾಡಿದ್ದೇನೆ. ಎಂಪಿ ಚುನಾವಣೆಯಲ್ಲಿ ಸಂಪೂರ್ಣ ಕ್ಷೇತ್ರ ತಿರುಗಾಡಿ ತಂದೆಯ ಪರವಾಗಿ ಕೆಲಸ ಮಾಡಿದ್ದೇನೆ. ಕ್ಷೇತ್ರದ ಜನರೊಂದಿಗೆ ಸಂಪರ್ಕವಿದೆ. ತಂದೆಯವರು ಸಚಿವರಿದ್ದಾಗ ಸಿಎಂ ಇದ್ದಾಗ ನನ್ನ ಕೈಲಾದ ಕೆಲಸ ಮಾಡಿದ್ದೇನೆ.
>
> -ಭರತ್ ಬೊಮ್ಮಾಯಿ
> ಶಿಗ್ಗಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ನನ್ನ ಮೇಲೆ ವಿಶ್ವಾಸ ಇಟ್ಟು ಟಿಕೆಟ್ ನೀಡಿದ ಕೇಂದ್ರ ನಾಯಕರಿಗೆ, ರಾಜ್ಯದ ನಾಯಕ ಮಾಜಿ ಸಿಎಂ ಬಿ. ಎಸ್. ಯಡಿಯೂರಪ್ಪ, ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ, ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಅವರಿಗೆ ಧನ್ಯವಾದ ತಿಳಿಸುತ್ತೇನೆ. ನಮ್ಮ ತಂದೆ ತಾಯಿಯ ಆಶೀರ್ವಾದದ ಫಲದಿಂದ ನನಗೆ ಈ ಅವಕಾಶ ಸಿಕ್ಕಿದೆ. ನಮ್ಮ ತಂದೆ ಶಿಗ್ಗಾವಿ ಸವಣೂರಿನಲ್ಲಿ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿಕೊಂಡು, ಅಲ್ಲಿನ ಜನರ ಅಪೇಕ್ಷೆಯಂತೆ ನಮ್ಮ ಪಕ್ಷದ ವರಿಷ್ಠರು ನನಗೆ ಟಿಕೆಟ್ ನೀಡಿದ್ದಾರೆ. ನಮ್ಮ ತಂದೆಯವರು ಮಾಡಿರುವ ಎಲ್ಲ ಅಭಿವೃದ್ಧಿ ಕೆಲಸಗಳನ್ನು ನಾನು ಮುಂದುವರೆಸಿಕೊಂಡು ಹೋಗುತ್ತೇನೆ. ಶಿಗ್ಗಾವಿ ಸವಣೂರಿನ ಜನತೆಯ ಕಷ್ಟ ಸುಖದಲ್ಲಿ ನಾನು ಸದಾಕಾಲ ಇರುತ್ತೇನೆ ಎಂದು ಹೇಳಿದರು.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಸರೋಜಾ ಸಂಜೀವ್ | ಅಂತಿಮ ದರ್ಶನ ಪಡೆದ ಗಣ್ಯರು

ನಟ, ನಿರ್ದೇಶಕ ಕಿಚ್ಚ ಸುದೀಪ್‌ಗೆ ಮಾತೃವಿಯೋಗ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಖ್ಯಾತ ನಟ ಕಿಚ್ಚ ಸುದೀಪ್ ಅವರ ತಾಯಿ ಸರೋಜಾ ಸಂಜೀವ್ (86) ನಿಧನರಾಗಿದ್ದಾರೆ. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಸರೋಜಾ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮುಂಜಾನೆ ಕೊನೆಯುಸಿರೆಳೆದಿದ್ದಾರೆ.

ತಾಯಿಯ ನಿಧನದಿಂದ ಸುದೀಪ್ ಕುಟುಂಬ ದುಃಖಕ್ಕೆ ಜಾರಿದೆ. ಜೆ.ಪಿ.ನಗರದ ನಿವಾಸದಲ್ಲಿ ಮೃತರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ, ನಟರಾದ ಶಿವರಾಜ್ ಕುಮಾರ್, ದುನಿಯಾ ವಿಜಯ್, ಡಾಲಿ ಧನಂಜಯ, ರಾಘವೇಂದ್ರ ರಾಜ್‌ಕುಮಾರ್, ಸೃಜನ್ ಲೋಕೇಶ್, ನಟಿಯರಾದ ತಾರಾ, ಜಯಮಾಲಾ ಸೇರಿದಂತೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹಾಗೂ ಹಲವು ಗಣ್ಯರು ಅಂತಿಮ ದರ್ಶನ ಪಡೆದರು. ಬಳಿಕ ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

ಸುದೀಪ್, ತಮ್ಮ ತಾಯಿ ಮಾತಿಗೆ ತುಂಬಾ ಗೌರವ ನೀಡುತ್ತಿದ್ದರು. ಅಪ್ಪ-ಅಮ್ಮನಿಗೆ ವಯಸ್ಸಾಗಿದೆ ಅಲ್ಲದೆ ತಮ್ಮ ನಿವಾಸದ ನೆರೆಹೊರೆಯಲ್ಲಿಯೂ ಅನೇಕರು ವೃದ್ಧರಿದ್ದು, ಅವರಿಗೆ ತೊಂದರೆಯಾಗಬಾರದು ಎಂಬ

ನಿಟ್ಟಿನಲ್ಲಿ ಸುದೀಪ್ ಈ ಬಾರಿಯ ಬರ್ತ್‌ಡೇಯನ್ನು ಮನೆಯಲ್ಲಿ ಆಚರಿಸಿಕೊಂಡಿರಲಿಲ್ಲ.

ಕಿಚ್ಚ ಸುದೀಪ್ ತಾಯಿ ಸರೋಜಾ ಸಂಜೀವ್ ಅವರು ಉಡುಪಿ ಮೂಲದವರಾಗಿದ್ದರು. ಸರೋಜಾ ಸಂಜೀವ್ ಅವರು ಮಗನ ಸಿನಿಮಾ ಕಾರ್ಯಕ್ರಮಗಳಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದರು. ಮಗನ ಯಶಸ್ಸನ್ನು ನೋಡಿ ಸಂತಸ ಪಡುತ್ತಿದ್ದರು. ಕಿಚ್ಚ ಸುದೀಪ್ ಯಶಸ್ಸಿನ ಹಿಂದೆ ಅವರ ತಾಯಿಯ ಪಾತ್ರ ಹಿರಿದಾಗಿದೆ. ಹೀಗಾಗಿ ಸುದೀಪ್ ಕೂಡ ಅಮ್ಮನ ಬಗ್ಗೆ ವೇದಿಕೆ ಮೇಲೆ ಆಗಾಗ ಹೇಳುತ್ತಿದ್ದರು. ಬಿಗ್‌ಬಾಸ್ ವೇದಿಕೆಯಲ್ಲಿಯೂ ಕಿಚ್ಚ ತಮ್ಮ ತಾಯಿಯನ್ನು ನೆನೆದಿದ್ದರು.

> ಐವತ್ತು ವರ್ಷಗಳಿಂದಲೂ ನನಗೆ ಸರೋಜಕ್ಕ ಅವರ ಪರಿಚಯವಿದೆ. ಎಂತಹ ಸಮಯದಲ್ಲಿಯೂ ಧೈರ್ಯಗೆಡದೆ ಎಲ್ಲರಿಗೂ ಸಮಾಧಾನ ಹೇಳುತ್ತಿದ್ದರು. ಒಂದು ಒಳ್ಳೆಯ ಹೃದಯವನ್ನು ಕಳೆದುಕೊಂಡಿದ್ದೇವೆ.
>
> -ಜಯಮಾಲಾ, ನಟಿ

ಗಣ್ಯರ ಸಂತಾಪ: ಸುದೀಪ್ ತಾಯಿ ನಿಧನಕ್ಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಆಂಧ್ರ ಡಿಸಿಎಂ ಪವನ್ ಕಲ್ಯಾಣ್ ಸೇರಿದಂತೆ ಹಲವು ಸಿನಿಮಾ ರಂಗದ ಗಣ್ಯರು ಸಂತಾಪ ಸೂಚಿಸಿದ್ದಾರೆ. ಖ್ಯಾತ ನಟ ಕಿಚ್ಚ ಸುದೀಪ್ ತಾಯಿ ಸರೋಜಾ ವಿಧಿವಶರಾಗಿದ್ದಾರೆ ಎಂದು ತಿಳಿದು ದುಃಖವಾಗಿದೆ. ಸರೋಜ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ತಮ್ಮ ನಟನೆಯ ಮೇಲೆ ತಾಯಿಯ ಪ್ರಭಾವ ಹಾಗೂ ಪ್ರೋತ್ಸಾಹವಿದೆ ಎಂದು ಸುದೀಪ್ ಹೇಳಿದ್ರು. ತಾಯಿಯ ನಷ್ಟದಿಂದ ಬೇಗ ಚೇತರಿಸಿಕೊಳ್ಳಬೇಕು. ಸುದೀಪ್ ಅವರ ಕುಟುಂಬಕ್ಕೆ ನನ್ನ ತೀವ್ರ ಸಂತಾಪಗಳು ಎಂದು ಪವನ್ ಟ್ವೀಟ್ ಮಾಡಿದ್ದಾರೆ.

> ಸುದೀಪ್ ಅವರ ತಾಯಿ, ನಮ್ಮ ತಾಯಿ ತುಂಬಾ ವರ್ಷಗಳಿಂದ ಪರಿಚಯ. ಅವರು ನಮ್ಮ ಮನೆಗೆ ಬರುತ್ತಿದ್ದರು, ನಾವು ಅವರ ಮನೆಗೆ ಹೋಗುತ್ತಿದ್ದೆವು. ನಾವು ಹೊರಗೆ ಹೋಗುವಾಗ ಅವರ ಆಶೀರ್ವಾದ ತೆಗೆದುಕೊಂಡು ತೆರಳುತ್ತಿದ್ದೆವು. ತಾಯಿಯನ್ನು ಕಳೆದುಕೊಂಡ ಜೀವನ ಹೇಗಿರುತ್ತೆ ಎಂಬುದನ್ನು ನಾನು ಅನುಭವಿಸಿದ್ದೇನೆ. ಆ ವೇದನೆಯನ್ನು ಸುದೀಪ್ ಅವರು ಅನುಭವಿಸಬೇಕಲ್ಲ ಅನ್ನೋದು ತುಂಬಾ ನೋವಿನ ವಿಚಾರ. ಈ ನೋವನ್ನು ತಾಳುವ ಶಕ್ತಿಯನ್ನು ದೇವರು ಅವರಿಗೆ ಕೊಡಲಿ.
>
> -ರಾಘವೇಂದ್ರ ರಾಜ್‌ಕುಮಾರ್, ನಟ

ವರಿಷ್ಠರ ತೀರ್ಮಾನದಂತೆ ಚನ್ನಪಟ್ಟಣ ಅಭ್ಯರ್ಥಿ ಆಯ್ಕೆ

ಎನ್‌ಡಿಎ ಅಭ್ಯರ್ಥಿ ಬೆಂಬಲಿಸಲು ಮನವಿ

ಸಂಡೂರು: ಇಲ್ಲಿನ ಕ್ಷೇತ್ರದಲ್ಲಿ ಸ್ಪರ್ಧಿಸುವ ಎನ್‌ಡಿಎ ಅಭ್ಯರ್ಥಿಯನ್ನು ಎಲ್ಲರೂ ಬೆಂಬಲಿಸುವಂತೆ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮನವಿ ಮಾಡಿದ್ದಾರೆ.

ವಿಧಾನಸಭಾ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಸಂಡೂರಿನಲ್ಲಿ ಭಾನುವಾರ ನಡೆದ ಜೆಡಿಎಸ್ ಮುಖಂಡರ ಸಭೆಯಲ್ಲಿ ನಿಖಿಲ್ ಮಾತನಾಡಿ, ಚನ್ನಪಟ್ಟಣದಲ್ಲಿ ಎನ್‌ಡಿಎ ಮೈತ್ರಿ ಕೂಟದ ವರಿಷ್ಠರ ತೀರ್ಮಾನದಂತೆ ಅಭ್ಯರ್ಥಿಯ ಆಯ್ಕೆಯಾಗಲಿದ್ದು, ಅದಕ್ಕೆ ನಮ್ಮ ಬೆಂಬಲವಿದೆ. ಎಚ್.ಡಿ.ಕುಮಾರಸ್ವಾಮಿ ಅವರು ಅಧಿಕಾರದ ಅವಧಿಯಲ್ಲಿ ರೈತರ ಹಾಗೂ ಬಡವರ ಪರವಾಗಿ ಆಡಳಿತ ನಡೆಸಿದ್ದರು. ಸಾರಾಯಿ ಮತ್ತು ಲಾಟರಿ ನಿಷೇಧಿಸಿ ಮಹಿಳೆಯರ ಕಣ್ಣೀರು ಒರೆಸುವ ಕೆಲಸ ಮಾಡಿದ್ದರು. ಲೋಕಸಭಾ ಚುನಾವಣೆಯಲ್ಲಿ ಮೋದಿಜಿಯವರ ಶಕ್ತಿಯನ್ನು ಬಲಪಡಿಸಬೇಕು ಎನ್ನುವ ದೃಷ್ಟಿಯಿಂದ ಮೈತ್ರಿ ಮಾಡಿಕೊಂಡು ಕರ್ನಾಟಕದಲ್ಲಿ 19 ಎನ್‌ಡಿಎ ಸಂಸದರನ್ನು ಕರ್ನಾಟಕ ಜನತೆ ಆಯ್ಕೆ ಮಾಡಿದ್ದಾರೆ. ಹೀಗಾಗಿ ಮತದಾರರುಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸಬೇಕೆಂದು ನಿಖಿಲ್ ಕುಮಾರಸ್ವಾಮಿ ಮನವಿ ಮಾಡಿಕೊಂಡರು.

> ಕೇಂದ್ರದಲ್ಲಿ ಜನತೆ ಹಾಗೂ ಪ್ರಧಾನಿ ಮೋದಿಯವರ ಸಹಕಾರದಿಂದ ಕುಮಾರಸ್ವಾಮಿ ಮಂತ್ರಿಗಳಾಗಿದ್ದಾರೆ. ಅವರು ಯಾವತ್ತಿಗೂ ಮಹಿಳೆಯರ, ಬಡವರ, ರೈತರ, ಯುವಕರ ಪರವಾಗಿ ಅಭಿವೃದ್ಧಿ ಕೆಲಸ ಮಾಡುತ್ತಾರೆ. ಮೋದಿ, ಕುಮಾರಣ್ಣನವರ ಶಕ್ತಿ ಇನ್ನಷ್ಟು ಬಲಪಡಿಸಬೇಕಾಗಿದೆ.
>
> -ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ

ಚನ್ನಪಟ್ಟಣ ವಿಚಾರದಲ್ಲಿ ಜೆಡಿಎಸ್ ಪರವಾಗಿ ನಿರ್ಧಾರ: ಎಚ್‌ಡಿಕೆ

ಚನ್ನಪಟ್ಟಣ ಟಿಕೆಟ್ ನಮಗೇ ಬರಬೇಕು

ಮಂಡ್ಯ: ಟಿಕೆಟ್ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ. ಚನ್ನಪಟ್ಟಣ ಜೆಡಿಎಸ್ ಭದ್ರಕೋಟೆ ಅನ್ನೋದು ದೆಹಲಿ ಮಟ್ಟದಲ್ಲೂ ಗೊತ್ತಿದೆ. ನ್ಯಾಯಯುತವಾಗಿ ಚರ್ಚೆ ಮಾಡೋದಾದ್ರೆ ಚನ್ನಪಟ್ಟಣ ಟಿಕೆಟ್ ನಮಗೆ ಬರಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ಟಿಕೆಟ್ ವಿಚಾರದಲ್ಲಿ ಗೊಂದಲ ಏನು ಇಲ್ಲ. ಯೋಗೇಶ್ವರ್ ಸಹ ನಿಲ್ಲಬೇಕು ಅಂತಾ ಹೇಳ್ತಾರೆ. ನ್ಯಾಯಯುತವಾಗಿ ಚರ್ಚೆ ಮಾಡೋದಾದ್ರೆ ಚನ್ನಪಟ್ಟಣ ನಮಗೆ ಬರಬೇಕು. ಮೂರು ಕ್ಷೇತ್ರಗಳ ಪೈಕಿ 2 ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಘೋಷಣೆ ಮಾಡಿದ್ದಾರೆ. ಚನ್ನಪಟ್ಟಣ ವಿಚಾರದಲ್ಲಿ ನಮ್ಮ ಪಕ್ಷದ ಪರವಾಗಿ ನಿರ್ಧಾರ ಮಾಡಬೇಕು. ಅದೇ ನಿಟ್ಟಿನಲ್ಲಿ ಚರ್ಚೆಯಾಗುತ್ತಿದೆ ಎಂದು ತಿಳಿಸಿದರು.

ಚನ್ನಪಟ್ಟಣ ಜೆಡಿಎಸ್ ಭದ್ರಕೋಟೆ: ದೆಹಲಿ ಮಟ್ಟದಲ್ಲಿ ಚನ್ನಪಟ್ಟಣ ಟಿಕೆಟ್ ಸಮಸ್ಯೆ ಇಲ್ಲ. ಕಳೆದ ಎರಡು ಬಾರಿ ಚನ್ನಪಟ್ಟಣದಲ್ಲಿ ನಾನು ಪ್ರತಿನಿಧಿಸಿದ್ದೇನೆ. ಚನ್ನಪಟ್ಟಣ ಜೆಡಿಎಸ್ ಕ್ಷೇತ್ರ ಅನ್ನೋದು ದೆಹಲಿ ಮಟ್ಟದಲ್ಲಿ ಗೊತ್ತಿದೆ. ಮೂರು ಉಪಚುನಾವಣೆ ಕ್ಷೇತ್ರಗಳ ಪೈಕಿ ಚನ್ನಪಟ್ಟಣದಲ್ಲಿ ಜೆಡಿಎಸ್ ಕಾರ್ಯಕರ್ತರ ಪಡೆ ಇದೆ. ಗೆಲ್ಲುವ ದೃಷ್ಟಿಯಿಂದ ಬಿಜೆಪಿಗೆ ಬೆಂಗಳೂರು ಗ್ರಾಮಾಂತರ ಕ್ಷೇತ್ರ ಬಿಟ್ಟುಕೊಟ್ಟೆವು. ನಮ್ಮ ಕುಟುಂಬದವರನ್ನೇ ಬಿಜೆಪಿ ಅಭ್ಯರ್ಥಿಯಾಗಿ ನಿಲ್ಲಿಸಿದ್ದೇವೆ. ಆ ರೀತಿ ಔದಾರ್ಯ ಅವರ ಕಡೆಯಿಂದಲೂ ಬರಬೇಕು ಎನ್ನುತ್ತಾ ಪರೋಕ್ಷವಾಗಿ ಸಿಪಿವೈ ಜೆಡಿಎಸ್ ಚಿಹ್ನೆಯಡಿ ನಿಲ್ಲಲಿ ಎಂದು ಕುಮಾರಸ್ವಾಮಿ ಹೇಳಿದರು.

ಕೆಲ ತಿಂಗಳ ಹಿಂದೆ ಭತ್ತದ ನಾಟಿ ಹಾಕಿದ್ದ ಪಾಂಡವಪುರ ತಾಲೂಕಿನ ಸೀತಾಪುರದಲ್ಲಿನ ಜಮೀನಿಗೆ ಕೇಂದ್ರ ಸಚಿವ ಎಚ್. ಡಿ ಕುಮಾರಸ್ವಾಮಿ ಅವರಿಂದು ಭೇಟಿ ನೀಡಿ ಪರಿಶೀಲಿಸಿದರು.

ಕಿಡಿಗೇಡಿಗಳಿಂದ ಕೈದಿಗಳಿಗೆ ವಸ್ತು ಪೂರೈಕೆ, ತನಿಖೆಗೆ ಸಜ್ಜು

ಕಲಬುರಗಿ ಜೈಲಿನಲ್ಲಿ ನಿಷೇಧಿತ ವಸ್ತುಗಳು ಪತ್ತೆ

ಕಲಬುರಗಿ: ನಗರದ ಹೊರವಲಯದ ಕೇಂದ್ರ ಕಾರಾಗೃಹ ದಿನೇದಿನೇ ರಾಜ್ಯಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗುತ್ತಿದ್ದು, ಇದೀಗ ಕಲಬುರಗಿ ಸೆಂಟ್ರಲ್ ಜೈಲಿನ ಒಳಗೋಡೆ ಬಳಿ ನಿಷೇಧಿತ ತಂಬಾಕು ವಸ್ತುಗಳ ಪತ್ತೆಯಾಗಿದ್ದು, ಈ ಕುರಿತು ಫರಹತಾಬಾದ್ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಪ್ರಕರಣ ದಾಖಲಾಗಿದೆ.

ಜೈಲಿನ ಒಳಭಾಗದ ಗೋಡೆಗಳ ಬಳಿ ಚೆಂಡಿನ ಆಕಾರದ ಪ್ಲಾಸ್ಟಿಕ್ ಚೀಲಗಳಿಂದ ಮಾಡಿದ ಉಂಡೆಗಳು ಪತ್ತೆಯಾಗಿವೆ. ಅವುಗಳಲ್ಲಿ ತಂಬಾಕು, ಗುಟ್ಕಾ, ಬೀಡಿ, ಪಾನ್ ಮಸಾಲಾ ಸೇರಿದಂತೆ ನಿಷೇಧಿತ ವಸ್ತುಗಳನ್ನು ಇರಿಸಲಾಗಿತ್ತು.

ಕೈದಿಗಳಿಗೆ ಹೊರಗಿನಿಂದ ಪೂರೈಕೆ: ಜೈಲಿನಲ್ಲಿರುವ ಪರಿಚಿತ ಕೈದಿಗಳಿಗೆ ತಲುಪುವಂತೆ ಇಂತಹ ಚೆಂಡುಗಳನ್ನು ಕಿಡಿಗೇಡಿಗಳು ಎಸೆದು ಪರಾರಿಯಾಗುವ ರೂಢಿ ಈ ಹಿಂದಿನಿಂದಲೂ ಚಾಲ್ತಿಯಲ್ಲಿದೆ. ಮೊದಲ ಬಾರಿಗೆ ಈ ಪ್ಲಾಸ್ಟಿಕ್ ಚೀಲಗಳಿಂದ ಮಾಡಿದ ಚೆಂಡುಗಳು ಜೈಲು ಸಿಬ್ಬಂದಿ ಕಣ್ಣಿಗೆ ಬಿದ್ದಿದೆ ಎನ್ನಲಾಗುತ್ತಿದೆ. ಪತ್ತೆಯಾದ ನಿಷೇಧಿತ ವಸ್ತುಗಳನ್ನು ಕಾರಾಗೃಹದ ಸಿಬ್ಬಂದಿ ಸಂಗೀತಾ ತಮ್ಮ ವಶಕ್ಕೆ ಪಡೆದು ತಕ್ಷಣ ಫರಹತಾಬಾದ್ ಠಾಣೆಗೆ ಮಾಹಿತಿ ತಲುಪಿಸಲಾಗಿದೆ.

ನಿಷೇಧಿತ ವಸ್ತು ಎಸೆತದ ಬಗ್ಗೆ ತನಿಖೆ

ಈಗಾಗಲೇ, ಮೊಬೈಲ್ ಬಳಕೆ, ಹನಿಟ್ರ್ಯಾಪ್ ಹಾಗೂ ಜೈಲು ಸಿಬ್ಬಂದಿ ಮತ್ತು ಕೈದಿಗಳಿಗೆ ಕೆಲವರು ಬ್ಲ್ಯಾಕ್ ಮೇಲ್ ಮಾಡುತ್ತಿರುವ ವಿದ್ಯಮಾನಗಳು ಇಡೀ ರಾಜ್ಯದ ಗಮನ ಸೆಳೆದ ಬೆನ್ನಲ್ಲೇ , ಕಾರಾಗೃಹ ಎಡಿಜಿಪಿ ಮಾಲಿನಿ ಕೃಷ್ಣಮೂರ್ತಿ ಹಾಗೂ ಇದೇ ಕಚೇರಿಯ ಎಸ್‌ಪಿ ಯಶೋಧಾ ಕಲಬುರಗಿ ಜೈಲಿಗೆ ಭೇಟಿನೀಡಿ ಮಾಹಿತಿ ಕಲೆಹಾಕಿದ್ದಾರೆ. ಈ ಬೆಳವಣಿಗೆಯ ಬೆನ್ನಲ್ಲೇ ಜೈಲರ್ ಗಳಾದ ಶಹನಾಜ್ ನೀಗೆವಾನ್ ಹಾಗೂ ಪರಮಾನಂದ ಅವರನ್ನು ಅಮಾನತುಗೊಳಿಸಲಾಗಿದೆ. ಹಾಗಾಗಿ, ಇದೀಗ ನಿಷೇಧಿತ ವಸ್ತುಗಳನ್ನು ಅಕ್ರಮವಾಗಿ ಜೈಲಿನೊಳಗೆ ಎಸೆಯುವ ಜಾಲದ ಕುರಿತು ಮತ್ತೊಂದು ಸುತ್ತಿನ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.

ವಿಶ್ವವಾಣಿ

ಸಂಪಾದಕೀಯ

ಅಪ್ಪ-ಅಮ್ಮನ ಜಗಳದಲಿ ಕೂಸು...!

ನಮ್ಮ ರಾಜಕಾರಣಿಗಳಿಗೆ ಮಿಕ್ಕೆಲ್ಲ ವಿಷಯಗಳಿಗಿಂತಲೂ ಸ್ವಪ್ರತಿಷ್ಠೆಯೇ ಮುಖ್ಯವಾದಾಗ ಸಮಷ್ಟಿಯ ಹಿತವು ಹೇಗೆ ಮೂಲೆಗುಂಪಾಗುತ್ತದೆ ಎಂಬುದಕ್ಕೆ ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆ ವಿಷಯದಲ್ಲಿ ಮುಗುಮ್ಮಾಗಿ ನಡೆಯುತ್ತಿರುವ 'ಹೊಯ್-ಕೈ' ಪ್ರಸಂಗಗಳೇ ಸಾಕ್ಷಿ. ಕಳೆದ ಲೋಕಸಭಾ ಚುನಾವಣೆಗೂ ಮುನ್ನ ಬಿಜೆಪಿ ಮತ್ತು ಜೆಡಿಎಸ್ ನಡುವೆ ರೂಪುಗೊಂಡ 'ಕೂಡಿಕೆ'ಯ ನೇಪಥ್ಯದಲ್ಲಿ ಏನೆಲ್ಲಾ ಮಾತುಕತೆಗಳು ನಡೆದಿವೆ ಎಂಬುದು ಜನಸಾಮಾನ್ಯರವರೆಗೆ ತಲುಪುವುದಿಲ್ಲ. 'ಇಂಥ ವಿಷಯಗಳಲ್ಲಿ ಮತದಾರರು ವ್ಯಾಪ್ತಿ ಪ್ರದೇಶದಿಂದ ಆಚೆಗೆ' ಎಂಬ ಚಿತ್ತಸ್ಥಿತಿ ನಮ್ಮ ರಾಜಕೀಯ ಪಕ್ಷಗಳಲ್ಲಿ ಕೆನೆಗಟ್ಟಿರುವುದೇ ಇದಕ್ಕೆ ಕಾರಣ. ಕೂಡಿಕೆಯ ಷರತ್ತುಗಳು ಏನಾದರೂ ಆಗಿರಲಿ, ಕನಿಷ್ಠ ಪಕ್ಷ ಒಮ್ಮತದ ಅಭ್ಯರ್ಥಿಯನ್ನು ಆಯ್ಕೆಮಾಡುವಾಗಲಾದರೂ ಈ ಮೈತ್ರಿಪಕ್ಷಗಳು ಪ್ರೌಢತೆ ಮೆರೆಯದೆ, ಅದನ್ನೊಂದು 'ಹಾದಿರಂಪ-ಬೀದಿರಂಪ'ದ ಮಟ್ಟಕ್ಕೆ ತಂದು ನಿಲ್ಲಿಸುವುದಾದರೂ ಏಕೆ? ಇಂಥ ಒಳಜಗಳಗಳೇ ಮತದಾರರಲ್ಲಿ ಹೇವರಿಕೆ ಹುಟ್ಟಿಸುವುದಿಲ್ಲವೇ? ಎಂಬುದು ಜನಸಾಮಾನ್ಯರ ಪ್ರಶ್ನೆ. 'ಜೆಡಿಎಸ್‌ಗೆ ಪುನರ್ಜನ್ಮ ಕೊಟ್ಟಿದ್ದೇ ಬಿಜೆಪಿ; ಕುಮಾರಸ್ವಾಮಿ ಅವರು ಚನ್ನಪಟ್ಟಣದ ಟಿಕೆಟ್ ತ್ಯಾಗ ಮಾಡಲಿ' ಎಂಬ ಕಮಲಪಾಳಯದ ನಾಯಕರೊಬ್ಬರ ಮಾತಿಗೆ, 'ತ್ಯಾಗದ ಬಗ್ಗೆ ಮಾತಾಡುವವರು ತಮ್ಮ ಆತ್ಮಕ್ಕೆ ಕೇಳಿಕೊಳ್ಳಲಿ' ಎಂಬುದಾಗಿ 'ದಳಪತಿ' ತಿರುಗುಬಾಣ ಬಿಟ್ಟಿರುವುದು ಜನರ ಈ ಪ್ರಶ್ನೆಗೆ ಪುಷ್ಟಿ ನೀಡುತ್ತದೆ. 'ಚನ್ನಪಟ್ಟಣಕ್ಷೇತ್ರದಲ್ಲಿ ನಿಲ್ಲಬೇಕಾದ ಅಭ್ಯರ್ಥಿ ಬಿಜೆಪಿಯವರಾಗಿರಬೇಕೋ ಅಥವಾ ಜೆಡಿಎಸ್‌ನವರಾಗಿರಬೇಕೋ?' ಎಂಬ ಕಿತ್ತಾಟಕ್ಕಿಂತ, 'ಜನಹಿತದ ರಕ್ಷಣೆಯೇ ಇಲ್ಲಿ ಮೂಲಮಂತ್ರವಾಗಬೇಕು' ಎಂಬ ಗ್ರಹಿಕೆಯನ್ನು ಅಪ್ಪಿದರೆ, ಅಭ್ಯರ್ಥಿಯ ಆಯ್ಕೆ ಕಷ್ಟವೇನೂ ಆಗುವುದಿಲ್ಲ. ಆದರೆ, ಇಲ್ಲೂ ತಂತಮ್ಮ ಪ್ರತಿಷ್ಠೆ ಮೆರೆಯಲು ಮೇಲಾಟ ನಡೆಸುತ್ತಿರುವ ಬಿಜೆಪಿ ಮತ್ತು ಜೆಡಿಎಸ್ ಎಂಬ 'ಅಪ್ಪ-ಅಮ್ಮ' ತಮ್ಮ ಈ ತರವಲ್ಲದ ಜಗಳದಿಂದ ಮತದಾರನೆಂಬ ಕೂಸು ಬಡವಾಗುತ್ತದೆ, ಜನಕಲ್ಯಾಣದ ಹಿತಾಸಕ್ತಿಗೆ ಅದು ಮಾರಕವಾಗುತ್ತದೆ ಎಂಬ ಸೂಕ್ಷ್ಮವನ್ನು ಇನ್ನೂ ಗ್ರಹಿಸಿದಂತಿಲ್ಲ. ಬಿಜೆಪಿ ಮತ್ತು ಜೆಡಿಎಸ್ ಎಂಬ ಈ ಜೋಡೆತ್ತುಗಳಿಗೆ ಇನ್ನಾದರೂ ಜ್ಞಾನೋದಯವಾಗಲಿ. ಏಕೆಂದರೆ, 'ಎತ್ತು ಏರಿಗೆಳೆದರೆ, ಕೋಣ ನೀರಿಗಿಳಿಯಿತು' ಎಂಬ ಸಾಕಷ್ಟು ಪ್ರಸಂಗಗಳನ್ನು ನೋಡಿ ಜನ ರೋಸತ್ತಿದ್ದಾರೆ.

ಸೊಂಪಾದಕೀಯ

'ಕಾಪಿ ಚೇಷ್ಟೆ'ಗೆ ಬ್ರೇಕ್

ಜಗತ್ತಿನ ಅತಿ ಪುರಾತನ ಕಲೆಗಳಲ್ಲಿ ಒಂದು ಎಂದರೆ ಅದು ಪರೀಕ್ಷೆಗಳಲ್ಲಿ ಕಾಪಿ ಹೊಡೆಯುವುದು. ಕಾಪಿ ಎಂದರೆ ನಕಲು ಮಾಡುವುದು ಎಂಬ ಅರ್ಥ ಬಂದರೂ ಕಾಪಿ ಹೊಡೆಯುವುದರಲ್ಲೂ ಕ್ರಿಯೇಟಿವಿಟಿ ಉಂಟು. ಇನ್ನೊಬ್ಬರು ಬರೆದಿದ್ದನ್ನು ಅಥವಾ ಪುಸ್ತಕದ ತುಣುಕುಗಳನ್ನು ನೋಡಿಕೊಂಡು ಅದನ್ನೇ ಭಟ್ಟಿ ಇಳಿಸುವಿಕೆ ಎಂಬ ಕಾರಣಕ್ಕೆ ಅದು ಬಿಟ್ಟಿ ಇಳಿಸುವಿಕೆ ಎಂದುಕೊಂಡರೂ ಅದರಲ್ಲೂ ಹಲವು ವಿಧಾನಗಳಿವೆ. ಬಗ್ಗಿ ನೋಡಿ ಬರೆಯುವುದು ಮತ್ತು ನಾಗರಹಾವಿನ ರಾಮಾಚಾರಿಯಂತೆ ಚೀಟಿಗಳನ್ನು ಮೈತುಂಬ ಅಂಟಿಸಿಕೊಂಡು ಪರೀಕ್ಷೆಗೆ ಹೋಗುವುದು, ಹೀಗೆ ಎರಡೂ ರೀತಿಯ ಕಾಪಿ ಮಾಡುವುದರಲ್ಲಿ ನಮ್ಮ ಹುಡುಗರು ಮತ್ತು ಹುಡುಗಿಯರು ನಿಸ್ಸೀಮರು. ಅದರಲ್ಲೂ ಆಧುನಿಕತೆ ಹೆಚ್ಚಾದಂತೆ, ಕ್ಲಾಸು ನಡೆಯುವ ತರಗತಿಗಳಲ್ಲೇ ಕುಳಿತು ಪರೀಕ್ಷೆ ಬರೆಯುವಾಗ ಹೊಸ ಹೊಸ ವಿಧಾನಗಳಲ್ಲಿ ಕಾಪಿ ಮಾಡುವುದನ್ನು ನಮ್ಮ ವಿದ್ಯಾರ್ಥಿಗಳು ಕರಗತ ಮಾಡಿಕೊಂಡಿದ್ದಾರೆ. ಹಾಗಾಗಿ ಕಾಪಿ ಹೊಡೆಯುವುದು ಈಗ ಬರೀ ಚೀಟಿಗೆ ಸೀಮಿತವಾಗಿ ಉಳಿದಿಲ್ಲ, ಅದು ಬ್ಲೂಟೂತ್ ಅನ್ನೂ ಮೀರಿ ಬೆಳೆದಿದೆ. ಇದು ಪರೀಕ್ಷೆ ಆಯೋಜನೆ ಮಾಡುವವರಿಗೆ ಸವಾಲ್ ಆಗಿ ಪರಿಣಮಿಸಿದೆ. ಹಾಗಾಗಿ ಪ್ರಶ್ನೆ ಪತ್ರಿಕೆಯಲ್ಲಿ ಕೇಳುವ ಸವಾಲುಗಳಿಗೆ ವಿದ್ಯಾರ್ಥಿಗಳು ಕಾಪಿ ಮಾಡಿ ಉತ್ತರ ಬರೆಯದಂತೆ ಮಾಡಲು ಹಲವು ಹೊಸ ನಿಯಮಗಳನ್ನು ಜಾರಿಗೆ ತರಲು ಸರಕಾರ ಯೋಚನೆ ಮಾಡುತ್ತಿದೆ. ಪರೀಕ್ಷಾ ಬೋರ್ಡ್ ಪ್ರಕಾರ ಈಗ ವಿದ್ಯಾರ್ಥಿಗಳು ಪರೀಕ್ಷೆಗೆ ರೈಟಿಂಗ್ ಬೋರ್ಡ್ ಮತ್ತು ಟೈ ಕಟ್ಟಿಕೊಂಡು ಹೋಗುವಂತಿಲ್ಲವಂತೆ. ಸಿಲೆಬಸ್‌ನಲ್ಲಿ ಇರುವ ಹೊತ್ತಿಗೆಗಳನ್ನು ಓದದ ವಿದ್ಯಾರ್ಥಿಗಳು ಪೇಪರ್ ಒತ್ತಿಗೆ ಹಿಡಿದುಕೊಂಡು ಬರೆಯುವ ರೈಟಿಂಗ್ ಪ್ಯಾಡ್‌ನಲ್ಲಿ ಉತ್ತರಗಳನ್ನು ಬರೆದುಕೊಂಡು ಹೋಗುತ್ತಿರುವುದೇ ಇದಕ್ಕೆ ಕಾರಣ. ಇದರ ಜತೆಗೆ ನೀನು ಚಾಪೆ ಕೆಳಗೆ ತೂರಿದರೆ, ನಾನು ರಂಗೋಲಿ ಕೆಳಗೆ ತೂರುತ್ತೇನೆ ಎನ್ನುವಂತೆ ಕುತ್ತಿಗೆಗೆ ಕಟ್ಟಿಕೊಳ್ಳುವ ಟೈಯಲ್ಲೂ ಉತ್ತರಗಳನ್ನು ಬರೆದಿರುವ ಚೀಟಿಗಳನ್ನು ತೂರಿಸಿಕೊಂಡು ಬರುವ ವಿದ್ಯಾರ್ಥಿಗಳಿಗೂ ಕಡಿವಾಣ ಹಾಕಲಾಗುತ್ತಿದೆ. ಹಾಗಾಗಿ ಇನ್ನು ಮುಂದೆ, ಎಲ್ಲಿ ಬೇಕೆಂದರಲ್ಲಿ ಉತ್ತರ ಬರೆದಿರುವ ಚೀಟಿಗಳನ್ನು ತೂರಿಸಿಕೊಳ್ಳಲು ಸಾಧ್ಯವಾಗದೆ, ಕೇವಲ ಮಾಸ್ಟರ್‌ಗಳಿಗೆ ಗೊತ್ತಾಗದಂತೆ ಮುಂದೆ, ಹಿಂದೆ, ಅಕ್ಕ, ಪಕ್ಕ ಕುಳಿತ ಬುದ್ಧಿವಂತ ಹುಡುಗ, ಹುಡುಗಿಯರನ್ನು 'ತೋರ್ಸೋ ತೋರ್ಸೋ' ಎಂದು ಕೇಳುವುದಷ್ಟೇ ಕಾಪಿ ಮಾಸ್ಟರ್‌ಗಳಿಗೆ ಉಳಿದಿರುವ ದಾರಿ.

ಸಂಪಾದಕರ ಸದ್ಯಶೋಧನೆ

ವಿಮಾನವನ್ನು ಇಳಿಸುವುದು

ವಿಮಾನವನ್ನು ಟೇಕಾಫ್ ಮಾಡುವುದಕ್ಕಿಂತ, ಇಳಿಸುವುದು (ಲ್ಯಾಂಡ್ ಮಾಡುವುದು) ಹೆಚ್ಚು ಕಸರತ್ತಿನ ಕೆಲಸ. ಲ್ಯಾಂಡ್ ಮಾಡುವಾಗ ಪೈಲಟ್ ಹೆಚ್ಚು ಜಾಗರೂಕನಾಗಿರಬೇಕು. ವಿಮಾನವನ್ನು ಇಳಿಸುವುದು ಒಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಹಲವಾರು ಹಂತಗಳು ಮತ್ತು ಪರಿಗಣಿಸಬೇಕಾದ ಅಂಶಗಳಿರುತ್ತವೆ. ಇದು ವಿಮಾನವನ್ನು ಟೇಕಾಫ್ ಮಾಡುವುದಕ್ಕಿಂತ ಹೆಚ್ಚಿನ ಕೌಶಲವನ್ನು ಅಪೇಕ್ಷಿಸುತ್ತದೆ. ಇದು ಒಂದು ಸಮಗ್ರವಾದ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಹವಾಮಾನ ಪರಿಸ್ಥಿತಿಗಳು, ವಿಮಾನದ ತೂಕ, ಇಂಧನ ಮಟ್ಟ, ಏರ್‌ಟ್ರಾಫಿಕ್ ನಿಯಂತ್ರಣ ಸೂಚನೆಗಳು ಮತ್ತು ಇನ್ನೂ ಹಲವು ಅಂಶಗಳು ಅಡಕವಾಗಿರುತ್ತವೆ. ಒಬ್ಬ ಪೈಲಟ್‌ನ ಕಸುಬುದಾರಿಕೆ ಅವನು ವಿಮಾನವನ್ನು ಹೇಗೆ ಇಳಿಸುತ್ತಾನೆ ಎಂಬುದನ್ನು ಅವಲಂಬಿಸಿರುತ್ತದೆ. ಇದಕ್ಕೆ 'ಪೈಲಟ್ ಪ್ರಿಸಿಷನ್' ಅಂತಾರೆ. ಅಂದರೆ ಪೈಲಟ್ ಎಷ್ಟು ನಿಖರವಾಗಿರಬೇಕು, ಕರಾರುವಾಕ್ಕಾಗಿ ಇರಬೇಕು ಎಂಬುದನ್ನು ಆತನ ಲ್ಯಾಂಡಿಂಗ್ ಪರಿಣತಿಯಿಂದ ನಿರ್ಧರಿಸಬಹುದು. ವಿಮಾನವನ್ನು ಇಳಿಸುವ ಮುನ್ನ ಪೈಲಟ್ ಸಣ್ಣ ಸಣ್ಣ ಸಂಗತಿಗಳ ಮೇಲೆಯೂ ನಿಗಾ ಇಡಬೇಕಾಗುತ್ತದೆ. ವಿಮಾನವನ್ನು ಇಳಿಸುವ ಮುನ್ನ ಪೈಲಟ್‌ಗಳು ತಮ್ಮ ಗಮ್ಯಸ್ಥಾನದ ಹವಾಮಾನ ವರದಿಯನ್ನು ಪರಿಶೀಲಿಸುತ್ತಾರೆ. ಇದರಲ್ಲಿ ಗಾಳಿಯ ವೇಗ, ದಿಕ್ಕು, ಬೆಳಕು, ಮಳೆ, ಮಂಜು ಮತ್ತು ಇತರ ಹವಾಮಾನ ಪರಿಸ್ಥಿತಿಗಳು ಸೇರಿರುತ್ತವೆ. ವಿಮಾನದ ತೂಕ ಮತ್ತು ಸಮತೋಲನವನ್ನು ಎಚ್ಚರಿಕೆಯಿಂದ ಲೆಕ್ಕಹಾಕಬೇಕಾಗುತ್ತದೆ. ಇದು ವಿಮಾನದ ಇಳಿಯುವ ವೇಗ ಮತ್ತು ದೂರವನ್ನು ನಿರ್ಧರಿಸಲು ಸಹಾಯಕ. ವಿಮಾನವನ್ನು ಲ್ಯಾಂಡ್ ಮಾಡುವ ಮುನ್ನ ವಿಮಾನದಲ್ಲಿ ಸಾಕಷ್ಟು ಇಂಧನ ಇದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುತ್ತಾರೆ. ಕೆಲವೊಮ್ಮೆ ವಿಮಾನವನ್ನು ಇಳಿಸಲು ಅನುಮತಿ ಸಿಗದಿದ್ದಾಗ, ಆಕಾಶದಲ್ಲಿ ಸುತ್ತು ಹಾಕಬೇಕಾಗುತ್ತದೆ. ಇಳಿಯುವ ಸಮಯದಲ್ಲಿ ಇಂಧನ ಕೊರತೆ ಒಂದು ಗಂಭೀರ ಸಮಸ್ಯೆ ಆಗಲೂಬಹುದು. ಪೈಲಟ್‌ಗಳು ಏರ್‌ಟ್ರಾಫಿಕ್ ನಿಯಂತ್ರಣದೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುತ್ತಾರೆ. ಅವರಿಂದ ಇಳಿಯುವ ಅನುಮತಿ ಮತ್ತು ಮಾರ್ಗದರ್ಶನವನ್ನು ಪಡೆಯಬೇಕಾಗುತ್ತದೆ. ವಿಮಾನ ಸಂಚಾರ ನಿಯಂತ್ರಣ ಅಧಿಕಾರಿಗಳ ಸೂಚನೆಯನ್ನು ಪಾಲಿಸಬೇಕಾಗುತ್ತದೆ. ಇಳಿಯುವ ಮೊದಲು, ಪೈಲಟ್‌ಗಳು ಒಂದು ವಿಸ್ತೃತ ಚೆಕ್‌ಲಿಸ್ಟ್ ಅನ್ನು ಅನುಸರಿಸುತ್ತಾರೆ. ಇದರಲ್ಲಿ ಎಲ್ಲ ವ್ಯವಸ್ಥೆಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂದು ಪರಿಶೀಲಿಸುವುದು ಕೂಡ ಸೇರಿದೆ. ವಿಮಾನವು ಲ್ಯಾಂಡ್ ಆಗುವಾಗ, ಪೈಲಟ್‌ಗಳು ವಿಮಾನದ ವೇಗವನ್ನು ಕಡಿಮೆ ಮಾಡುತ್ತಾರೆ ಮತ್ತು ಲ್ಯಾಂಡಿಂಗ್ ಗೇರ್ ಅನ್ನು ಕೆಳಗಿಳಿಸುತ್ತಾರೆ. ವಿಮಾನದ ರೆಕ್ಕೆಗಳ ಮೇಲಿನ ಫ್ಲ್ಯಾಪ್‌ಗಳನ್ನು ವಿಸ್ತರಿಸಬೇಕಾಗುತ್ತದೆ. ಇದು ವಿಮಾನದ ಎತ್ತುವಿಕೆಯನ್ನು ಹೆಚ್ಚಿಸುತ್ತದೆ ಮತ್ತು ಇಳಿಯುವ ವೇಗವನ್ನು ಕಡಿಮೆ ಮಾಡುತ್ತದೆ. ಪೈಲಟ್‌ಗಳು ಗ್ಲೈಡ್ ಸ್ಲೋಪ್ ಅನ್ನು ಅನುಸರಿಸುತ್ತಾರೆ. ಇದು ವಿಮಾನ ನಿಲ್ದಾಣದ ರನ್‌ವೇಗೆ ಸುರಕ್ಷಿತವಾದ ಕೋನದಲ್ಲಿ ಇಳಿಯಲು ಸಹಾಯ ಮಾಡುತ್ತದೆ. ಲ್ಯಾಂಡ್ ಮಾಡುವಾಗ ಟಚ್‌ಡೌನ್ ಬಹಳ ಮುಖ್ಯ. ವಿಮಾನವು ರನ್‌ವೇಯನ್ನು ಸ್ಪರ್ಶಿಸಿದಾಗ, ಪೈಲಟ್‌ಗಳು ಬ್ರೇಕ್‌ಗಳನ್ನು ಅನ್ವಯಿಸುತ್ತಾರೆ ಮತ್ತು ವಿಮಾನವನ್ನು ನಿಲ್ಲಿಸುತ್ತಾರೆ. ಇಳಿದ ನಂತರ ವಿಮಾನವನ್ನು ರನ್‌ವೇಯಿಂದ ಟ್ಯಾಕ್ಸಿವೇ ಕಡೆಗೆ ತೆಗೆದುಕೊಂಡು ನಿಗದಿತ ಸ್ಥಳದಲ್ಲಿ ಪಾರ್ಕ್ ಮಾಡಬೇಕಾಗುತ್ತದೆ. ವಿಮಾನ ಇಳಿಸುವುದು ಒಂದು ಸಂಕೀರ್ಣವಾದ ಮತ್ತು ನಿಖರವಾದ ಪ್ರಕ್ರಿಯೆಯಾಗಿದ್ದು, ಇದು ಹಲವಾರು ವರ್ಷಗಳ ತರಬೇತಿ ಮತ್ತು ಅನುಭವವನ್ನು ತೆಗೆದುಕೊಳ್ಳುತ್ತದೆ. ಪೈಲಟ್‌ಗಳು ಹತ್ತಾರು ಪರೀಕ್ಷೆಗಳನ್ನು ಪಾಸು ಮಾಡಿದ ನಂತರವಷ್ಟೇ ವಿಮಾನವನ್ನು ಇಳಿಸಲು ಅನುಮತಿಸಲಾಗುತ್ತದೆ. ವಿಮಾನ ಇಳಿಸುವಾಗ ಪೈಲಟ್ ಅನುಸರಿಸಬೇಕಾದ ಹಲವು ಕ್ರಮಗಳ ಪೈಕಿ ಒಂದು ಸಣ್ಣ ಲೋಪವಾದರೂ ಅದರ ಪರಿಣಾಮ ಲ್ಯಾಂಡಿಂಗ್‌ನಲ್ಲಿ ಅನುಭವಕ್ಕೆ ಬರುತ್ತದೆ.

ಕುಮಾರಣ್ಣ ಒಪ್ಪಿದ್ರೂ ಯೋಗಿ ಒಪ್ಪಿಲ್ಲ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರನ್ನು ಮೊನ್ನೆ ಭೇಟಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಬಗ್ಗೆ ನಡ್ಡಾ ಪ್ರಸ್ತಾಪಿಸಿದ್ದಾರೆ. ''ಕುಮಾರಸ್ವಾಮೀಜಿ, ಚನ್ನಪಟ್ಟಣ ಕ್ಷೇತ್ರದ ಬೈ ಎಲೆಕ್ಷನ್ನಿಗೆ ಸಂಬಂಧಿಸಿದಂತೆ ನಾವು ವರದಿ ತರಿಸಿಕೊಂಡಿದ್ದೇವೆ. ಎಷ್ಟೇ ಆದರೂ ಅದು ನಿಮ್ಮ ಕ್ಷೇತ್ರ. ಹೀಗಾಗಿ ನೀವು ನಿಮ್ಮ ಪುತ್ರನನ್ನು ಅಲ್ಲಿಂದ ಕಣಕ್ಕಿಳಿಸುತ್ತೀರೋ? ನಿಮ್ಮ ಕುಟುಂಬದ ಬೇರೊಬ್ಬರನ್ನು ಕಣಕ್ಕಿಳಿಸುತ್ತೀರೋ? ಅಥವಾ ನಿಮ್ಮ ಪಕ್ಷದ ಕಾರ್ಯಕರ್ತರೊಬ್ಬರನ್ನು ಕಣಕ್ಕಿಳಿಸುತ್ತೀರೋ? ಅದು ನಿಮ್ಮಿಚ್ಚೆಗೆ ಸಂಬಂಧಿಸಿದ್ದು. ಅರ್ಥಾತ್, ನೀವು ಯಾರನ್ನೇ ಅಭ್ಯರ್ಥಿಯನ್ನಾಗಿ ಮಾಡಿ ನಮಗೆ ಹೇಳಿದರೆ, ನಾವು ಬಿಜೆಪಿ ನಾಯಕರು ಅಲ್ಲಿಗೆ ಬಂದು ಪ್ರಚಾರ ಮಾಡಿಹೋಗುತ್ತೇವೆ. ಹಾಗೊಂದು ವೇಳೆ ನೀವು ನಮಗೂ ಒಂದು ಆಪ್ಷನ್ ಕೊಡಲು ರೆಡಿ ಇರುವುದಾದರೆ ನಮ್ಮ ಪಕ್ಷದ ಸಿ.ಪಿ.ಯೋಗೇಶ್ವರ್ ಅವರಿಗೆ ಟಿಕೆಟ್ ಬಿಟ್ಟುಕೊಡಲು ಸಾಧ್ಯವಾ? ಅಂತ ಯೋಚಿಸಿ. ಹಾಗಂತ ಯೋಗೇಶ್ವರ್ ಬಿಜೆಪಿಯ ಅಭ್ಯರ್ಥಿಯಾಗಬೇಕು ಅಂತಲ್ಲ, ಯಾಕೆಂದರೆ ಅದು ಜೆಡಿಎಸ್ ಕ್ಷೇತ್ರವಾದ್ದರಿಂದ ಬಿಟ್ಟುಕೊಡುವುದು ನಿಮಗೆ ಕಷ್ಟವಾಗಬಹುದು. ಹೀಗಾಗಿ ಯೋಗೇಶ್ವರ್ ಅವರು ನಿಮ್ಮ ಪಕ್ಷದ ವತಿಯಿಂದಲೇ ಅಭ್ಯರ್ಥಿಯಾಗಲಿ. ಫೈನಲಿ ಕಣಕ್ಕಿಳಿಯುವುದು ಎನ್‌ಡಿಎ ಅಭ್ಯರ್ಥಿಯಾದ್ದರಿಂದ ಯೋಗೇಶ್ವರ್ ನಿಮ್ಮ ಪಕ್ಷದ ಚಿಹ್ನೆಯಡಿ ಸ್ಪರ್ಧಿಸಲು ಸಮಸ್ಯೆ ಇಲ್ಲ'' ಅಂತ ನಡ್ಡಾ ಹೇಳಿದ್ದಾರೆ.

ಯಾವಾಗ ನಡ್ಡಾ ಈ ವಿಷಯ ಪ್ರಸ್ತಾಪಿಸಿದರೋ, ಕ್ಷಣಕಾಲ ಮೌನಿಯಾದ ಕುಮಾರಸ್ವಾಮಿ ತದನಂತರ, ''ಸರ್, ಈಬಗ್ಗೆ ಯೋಚಿಸಲು ನನಗೆ ಎರಡು ದಿನ ಟೈಮು ಕೊಡಿ. ಯಾಕೆಂದರೆ ಯೋಗೇಶ್ವರ್ ಅವರಿಗೆ ಪಕ್ಷದ ಟಿಕೆಟ್ ಕೊಡುವ ಬಗ್ಗೆ ಮೊದಲು ನಮ್ಮ ಪಕ್ಷದ ಸ್ಥಳೀಯ ನಾಯಕರ ಜತೆ ಚರ್ಚಿಸಬೇಕು'' ಎಂದಿದ್ದಾರೆ. ಕುಮಾರಸ್ವಾಮಿಯವರ ಮಾತು ಕೇಳಿದ ನಡ್ಡಾ, ''ಅದೂ ಸರಿ ಕುಮಾರಸ್ವಾಮೀಜಿ. ನೀವು ನಿಮ್ಮ ಪಕ್ಷದ ನಾಯಕರ ಜತೆ ಚರ್ಚಿಸಿ ಒಂದು ಪಾಸಿಟಿವ್ ಡಿಸಿಷನ್ನಿಗೆ ಬನ್ನಿ'' ಎಂದಿದ್ದಾರೆ. ಇದಾದ ನಂತರ ಕುಮಾರಸ್ವಾಮಿ ಅವರು ಈ ವಿಷಯವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಗಮನಕ್ಕೆ ತಂದಿದ್ದಾರೆ ಮತ್ತು ವಿಷಯ ತಿಳಿದ ಅಮಿತ್ ಶಾ ಕೂಡಾ ಕುಮಾರಸ್ವಾಮಿ ಅವರ ಫ್ಲೆಕ್ಸಿಬಿಲಿಟಿಯ ಬಗ್ಗೆ ತಾರೀಫು ಮಾಡಿದರಂತೆ

ಯೋಗೇಶ್ವರ್‌ಗೆ ಟಿಕೆಟ್ ಬೇಡಣ್ಣೋ ಅಂದ್ರು

ಹೀಗೆ ದಿಲ್ಲಿಯಲ್ಲಿ ನಡ್ಡಾ ಅವರ ಜತೆ ನಡೆದ ಮಾತುಕತೆಯ ನಂತರ ಸೀದಾ ಕರ್ನಾಟಕಕ್ಕೆ ಬಂದ ಕುಮಾರಸ್ವಾಮಿ ಅವರು ತಮ್ಮ ಪಕ್ಷದ ನಾಯಕರು ಮತ್ತು ಚನ್ನಪಟ್ಟಣದ ಸ್ಥಳೀಯ ನಾಯಕರ ಜತೆ ಸಮಾಲೋಚನೆ ನಡೆಸಿದ್ದಾರೆ. ಬಿಜೆಪಿ ನಾಯಕರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ್ ಮತ್ತು ಅಶ್ವತ್ಥನಾರಾಯಣ ಅವರೆಲ್ಲ, ಯೋಗೇಶ್ವರ್ ಅವರಿಗೆ ಟಿಕೆಟ್ ಕೊಡಲು ಒತ್ತಾಯಿಸುತ್ತಿರುವುದು ಸೇರಿದಂತೆ ಬಿಜೆಪಿಯ ವರಿಷ್ಠರು ಹೇಳಿದ್ದನ್ನೆಲ್ಲ ಈ ಸಭೆಯ ಗಮನಕ್ಕೆ ತಂದಿದ್ದಾರೆ.

ಕುಮಾರಸ್ವಾಮಿ ಅವರು ಈ ವಿಷಯ ಪ್ರಸ್ತಾಪಿಸುತ್ತಿದ್ದಂತೆಯೇ ಉರಿದುಬಿದ್ದ ಹಲ ನಾಯಕರು, ''ಸರ್, ಯಾವ ಕಾರಣಕ್ಕಾಗಿ ಯೋಗೇಶ್ವರ್ ಅವರಿಗೆ ಟಿಕೆಟ್ ಕೊಡುತ್ತೀರಿ? ಅವರನ್ನು ನಂಬಿ ನಾವು ಟಿಕೆಟ್ ಕೊಡಲು ಸಾಧ್ಯವೇ? ಸಾಲದೆಂಬಂತೆ, 'ಕುಮಾರಸ್ವಾಮಿ ಒಕ್ಕಲಿಗ ನಾಯಕರನ್ನು ಮುಗಿಸುತ್ತಿದ್ದಾರೆ' ಅನ್ನುವಂಥ ಹೇಳಿಕೆಗಳನ್ನು ಅವರು ಕೊಡುತ್ತಿದ್ದಾರೆ. ಹೀಗೆ ಇಷ್ಟ ಬಂದಂತೆ ಮಾತನಾಡುತ್ತಿರುವ ಯೋಗೇಶ್ವರ್ ಅವರಿಗೆ ಜೆಡಿಎಸ್ ಟಿಕೆಟ್ ಕೊಡುವುದು ಸರಿಯಲ್ಲ'' ಅಂತ ಕಿರಿಕಿರಿ ಮಾಡಿದ್ದಾರೆ. ಆದರೆ ಹೀಗೆ ಕಿರಿಕಿರಿ ಮಾಡಿದವರನ್ನು ಸಮಾಧಾನಿಸಿದ ಕುಮಾರಸ್ವಾಮಿ ಅವರು, ''ನೋಡಿ, ಯೋಗೇಶ್ವರ್ ಅವರ ವಿಷಯದಲ್ಲಿ ನಿಮಗೆ ಅಸಮಾಧಾನವಾಗಿರುವುದು ಸಹಜ. ಆದರೆ ಇವತ್ತು ನಾವು ಎನ್‌ಡಿಎ ಮೈತ್ರಿಕೂಟದ ಭಾಗವಾಗಿದ್ದೇವೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಅವರು ನಮ್ಮನ್ನು ಎಷ್ಟು ವಿಶ್ವಾಸದಿಂದ ಕಾಣುತ್ತಿದ್ದಾರೆ ಎಂದರೆ, ಅದನ್ನು ನಾವು ಮರೆಯಲು ಸಾಧ್ಯವಿಲ್ಲ. ಇದೇ ರೀತಿ ಅವರು ನಮ್ಮ ಮೇಲೆ ಇಟ್ಟಿರುವ ನಂಬಿಕೆ, ತೋರಿಸುತ್ತಿರುವ ಪ್ರೀತಿಯ ಮುಂದೆ ಚನ್ನಪಟ್ಟಣದ ಟಿಕೆಟ್ ನಮಗೇ ಇರಲಿ ಅಂತ ನಾವು ರಚ್ಚೆ ಹಿಡಿಯುವುದೂ ತರವಲ್ಲ. ಹೀಗಾಗಿ ನಿಮ್ಮ ಮನಸ್ಸಿನ ಭಾವನೆ ಏನಿದೆಯೋ ಅದನ್ನೂ ಯೋಗೇಶ್ವರ್ ಅವರ ಗಮನಕ್ಕೆ ತರೋಣ. ಆಗಿದ್ದನ್ನು ಸರಿಪಡಿಸಿಕೊಂಡು ಹೋಗೋಣ ಅಂತ ಮನವರಿಕೆ ಮಾಡಿಕೊಟ್ಟು ಜೆಡಿಎಸ್ ಟಿಕೆಟ್ ಕೊಡೋಣ'' ಎಂದಿದ್ದಾರೆ. ಹೀಗೆ ಕುಮಾರಸ್ವಾಮಿ ಅವರಾಡಿದ ಮಾತಿನಿಂದ ಸಭೆಯಲ್ಲಿದ್ದವರಿಗೆ ಪೂರ್ತಿ ಸಮಾಧಾನವಾಗದಿದ್ದರೂ ದಿಲ್ಲಿ ರಾಜಕಾರಣದ ಒಳಸುಳಿಗಳೇನಿವೆಯೋ? ಅಂತ ಮೌನವಾಗಿದ್ದಾರೆ.

ಯೋಗೇಶ್ವರ್ ಉಲ್ಟಾ ಹೊಡೆದಿದ್ದೇಕೆ?

ಸಭೆಯ ನಂತರ ಕುಮಾರಸ್ವಾಮಿ ಅವರು ಜೆಡಿಎಸ್ ಶಾಸಕಾಂಗ ನಾಯಕ ಸುರೇಶ್ ಬಾಬು, ನಾಗಮಂಗಲದ ಮಾಜಿ ಶಾಸಕ ಸುರೇಶ್ ಗೌಡ ಸೇರಿದಂತೆ ಹಲವು ನಾಯಕರ ಟೀಮನ್ನು ಯೋಗೇಶ್ವರ್ ಬಳಿ ಕಳಿಸಿದ್ದಾರೆ. ಹೀಗೆ ಹೋದವರು, ''ಯೋಗೇಶ್ವರ್ ಅವರೇ ನಿಮಗೆ ಟಿಕೆಟ್ ಕೊಡುವ ವಿಷಯದಲ್ಲಿ ನಮಗೆ ವಿರೋಧವೇನಿಲ್ಲ. ಆದರೆ ಕುಮಾರಸ್ವಾಮಿಯವರ ಬಗ್ಗೆ ನೀವು ಕೊಡುತ್ತಿರುವ ಸ್ಟೇಟ್‌ಮೆಂಟುಗಳಿಂದ ನಮಗೆ ಬೇಸರವಾಗಿದೆ. ಇಷ್ಟಾದರೂ ಎಲ್ಲವನ್ನೂ ಮರೆತು ಟಿಕೆಟ್ ಕೊಡಲು ಕುಮಾರಸ್ವಾಮಿಯವರು ಒಪ್ಪಿದ್ದಾರೆ. ನೀವೂ ನಿಮ್ಮ ನಿಲುವುಗಳನ್ನು ಬದಲಿಸಿ ಹೊಂದಿಕೊಂಡು ಹೋಗಿ. ನಮ್ಮ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಯಿರಿ'' ಎಂದಿದ್ದಾರೆ.

ಅವರು ಹೀಗೆ ಹೇಳುತ್ತಿದ್ದಂತೆಯೇ ಉಲ್ಟಾ ಹೊಡೆದ ಯೋಗೇಶ್ವರ್ ಅವರು, ''ನಾನು ಜೆಡಿಎಸ್ ಟಿಕೆಟ್ ಪಡೆದು ಸ್ಪರ್ಧಿಸುವುದಾ? ನೋ ಚಾನ್ಸ್. ನಮ್ಮದು ರಾಷ್ಟ್ರೀಯ ಪಕ್ಷಾರೀ. ನಾನೇಕೆ ರಾಷ್ಟ್ರೀಯ ಪಕ್ಷ ತೊರೆದು ಜೆಡಿಎಸ್ ಸೇರಲಿ? ಕರ್ನಾಟಕದಲ್ಲಿ ಬಿಜೆಪಿಯನ್ನು ಕಟ್ಟಲು ಶ್ರಮಿಸಿದವನು ನಾನು. ಇವತ್ತು ಮೋದಿಯವರು ಪ್ರಧಾನಿಯಾಗಲು ಕರ್ನಾಟಕ ಕೊಡುಗೆ ಕೊಟ್ಟಿದೆ ಎಂದರೆ ಇಲ್ಲಿ ಬಿಜೆಪಿ ಬಲಿಷ್ಠವಾಗಿದೆ ಅಂತಲೇ ಅರ್ಥ. ಹೀಗಾಗಿ ಯಾವ ಕಾರಣಕ್ಕೂ ನಾನು ಬಿಜೆಪಿ ತೊರೆಯುವುದಿಲ್ಲ, ಜೆಡಿಎಸ್ ಸೇರುವುದಿಲ್ಲ. ಕೊಡುವುದಿದ್ದರೆ ನೀವು ಬಿಜೆಪಿಗೇ ಸೀಟು ಬಿಟ್ಟುಕೊಡಬೇಕೇ ವಿನಾ ಬೇರೆ ದಾರಿಯೇ ಇಲ್ಲ'' ಎಂದಿದ್ದಾರೆ.

ಹೀಗೆ ಯೋಗೇಶ್ವರ್ ಔಟ್‌ರೈಟಾಗಿ ಉಲ್ಟಾ ಹೊಡೆದ ವಿಷಯ ಕುಮಾರಸ್ವಾಮಿ ಅವರಿಗೆ ತಲುಪಿದೆ. ಅಷ್ಟೇ ಅಲ್ಲ, ಬೇಸತ್ತ ಅವರು ವಿಷಯವನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮತ್ತು ಆರ್.ಅಶೋಕ್ ಅವರಿಗೆ ವಿವರಿಸಿದ್ದಾರೆ. ಯಾವಾಗ ಕುಮಾರಸ್ವಾಮಿ ಅವರು ಈ ವಿಷಯ ತಿಳಿಸಿದರೋ, ಆಗ ಬೆಂಗಳೂರಿನ ಜಾಲಹಳ್ಳಿಯಲ್ಲಿ ಸಭೆ ನಡೆಸಿದ ಬಿಜೆಪಿಯ ಹಲ ನಾಯಕರು, ಈ ವಿಷಯದಲ್ಲಿ ಇನ್ನು ಮಧ್ಯೆ ಪ್ರವೇಶಿಸುವುದು ಬೇಡ ಎಂಬ ನಿರ್ಧಾರಕ್ಕೆ ಬಂದಿದ್ದಾರೆ.

ಮೂಲಗಳ ಪ್ರಕಾರ, ಭಾನುವಾರ ಬೆಳಗ್ಗೆ ಕುಮಾರಸ್ವಾಮಿ ಅವರಿಗೆ ಫೋನು ಮಾಡಿದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ''ಕುಮಾರಸ್ವಾಮಿ ಅವರೇ, ನೀವು ಯಾರಿಗೆ ಬೇಕೋ ಅವರಿಗೆ ಟಿಕೆಟ್ ಕೊಡಿ. ಈ ವಿಷಯದಲ್ಲಿ ಇನ್ನು ತುಂಬ ಯೋಚಿಸಬೇಡಿ'' ಎಂದಿದ್ದಾರಂತೆ. ಹೀಗಾಗಿ ಚನ್ನಪಟ್ಟಣದಲ್ಲಿ ಜಯಮುತ್ತು ಕಣಕ್ಕಿಳಿಯಬೇಕೋ? ಇನ್ನೊಬ್ಬ ಅಚ್ಚರಿಯ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕೋ? ಅಂತ ಕುಮಾರಸ್ವಾಮಿ ಯೋಚಿಸುತ್ತಿದ್ದಾರೆ.

ಫೀಲ್ಡಿಗೆ ಇಳೀತಾರಾ ಸುರೇಶ್?

ಇನ್ನು ಚನ್ನಪಟ್ಟಣದ ಕಣಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸಹೋದರ ಡಿ.ಕೆ.ಸುರೇಶ್ ಇಳಿಯುವ ಲಕ್ಷಣಗಳು ಕಾಣಿಸಿಕೊಂಡಿವೆ. ಆದರೆ ಮೈತ್ರಿಕೂಟದ ಅಭ್ಯರ್ಥಿಯಾಗಿ ಸಿ.ಪಿ.ಯೋಗೇಶ್ವರ್ ಸ್ಪರ್ಧಿಸಿದರೆ ಡಿ.ಕೆ.ಸುರೇಶ್ ಫೀಲ್ಡಿಗಿಳಿಯುವುದು ಅನುಮಾನ. ಕಾರಣ? ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಬಲ ಕ್ರೋಡೀಕರಣಗೊಂಡರೆ ಕಾಂಗ್ರೆಸ್ ಗೆಲ್ಲುವುದು ಕಷ್ಟ. ಕ್ಷೇತ್ರದಲ್ಲಿ ಜೆಡಿಎಸ್‌ಗಿರುವ ಸಾಲಿಡ್ಡು ಬೆಂಬಲ, ಯೋಗೇಶ್ವರ್ ಅವರ ಹಿಂದಿರುವ 45 ಸಾವಿರ ಪ್ಲಸ್ ಮತಗಳು ಮೈತ್ರಿಕೂಟದ ಗೆಲುವನ್ನು ಸುಲಭಗೊಳಿಸಲಿವೆ.

ಆದರೆ ಈಗಿರುವ ಮಾಹಿತಿಗಳ ಪ್ರಕಾರ, ಯೋಗೇಶ್ವರ್ ಮೈತ್ರಿಕೂಟದ ಅಭ್ಯರ್ಥಿಯಾಗುವುದಿಲ್ಲ. ಹೀಗಾಗಿ ಜೆಡಿಎಸ್ ವತಿಯಿಂದ ಮೈತ್ರಿಕೂಟದ ಅಭ್ಯರ್ಥಿ ಕಣಕ್ಕಿಳಿದರೂ ಯೋಗೇಶ್ವರ್ ಬಂಡಾಯ ಏಳುವ ಸಾಧ್ಯತೆ ಜಾಸ್ತಿ. ಒಂದು ವೇಳೆ ಹೀಗೇನಾದರೂ ಆಗಿ ತ್ರಿಕೋನ ಸ್ಪರ್ಧೆ ಏರ್ಪಟ್ಟರೆ ಡಿ.ಕೆ.ಸುರೇಶ್ ಫೀಲ್ಡಿಗಿಳಿಯಲಿದ್ದಾರೆ. 'ಡಿಕೆ' ಕ್ಯಾಂಪಿಗೆ ತಲುಪಿರುವ ಮಾಹಿತಿಗಳ ಪ್ರಕಾರ, ತ್ರಿಕೋನ ಸ್ಪರ್ಧೆ ಏರ್ಪಟ್ಟರೆ ಕ್ಷೇತ್ರದ ಬಹುಸಂಖ್ಯಾತ ಒಕ್ಕಲಿಗರು 'ಡಿಕೆಸು' ಬೆಂಬಲಕ್ಕೆ ನಿಲ್ಲಲಿದ್ದಾರೆ. ಕಾರಣ? ನಮ್ಮವರಾದ ಕುಮಾರಸ್ವಾಮಿ ಈಗಾಗಲೇ ದಿಲ್ಲಿ ತಲುಪಿ ಕೇಂದ್ರ ಮಂತ್ರಿ ಆಗಿದ್ದಾರೆ. ಹೀಗಾಗಿ ಇಲ್ಲಿ ನಮ್ಮವರೇ ಆದ ಡಿಕೆಸು ಗೆಲ್ಲಲಿ. ಎಷ್ಟೇ ಆದರೂ ಡಿಕೆಸು ಕೆಲಸಗಾರ ಎಂಬುದು ಬಹುಸಂಖ್ಯಾತರ ಭಾವನೆ.

ಈ ಮಧ್ಯೆ ಕಳೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಯೋಗೇಶ್ವರ್ ವಿರುದ್ಧ ಗೆಲ್ಲುವ ಅಭ್ಯರ್ಥಿ ಅಂತ ಮುಸ್ಲಿಮರು ಕುಮಾರಸ್ವಾಮಿ ಜತೆ ನಿಂತಿದ್ದರು. ಆದರೆ ಈ ಸಲ ಹಾಗಲ್ಲ, ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಯ ವಿರುದ್ಧ ಕಾಂಗ್ರೆಸ್ ಗೆಲ್ಲಲಿ ಅಂತ ಅವರು ಬಯಸುತ್ತಾರೆ. ಹೀಗಾಗಿ ಒಕ್ಕಲಿಗ, ಮುಸ್ಲಿಂ, ಪರಿಶಿಷ್ಟರ ಮತಗಳನ್ನು ಕ್ರೋಡೀಕರಿಸಿ ಗೆಲ್ಲಬಹುದು ಎಂಬುದು ಡಿಕೆ ಕ್ಯಾಂಪಿಗಿರುವ ಮಾಹಿತಿ. ಆದರೆ ಇದು ಎಷ್ಟರ ಮಟ್ಟಿಗೆ ವರ್ಕ್‌ಔಟ್ ಆಗುತ್ತದೆ ಅಂತ ಡಿಕೆ ಕ್ಯಾಂಪು ಈ ಕ್ಷಣಕ್ಕೂ ಲೆಕ್ಕ ಹಾಕುತ್ತಿದೆ. ಮೈತ್ರಿಕೂಟದ ಅಭ್ಯರ್ಥಿ ಯಾರು ಎಂಬುದರ ಆಧಾರದ ಮೇಲೆ ಅದು ಮುಂದಿನ ಹೆಜ್ಜೆ ಇಡಲಿದೆ.

ಬೊಮ್ಮಾಯಿ ಪ್ಲೇಕಾರ್ಡ್ ಹೀಗಿದೆ

ಈ ಮಧ್ಯೆ ಉಪಚುನಾವಣೆ ನಡೆಯುವ ಶಿಗ್ಗಾಂವಿ ಕ್ಷೇತ್ರದ ರಾಜಕಾರಣ ಕುತೂಹಲ ಮೂಡಿಸುವಂತಿದೆ. ಕಾರಣ? ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ್ ಬೊಮ್ಮಾಯಿ ಕಣಕ್ಕಿಳಿಯಲಿದ್ದಾರೆ. ಯಾವಾಗ ಭರತ್ ಬೊಮ್ಮಾಯಿ ಸ್ಪರ್ಧಿಸುವುದು ನಿಕ್ಕಿ ಆಯಿತೋ, ಅದಾದ ನಂತರ ಕಾಂಗ್ರೆಸ್ ಪಾಳಯದಲ್ಲಿ ಬಿಸಿಬಿಸಿ ಚರ್ಚೆ ಆರಂಭವಾಗಿದೆ. ಈ ಚರ್ಚೆಯ ಪ್ರಕಾರ, ಶಿಗ್ಗಾಂವಿಯಲ್ಲಿ ಭರತ್ ಬೊಮ್ಮಾಯಿ ವಿರುದ್ಧ ಗೆಲ್ಲಬೇಕೆಂದಿದ್ದರೆ ಪಕ್ಷವು ಪಂಚಮಸಾಲಿ ಲಿಂಗಾಯತರೊಬ್ಬರಿಗೆ ಟಿಕೆಟ್ ಕೊಡಬೇಕು. ಇಲ್ಲ, ಭರತ್ ಬೊಮ್ಮಾಯಿ ಗೆಲ್ಲಬೇಕು ಅಂತಿದ್ದರೆ ಮುಸ್ಲಿಮರೊಬ್ಬರಿಗೆ ಟಿಕೆಟ್ ಕೊಡಬೇಕು. ಕಾರಣ? ಕ್ಷೇತ್ರದಲ್ಲಿ 60 ಸಾವಿರಕ್ಕೂ ಹೆಚ್ಚು ಪಂಚಮಸಾಲಿ ಲಿಂಗಾಯತರಿದ್ದಾರೆ. ಹೀಗಾಗಿ ಈ ಸಮುದಾಯದವರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕರೆ 40 ಸಾವಿರಷ್ಟಿರುವ ಮುಸ್ಲಿಮರು, 35 ಸಾವಿರದಷ್ಟಿರುವ ಕುರುಬರು ಮತ್ತು ಗಣನೀಯ ಸಂಖ್ಯೆಯಲ್ಲಿರುವ ಪರಿಶಿಷ್ಟರ ಮತಗಳನ್ನು ಕನ್‌ಸಾಲಿಡೇಟ್ ಮಾಡಿ ಕಾಂಗ್ರೆಸ್ ಗೆಲ್ಲಬಹುದು. ಹಾಗೆ ಮಾಡದೆ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ ಪಂಚಮಸಾಲಿ ಲಿಂಗಾಯತರ ಮತಗಳು ಸಾಲಿಡ್ಡಾಗಿ ಭರತ್ ಬೊಮ್ಮಾಯಿ ಪಾಲಾಗುತ್ತವೆ. ಹೀಗೆ ಪಂಚಮಸಾಲಿ ಲಿಂಗಾಯತರ ಸಾಲಿಡ್ಡು ಬೆಂಬಲ ಸಿಕ್ಕರೆ, ಸಾದ ಲಿಂಗಾಯತರು, ಪರಿಶಿಷ್ಟರ ಪೈಕಿ ಎಡಗೈ ಮತಗಳು ಸೇರಿದರೆ ಭರತ್ ಬೊಮ್ಮಾಯಿ ಗೆಲುವು ಸುಲಭವಾಗುತ್ತದೆ. ಈ ಹಿಂದೆ ಬಸವರಾಜ ಬೊಮ್ಮಾಯಿ ಸತತವಾಗಿ ಗೆಲ್ಲಲು ಈ 'ಅವಲಕ್ಕಿ ಪವಲಕ್ಕಿ ಕಾಂಚನ ಮಿಣಮಿಣ' ಪಾಲಿಟಿಕ್ಸೇ ಕಾರಣ. ಹೀಗಾಗಿ ಈ ಸಲ ಪಂಚಮಸಾಲಿ ಲಿಂಗಾಯತರಿಗೆ ಪಕ್ಷದ ಟಿಕೆಟ್ ಸಿಕ್ಕದೆ ಹೋದರೆ ಯಥಾಪ್ರಕಾರ ಬಸವರಾಜ ಬೊಮ್ಮಾಯಿ ಅವರ ಅವಲಕ್ಕಿ ಪವಲಕ್ಕಿ ಕಾಂಚನ ಮಿಣಮಿಣ ಪಾಲಿಟಿಕ್ಸ್ ಯಶಸ್ವಿಯಾಗುತ್ತದೆ. ಭರತ್ ಬೊಮ್ಮಾಯಿ ಗೆಲುವು ಸುಲಭವಾಗುತ್ತದೆ ಎಂಬುದು ಕೈ ಪಾಳಯದ ಗುಸುಗುಸು.

ಮುಂದೇನಾಗುತ್ತದೋ?

ವೀರಶೈವ-ಲಿಂಗಾಯತ ಪದೋತ್ಪತ್ತಿಯ ಸುತ್ತ..

ಬಸವ ಮಂಟಪ

ರವಿ ಹಂಜ್

vveditoped@gmail.com

ಗ್ರಂಥೇತಿಹಾಸದ ಪ್ರಕಾರವಾಗಿ ವೀರಶೈವ ಪದವು ವೇದವ್ಯಾಸರು ಬರೆದಿರುವರೆನ್ನುವ ಸ್ಕಂದ ಪುರಾಣದಲ್ಲಿ, ''ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃ ಪ್ರಚಾರಃ ಬಾಹ್ಯಕ್ರಿಯಾಸಂಕುಲನಿಸ್ಥಹಾತ್ಮಾ। ಸಂಪೂಜಯತ್ತಂಗ ಸ ವೀರಶೈವಂ।'' ಎಂಬ ಶ್ಲೋಕದಲ್ಲಿ ಬರುತ್ತದೆ. ಈ ಶ್ಲೋಕದ ಅರ್ಥ, ''ಯಾರು ತನ್ನ ಹಸ್ತಪೀಠದಲ್ಲಿ ಇಷ್ಟಲಿಂಗವನ್ನಿಟ್ಟು ತನ್ನ ಮನಸ್ಸನ್ನು ನೆಲೆಗೊಳಿಸಿ ಬಾಹ್ಯ ಕ್ರಿಯೆಗಳನ್ನು ದೂರ ಮಾಡಿ ಶ್ರದ್ಧೆಯಿಂದ ಪೂಜಿಸುವನೋ ಅವನೇ ವೀರಶೈವ'' ಎಂದಾಗುತ್ತದೆ. ಸ್ಕಂದ ಪುರಾಣವನ್ನು ಬಹಳಷ್ಟು ಶತಮಾನಗಳ ಹಿಂದೆಯೇ ಬರೆದಿದೆ ಎನ್ನಲಾದರೂ ಇತಿಹಾಸತಜ್ಞರು ಲಭ್ಯ ಪುರಾವೆಗಳ ಪ್ರಕಾರ ಕ್ರಿ.ಶ. 8ನೇ ಶತಮಾನ ಎಂದು ಮಾನ್ಯ ಮಾಡಿದ್ದಾರೆ. ಹಾಗಾಗಿ ಗ್ರಂಥೇತಿಹಾಸಿಕವಾಗಿ ವೀರಶೈವ ಪದವು 8ನೇ ಶತಮಾನದಲ್ಲಿ ಇದ್ದಿತು ಎನ್ನಬಹುದು. ವಚನಕಾರ ಸಿದ್ಧವೀರ ದೇಶಿಕೇಂದ್ರನು ತನ್ನ ವಚನದಲ್ಲಿ ಸ್ಕಂದ ಪುರಾಣವನ್ನು ಹೀಗೆ ಉಲ್ಲೇಖಿಸಿದ್ದಾನೆ: 'ವ್ಯಾಸನುಸುರ್ದ ಸ್ಕಂದಪುರಾಣದಲ್ಲಿಯ ಶ್ರೀಶೈಲಕಲ್ಪ ನೋಳ್ಪುದಯ್ಯಾ. ಅಲ್ಲಿ ಸಿದ್ಧಸಾಧಕರ ಸನ್ನಿಧಿಯಿಂದರಿಯಬಹುದಯ್ಯಾ. ಮಾಡಿದನೊಬ್ಬ ಪೂರ್ವದಲ್ಲಿ ಗೋರಕ್ಷ ಮಾಡಿದನೊಬ್ಬ ಮತ್ಸ್ಯೇಂದ್ರನಾಥ, ಮಾಡಿದರೆಮ್ಮ ವಂಶದ ಶ್ರೀಗುರುಶಾಂತದೇವರು. ಇದು ಕಾರಣ, ಯೋಗದ ಭೇದ ಯೋಗಿಗಳಂತರಂಗದಿಂದರಿತಡೆ ಯೋಗಸಿದ್ಧಿ ಸತ್ಯ ಸತ್ಯ, ಶ್ರೀಗುರು ತೋಂಟದಸಿದ್ಧಲಿಂಗೇಶ್ವರ''.

ಸ್ಕಂದ ಪುರಾಣದಲ್ಲಿ ''ಶಿವಾಶ್ರಿತೇಷು ತೇ ಶೈನಾ ಜ್ಞಾನಯಜ್ಞ ರತಾ ನರಾಃ । ಮಾಹೇಶ್ವರಾಃ ಸಮಾಖ್ಯಾ ತಾಃ ಕರ್ಮಯಜ್ಞ ರತಾ ಭುವಿ । '' ಎಂಬ ಮತ್ತೊಂದು ಶ್ಲೋಕವಿದೆ. ಅರ್ಥಾತ್ ವೀರಶೈವ ಮಾಹೇಶ್ವರರು ಜ್ಞಾನಯಜ್ಞದಲ್ಲಿ, ಕರ್ಮಯಜ್ಞದಲ್ಲಿ ರತರಾಗಿರುವವರು ಎಂದು. ಇವೇ ಶ್ಲೋಕಗಳು ಸಿದ್ಧಾಂತ ಶಿಖಾಮಣಿಯಲ್ಲಿಯೂ ಇವೆ. ವೀರಶೈವ ಪದದ ನಿರ್ವಚನೆಯನ್ನು 'ವಿ' ಎಂದರೆ ವಿದ್ಯಾ, 'ರ' ಎಂದರೆ ರಮಿಸುವುದು; ವೀರಶೈವ ಎಂದರೆ ಶೈವನಿದ್ಯೆಯಲ್ಲಿ ರತನಾದವನು ಎಂದು ಪಂಡಿತರುಗಳು ನಿರ್ವಚಿಸಿದ್ದಾರೆ. ಶಾಸನಗಳಲ್ಲಿ ವೀರಶೈವ ಪದವು ಮೊದಲಬಾರಿಗೆ ಕಂಡುಬರುವುದು ಕ್ರಿ.ಶ. 1261ನೆಯ ಇಸವಿಯ ಮಲ್ಕಾಪುರ ಶಾಸನದಲ್ಲಿ. ಇದರಲ್ಲಿ ಚೋಳಮಾಳವರಾಜರ ಗುರುವೂ, ವೀರಶೈವ ಕಾಕತೀಯರಾಜ 'ಗಣಪರಿಕ್ಷಾಪಾಲ ದೀಕ್ಷಾ ಗುರು'ವೂ 'ಕಳಚುರಿಕ್ಷ್ಮಾಪಾಲದೀಕ್ಷಾಗುರು'ವೂ ಆದ ವಿಶ್ವೇಶ್ವರ ಶಿವಾಚಾರ್ಯನು 'ಮಹೀಸುರ'ನೆಂದೂ ವೀರಶೈವಾಚಾರ್ಯನೆಂದೂ ಉಲ್ಲೇಖನಾಗಿದ್ದಾನೆ. ಮಲ್ಕಾಪುರ ಶಾಸನದಂತೆ ವಿಶ್ವೇಶ್ವರ ಶಿವಾಚಾರ್ಯನೇ ವೀರಶೈವ ಕಾಕತೀಯ ಚಕ್ರವರ್ತಿ ಗಣಪತಿಗೆ ದೀಕ್ಷಾ ಗುರುವಾಗಿರುವಂತೆ ಕಳಚುರಿಕ್ಷ್ಮಾಪಾಲನಿಗೂ ದೀಕ್ಷಾ ಗುರುವಾಗಿದ್ದನು. ಖ್ಯಾತ ಕಾಕತೀಯ ರಾಣಿ ರುದ್ರಮದೇವಿ ಇದೇ ಗಣಪತಿಯ ಮಗಳು ಎಂಬುದು ಉಲ್ಲೇಖಾರ್ಹ. ಪಾಲ್ಕುರಿಕೆ ಸೋಮನಾಥನು ಸಹ ತನ್ನ 'ಚಾತುರ್ವೇದ ಸಾರಂ' ಗ್ರಂಥದಲ್ಲಿ ಹರಿಯು ಶಿವನಿಗೆ ಭಕ್ತಿ ಪರವಶನಾಗಿ ತನ್ನ ಕಣ್ಣುಗಳನ್ನು ಅರ್ಪಿಸಿದ ಎಂದು ವರ್ಣಿಸುತ್ತ ವೀರಶೈವ ಎಂಬ ಪದದಿಂದ ಶೈವರನ್ನು ಕರೆದಿದ್ದಾನೆ. ಕಾಳಾಮುಖರು ಯಾನೆ ಮಹೇಶ್ವರರು ಯಾನೆ ಜಂಗಮರು ಯಾನೆ ಶಕ್ತಿಗಳು ಯಾನೆ ವೀರರು ಅವರ ಪಂಥ ವಿರೋಧಿಗಳಿಗೆ ಒಡ್ಡುತ್ತಿದ್ದ ಕಠೋರ ಸವಾಲುಗಳ ವೀರತ್ವದ ಕಾರಣಗಳಿಂದಾಗಿ ವೀರಶೈವ ಪದ ಹೆಚ್ಚು ಪರಿಣಾಮಕಾರಿಯಾಗಿ ಬಳಕೆಗೆ ಬಂದಿದೆ ಎನಿಸುತ್ತದೆ.

ವೀರಶೈವ ಪದದ ಪ್ರಾಚೀನತೆಯನ್ನು ಶಂ.ಬಾ. ಜೋಷಿಯವರು ಸಹ ವೇದಗಳ ಕಾಲಕ್ಕೆ ಒಯ್ಯುವರು. 'ಶಿವರಹಸ್ಯ'ವೆಂಬ ಅವರ ಕೃತಿಯಲ್ಲಿ, ''ನನಗೆ ತಿಳಿದಮಟ್ಟಿಗೆ ವೀರಶೈವ ಶಬ್ದದ ಮೂಲವು ಋಗ್ವೇದದಲ್ಲಿದೆ. ರುದ್ರನು ವೃಷಭನು, ಎಂದರೆ ವೀರನು. ಆದುದರಿಂದ ಆತನ ಉಪಾಸಕರೂ ವೀರರು; ಅದರಿಂದ ಈ ಹೆಸರು. ಹೀಗೆ ಬರಿಯ ತರ್ಕದಿಂದ ಇದನ್ನು ಎಣಿಕೆ ಹಾಕಬೇಕಾದುದಿಲ್ಲ. 'ಇಮಾ ರುದ್ರಾಯ ತವಸೇ ಕಪರ್ದಿನೇ ಕ್ಷಯದ್ವೀರಾಯ ಪ್ರಭರಾಮಹೇ ಮತೀಃ । ಯಥಾ ಶಮಸದ್ವಿಷದೇ ಚತುಸ್ಪದೇ ವಿಶ್ವಂ ಪುಷ್ಟಂ ಗ್ರಾಮೇ ಅಸ್ಮಿನ್ನನಾತುರಂ॥', ಅಂದರೆ, ಬಲಿಷ್ಠನೂ, ಜಟಾಧಾರಿಯೂ, ವೀರಪುತ್ರರನ್ನುಳ್ಳವನೂ ಆದ ರುದ್ರನನ್ನು ಕೊಂಡಾಡುವ; ಅದರಿಂದ ಈ ಊರಿನಲ್ಲಿ ಎರಡು ಕಾಲಿನವರ ಹಾಗೂ ನಾಲ್ಕು ಕಾಲಿನವರ ಕಲ್ಯಾಣವಾಗಿ ಎಲ್ಲರೂ ನಿರೋಗಿಗಳೂ ಪುಷ್ಟರೂ ಆಗುವರು. ಇದರ ಮುಂದಿನ ಮಂತ್ರದಲ್ಲಿಯೂ, ಬೇರೆ ಮಂಡಲಗಳಲ್ಲಿಯೂ ರುದ್ರಶಿವನು ವೀರರ ತಂದೆ, ವೀರರ ಒಡೆಯ ಎಂಬ ಮಾತುಗಳು ಅಲ್ಲಲ್ಲಿ ಬಂದಿವೆ. ಶಿವ (ರುದ್ರ) ನ ಪುತ್ರರು (ಶಿವಪುತ್ರರು) ಎಂದು ಗೌರವದಿಂದ ಹೇಳಿಕೊಳ್ಳುವ ಮತ್ತು ಆ ಬಗೆಯಾದ ದೃಢಶ್ರದ್ಧೆಯಿರುವ ಶಿವಭಕ್ತರಿಗೆ ಮಾತ್ರವಲ್ಲದೆ, ಬೇರೆ ಇನ್ನಾರಿಗೂ ವೀರ (ಶೈವ) ಎಂಬ ಹೆಸರು ಸಮರ್ಪಕವಾಗಲಾರದು. ಕರ್ನಾಟಕದಲ್ಲಿಯೇ ಈ ವೀರರು ರುದ್ರನ ಅನುಯಾಯಿಗಳಾದ ರುದ್ರೀಯರು ಇರುತ್ತಿರುವುದರಿಂದ ಈ ನಾಡಿನ ಜನಾಂಗಗಳ ವೇದಕಾಲದ ಐತಿಹ್ಯವನ್ನು ಅರಿತುಕೊಳ್ಳಲು ಈ ಶಬ್ದವು ಬಹಳ ಉಪಯುಕ್ತವಾಗಿದೆ. ವೀರ ಬಣಂಜುಗಳು, ವೀರ ಪಂಚಾಳರು ಎಲ್ಲರೂ ರುದ್ರೀಯರೇ'' ಎಂದಿದ್ದಾರೆ.

ಭಾಗ-1

ಜೋಷಿಯವರು ತಿಳಿಸಿರುವ ವೃಷಭನನ್ನೇ ಹರಿಹರನು ಶಾಪಗ್ರಸ್ತನನ್ನಾಗಿಸಿ ಧರೆಯಲ್ಲಿ ಬಸವಣ್ಣನಾಗಿ ತನ್ನ ರಗಳೆಯಲ್ಲಿ ಸೃಜಿಸಿರುವುದು ಮತ್ತು ಸೋಮನಾಥನು ತನ್ನ ಪುರಾಣದಲ್ಲಿ ವರ್ಣಿಸಿರುವುದು. ಬಸವಣ್ಣನೂ ತನ್ನ ಕೆಳಗಿನ ವಚನದಲ್ಲಿ ಅವತಾರಗಳನ್ನು ಹೀಗೆ ಖುದ್ದು ಅನುಮೋದಿಸಿದ್ದಾನೆ: ''ಅಯ್ಯಾ, ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ! ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ. ಪ್ರಥಮಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ. ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಕಾರುಣ್ಯವ ಮಾಡಿರಿಸಿಕೊಂಡಿರ್ದಿರಯ್ಯಾ. ಮೂರನೆಯ ಭವಾಂತರದಲ್ಲಿ ನೀಲಲೋಹಿತನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿರ್ದಿರಯ್ಯಾ. ನಾಲ್ಕನೆಯ ಭವಾಂತರದಲ್ಲಿ ಮನೋಹರನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿರ್ದಿರಯ್ಯಾ. ಐದನೆಯ ಭವಾಂತರದಲ್ಲಿ ಕಾಲಲೋಚನನೆಂಬ ಗಣೇಶ್ವ ರನ ಮಾಡಿ, ಹೆಸರಿಟ್ಟು ಕರೆದು ಸರ್ವಕಾಲಸಂಹಾರವ ಮಾಡಿಸುತ್ತಿರ್ದಿರಯ್ಯಾ. ಆರನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿರ್ದಿರಯ್ಯಾ. ಏಳನೆಯ ಭವಾಂತರದಲ್ಲಿ ಬಸವದಣ್ಣಾಯಕನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿರ್ದಿರಯ್ಯಾ. ಇದು ಕಾರಣ ಕೂಡಲಸಂಗಮದೇವಾ, ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ''.

ಇನ್ನು ಶಂ.ಬಾ.ರವರು ಹೆಸರಿಸಿರುವ ವೀರಬಣಂಜುಗಳೇ ವೀರಶೈವ ಬಣಜಿಗರು ಮತ್ತು ವೀರಪಂಚಾಳರೇ ವೀರಶೈವ ಪಂಚಮಸಾಲಿಗಳು ಎನ್ನಬಹುದು. ವಿಕಾಸಪಥದ ಹಾದಿಯಲ್ಲಿ ಕೃಷಿಯಲ್ಲಿ ತೊಡಗಿದ್ದ ವೀರಪಂಚಾಳರಲ್ಲಿ ಸಾಕಷ್ಟು ಜನರು ಕುಶಲಕರ್ಮಿಗಳಾದರು. ಈ ಕುಶಲಕರ್ಮಿಗಳಾಗಿದ್ದ ವೀರಪಂಚಾಳರ ಕಾರಣವಾಗಿಯೇ ಕಾಳಾಮುಖರು ದಕ್ಷಿಣಾಚಾರ ಎಂಬ ಶಿಲ್ಪಕಲಾ ವಾಸ್ತುಶಾಸ್ತ್ರವನ್ನು ರಚಿಸಿದ್ದರು. ಈ ದಕ್ಷಿಣಾಚಾರ ಪದವೇ ದಕ್ಕನಾಚಾರ/ಜಕ್ಕನಾಚಾರ ಎಂದು ಅಪಭ್ರಂಶಗೊಂಡು ಸಂಕಥನಗಳ ಮೂಲಕ ವಾಸ್ತುಶಾಸ್ತ್ರವು ವ್ಯಕ್ತಿರೂಪದ ಜಕಣಾಚಾರಿ ಆಗಿದೆ. ನಮ್ಮ ಪ್ರಭೃತಿ ಪ್ರಭಾವಶಾಲಿ ಸಂಶೋಧಕರ ದೆಸೆಯಿಂದ ಸರಕಾರ ಜಕಣಾಚಾರಿಯ ಹುಟ್ಟಿದ ದಿನವನ್ನು ಸೃಷ್ಟಿಸಿ ಜಯಂತಿ ಘೋಷಿಸಿದೆ. ಈ ಬಗ್ಗೆ ಆಸಕ್ತರು ಖ್ಯಾತ ಇತಿಹಾಸಜ್ಞರಾದ ವಸುಂಧರಾ ಫಿಲಿಯೋಜಾ ಅವರ ಕೃತಿಗಳನ್ನು ಗಮನಿಸಬಹುದು. ''ಲಕ್ಕುಂಡಿಯಲ್ಲಿರುವ ದೇವಸ್ಥಾನಗಳ ಆವರಣಗಳು ಈ ಕಾಳಾಮುಖ ದಕ್ಷಿಣಾಚಾರದ ವಾಸ್ತುಶಿಲ್ಪದ ಶಾಲೆಗಳಾಗಿದ್ದವು. ಇಲ್ಲಿ ನಿರ್ಮಿಸಿದ ಸಣ್ಣ ಗಾತ್ರದ ಆಕೃತಿಗಳ ದೊಡ್ಡ ಪ್ರತಿಕೃತಿಗಳೇ ಹಳೇಬೀಡು, ಬೇಲೂರು ಮುಂತಾದ ಕಡೆ ಕೆತ್ತಲ್ಪಟ್ಟಿರುವುದು'' ಎಂದು ಪುರಾತತ್ವ ಸ್ಮಾರಕಗಳ ಬಗ್ಗೆ ಅಪಾರ ಜ್ಞಾನ ಹೊಂದಿರುವ ಗದಗಿನ ಅಬ್ದುಲ್ ರಜಾಕ್ ದಸ್ತಗೀರ್ ಸಾಬ್ ಕಟ್ಟಿಮನಿ ಮಾಹಿತಿ ನೀಡಿದ್ದಾರೆ. ಡೇವಿಡ್ ಲೊರೆಂಜನ್ ಅಲ್ಲದೆ ಅನೇಕ ಸಂಶೋಧಕರ ಜತೆ ಕೆಲಸ ಮಾಡಿರುವ ಖ್ಯಾತಿ ಇವರದು.

(ಮುಂದುವರಿಯುವುದು)

(ಲೇಖಕರು ಶಿಕಾಗೊ ವಾಸಿ ಮತ್ತು ಸಾಹಿತಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಶ್ರೀಕೃಷ್ಣಾರ್ಪಣಮಸ್ತು..!

ಮಂಡ್ಯದ ಬ್ಯಾಂಕ್ ಒಂದರಲ್ಲಿ ಮ್ಯಾನೇಜರ್ ಆಗಿ 1987-88ರಲ್ಲಿ ಕೆಲಸ ಮಾಡುತ್ತಿದ್ದ ನಾನು, ಬ್ಯಾಂಕಿನ/ಸರಕಾರದ ಕೆಲಸದ ಮೇರೆಗೆ ಆಗಾಗ ಮೈಸೂರಿಗೆ ಹೋಗಬೇಕಾಗುತ್ತಿತ್ತು. ಆಗೊಮ್ಮೆ ಒಂದು ಸಂಪರ್ಕ ಸಭೆಯಲ್ಲಿ ಪರಿಚಿತ ಅಧಿಕಾರಿಯೊಬ್ಬರು, 'ನಿವೃತ್ತಿಯಾದ ಮೇಲೆ ಎಲ್ಲಿರಬೇಕು ಅಂದುಕೊಂಡಿದ್ದೀರಿ?' ಎಂದು ವಿಚಾರಿಸಿದ್ದರು. ಆಗ ನಾನು, 'ಅದಕ್ಕಿನ್ನೂ ಸಮಯವಿದೆ, ಇನ್ನೂ ಆಲೋಚಿಸಿಲ್ಲ' ಎಂದಿದ್ದೆ. ಆಗ ಅವರು, 'ಮೈಸೂರಿನಲ್ಲಿ ಇರುವುದಾದರೆ ಹೇಳಿ; ಸದ್ಯದಲ್ಲೇ ಮುಡಾದಿಂದ ನಿವೇಶನ ಹಂಚಿಕೆಯ ಪ್ರಕಟಣೆ ಬರುತ್ತದೆ, ಆಗ ನೀವು ಅರ್ಜಿ ಹಾಕಬಹುದು' ಎಂದಿದ್ದರು. ಸ್ವಲ್ಪ ದಿನಕ್ಕೆ ನನಗೆ ಬೆಳಗಾವಿಗೆ ವರ್ಗವಾಯಿತು, ಮೈಸೂರಿನಲ್ಲಿ ನಿವೇಶನ ಖರೀದಿಸುವ ಬಗ್ಗೆ ಮರೆತೇಬಿಟ್ಟಿದ್ದೆ.

ಕೆಲ ತಿಂಗಳ ನಂತರ, ಆ ಪರಿಚಿತ ಅಧಿಕಾರಿಯಿಂದ ನನಗೊಂದು ಪತ್ರ ಬಂತು. 'ಮುಡಾ'ದವರು ಕೆಲ ಬಡಾವಣೆಗಳಲ್ಲಿ ನಿವೇಶನ ಹಂಚುವ ಬಗೆಗಿನ ಪ್ರಕಟಣೆ ಅದರ ಜತೆಗಿತ್ತು. ನಮ್ಮ ತಾಯಿ, 'ಹೇಗಾದರೂ ಆಗಲಿ, ಅರ್ಜಿ ಹಾಕಿ ಹಣ ಕಳುಹಿಸು. ನಿವೇಶನ ಸಿಕ್ಕರೆ ಮುಂದೆ ಅಲ್ಲೇ ಇದ್ದರಾಯಿತು' ಎಂದರು. ಪ್ರಕಟಣೆಯಲ್ಲಿ ತಿಳಿಸಿದಂತೆಯೇ ಅನ್ವಯವಾಗುವ ಹಣದ ಮೊತ್ತದೊಂದಿಗೆ ಅರ್ಜಿ ಸಲ್ಲಿಸಿದೆ. 3-4 ವರ್ಷವಾದರೂ ಅದರ ಬಗ್ಗೆ ಏನೂ ತಿಳಿಯಲಿಲ್ಲ. 1994-95ರಲ್ಲಿ, ನನಗೆ ನಿವೇಶನ ಹಂಚಿಕೆಯಾಗಿರುವುದರ ಬಗ್ಗೆ ತಿಳಿಸಿದ 'ಮುಡಾ'ದವರು ಬಾಕಿ ಹಣ ಕಟ್ಟಲು ಸೂಚಿಸಿದರು. ಆದರೆ, ಹಾಗೆ ಹಂಚಿಕೆಯಾದ ನಿವೇಶನ ನಾನು ಕೇಳಿದ್ದ ಬಡಾವಣೆಯಲ್ಲಿರಲಿಲ್ಲ ಮತ್ತು



ಅದು ಸಾಕಷ್ಟು ದೂರವಿತ್ತು, ಯಾವುದೇ ರೀತಿಯಲ್ಲಿ ಅಭಿವೃದ್ಧಿಯಾಗಿ ರಲಿಲ್ಲ. ಈ ವಿಷಯವನ್ನು ನನ್ನ ಪರಿಚಿತ ಅಧಿಕಾರಿಗೆ ತಿಳಿಸಿ, 'ಮುಂದೇನು ಮಾಡು ವುದು' ಎಂದು ಕೇಳಿದ್ದಕ್ಕೆ, 'ನನಗೀಗ ನಿವೃತ್ತಿಯಾಗಿದ್ದು ಬೇರೊಂದು ಊರಿನಲ್ಲಿರುವೆ' ಎಂದು ಅವರು ತಿಳಿಸಿದರು.

ಆಗ ನಾನು 'ಮುಡಾ'ಗೆ ಪತ್ರ ಬರೆದು, 'ಆ ಬಡಾವಣೆಯಲ್ಲಿ ನನಗೆ ನಿವೇಶನ ಬೇಡ, ನಾನು ಅರ್ಜಿಯಲ್ಲಿ ಉಲ್ಲೇಖಿಸಿದ್ದ ವಿಜಯನಗರ ಬಡಾವಣೆಯಲ್ಲಿ ನೀಡಿ' ಎಂದು ವಿನಂತಿಸಿಕೊಂಡೆ. ಅದಾಗಿ 5-6 ವರ್ಷಗಳು ಕಳೆದರೂ 'ಮುಡಾ'ದಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. 2004ರಲ್ಲಿ ನನಗೆ ಬೆಂಗಳೂರಿಗೆ ವರ್ಗವಾಯಿತು, ಕಾರ್ಯನಿಮಿತ್ತ ಆಗಾಗ ಮೈಸೂರಿಗೆ ಹೋಗಬೇಕಾಗುತ್ತಿತ್ತು. ಅಂಥ ಒಂದು ಸಂದರ್ಭದಲ್ಲಿ 'ಮುಡಾ' ಕಚೇರಿಗೆ ಹೋಗಿ ನನ್ನ ಅರ್ಜಿಯ ಬಗ್ಗೆ ವಿಚಾರಿಸಿದೆ. ಆಗ ಅವರು, 'ಇನ್ನು ಕೆಲವೇ ದಿನಗಳಲ್ಲಿ ವಿಜಯನಗರ ಬಡಾವಣೆ ವಿಸ್ತರಣೆ ಆಗುತ್ತದೆ, ಆಗ ಅಲ್ಲಿ ನಿಮಗೆ ನಿವೇಶನ ಕೊಡುತ್ತೇವೆ' ಎಂದರು. ಅಂತೆಯೇ ಬಡಾವಣೆಯ ವಿಸ್ತರಣೆಯಾದರೂ ನನಗಲ್ಲಿ ನಿವೇಶನ ಸಿಗಲಿಲ್ಲ. ಮುಂದಿನ ಸಲ ಮೈಸೂರಿಗೆ ಹೋದಾಗ ಮತ್ತೆ 'ಮುಡಾ' ಕಚೇರಿಗೆ ಹೋಗಿ ವಿಚಾರಿಸಿದೆ. 'ಆ ಬಡಾವಣೆಯಲ್ಲಿ ನಿವೇಶನಗಳ ಹಂಚಿಕೆ ಆಗಿದೆ, ನಿಮಗೆ ಬೇರೆ ಬಡಾವಣೆಯಲ್ಲಿ ನಿವೇಶನ ಸಿಗುತ್ತದೆ' ಎಂಬ ಉತ್ತರ ಸಿಕ್ಕಿತು. ಇದರಿಂದ ನನಗೆ ಭ್ರಮನಿರಸನವಾಗಿ, 'ಅರ್ಜಿಯನ್ನು ವಾಪಸ್ ತೆಗೆದುಕೊಳ್ಳುತ್ತೇನೆ, ನನ್ನ ಹಣವನ್ನು ಬಡ್ಡಿ ಸಮೇತ ವಾಪಸ್ ಕೊಡಿ' ಎಂದು ವಿನಂತಿ ಪತ್ರ ಕೊಟ್ಟೆ. ಇದಾಗಿ 3-4 ವರ್ಷವಾದರೂ 'ಮುಡಾ'ದಿಂದ ಯಾವುದೇ ರೀತಿಯ ಪ್ರತಿಕ್ರಿಯೆ ಬರಲಿಲ್ಲ, ನನ್ನ ಜ್ಞಾಪಕ ಪತ್ರಗಳಿಗೂ ಉತ್ತರ ಸಿಗಲಿಲ್ಲ. 2007ರಲ್ಲಿ ನಾನು ನಿವೃತ್ತಿ ಹೊಂದಿದೆ, 2008ರಲ್ಲಿ ನಮ್ಮ ತಾಯಿಯವರು ತೀರಿಕೊಂಡರು. ಅದೇ ಸಂದರ್ಭದಲ್ಲಿ ನಮ್ಮ ತಾಯಿಯವರ ದೇಹದ ಜತೆಗೆ, 'ಮುಡಾ' ಜತೆಗೆ ಮಾಡಿದ್ದ ಪತ್ರ-ವ್ಯವಹಾರಗಳನ್ನೆಲ್ಲ ಚಿತೆಗೆ ಹಾಕಿ ಎಳ್ಳು- ನೀರಿನ ತರ್ಪಣ ಕೊಟ್ಟೆ. ಅಲ್ಲಿಗೆ ನನ್ನ ಮತ್ತು 'ಮುಡಾ' ನಡುವಿನ ಸಂಬಂಧ ಮುಗಿಯಿತು. ಆ ಬಡಾವಣೆಯಲ್ಲಿ ನನಗೇಕೆ ನಿವೇಶನ ಸಿಗಲಿಲ್ಲ ಎಂಬುದು ಈಗ ಅರ್ಥವಾಗುತ್ತಿದೆ!

- ಮುಕುಂದ, ದಾವಣಗೆರೆ

ಅಡಕೆಗೆ ಹೋದ ಮಾನ

ರಾಜ್ಯ ಸರಕಾರದ ಪ್ರಮುಖ ಇಲಾಖೆಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದ ಮಹಿಳೆಯೊಬ್ಬರು 300 ರು. ಲಂಚ ಪಡೆದು ತಮ್ಮ ನೌಕರಿಯನ್ನೇ ಕಳೆದುಕೊಂಡಿದ್ದಾರೆ. ಈಕೆ ಸಾರ್ವಜನಿಕರಿಂದ ಹೀಗೆ ಲಂಚ ಸ್ವೀಕರಿಸಿದ್ದ ಆರೋಪದ ಮೇಲೆ ಸೇವೆಯಿಂದ ವಜಾಗೊಂಡಿದ್ದರು. ತನ್ನ ಅಂಗಳಕ್ಕೆ ಬಂದ ಈ ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್ ಸದರಿ ವಜಾ ಆದೇಶಕ್ಕೆ ಅಸ್ತು ಎಂದಿದೆ. 'ಅಡಕೆ ಕದ್ದರೂ ಕಳ್ಳ, ಆನೆ ಕದ್ದರೂ ಕಳ್ಳ' ಎಂಬ ಮಾತು ಈ ಪ್ರಕರಣಕ್ಕೆ ಎಷ್ಟೊಂದು ಹೊಂದಿಕೊಳ್ಳುತ್ತದೆಯಲ್ಲವೇ?

- ಕೆ.ವಿ.ವಾಸು, ಮೈಸೂರು

ಹೀಗಾದರೆ ಸಮಸ್ಯೆ ಖತಂ!

ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವುದಕ್ಕೆ ಸಿದ್ಧತೆಗಳು ನಡೆಯುತ್ತಿರುವುದರ ಜತೆಜತೆಗೆ ಸಮ್ಮೇಳನಾಧ್ಯಕ್ಷರು ಸಾಹಿತಿಗಳೋ ಅಥವಾ ಸಾಹಿತಿಯಲ್ಲದವರೋ ಎಂಬ 'ಗಹನ' ವಿಷಯದ ಬಗ್ಗೆ ಪರ-ವಿರೋಧದ ಚರ್ಚೆಗಳು ಶುರುವಾಗಿವೆ. ಅದರಲ್ಲೂ ಈ ಬಾರಿಯ ಅಧ್ಯಕ್ಷಗಿರಿಗೆ, ರಾಜಕಾರಣಿಗಳು, ಕನ್ನಡಪರ ಹೋರಾಟಗಾರರು, ಚಿಂತಕರು ಮತ್ತು ಮಠಾಧೀಶರ ಹೆಸರುಗಳೂ ಮುನ್ನೆಲೆಗೆ ಬಂದಿರುವುದು ವಿಶೇಷ.

ರಾಜ್ಯದ ಮುಖ್ಯಮಂತ್ರಿಗಳು 6 ಕೋಟಿ ಕನ್ನಡಿಗರ ಪ್ರತಿನಿಧಿಯಾಗಿರುವುದರಿಂದ ಇನ್ನು ಮುಂದೆ ಅವರೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿಬಿಡಲಿ. ನಂತರದ ಸಮ್ಮೇಳನಗಳಿಗೆ ಗೃಹಮಂತ್ರಿ, ಹಣಕಾಸು ಮಂತ್ರಿ ಹೀಗೆ ಸಂಪುಟದ ಇತರು ಸದಸ್ಯರೂ ಅಧ್ಯಕ್ಷರಾಗಲಿ. ಹೀಗಾದಲ್ಲಿ ಸಾಹಿತಿಗಳು ಮತ್ತು ಸಾಹಿತ್ಯಾಸಕ್ತರ ಜತೆಗೆ ಆಯಾ ರಾಜಕಾರಣಿಗಳ ಹಿಂಬಾಲಕರೂ ಆಗಮಿಸಿ ಸಭಾಂಗಣ ಕಿಕ್ಕಿರಿದು ತುಂಬಿದ ದಾಖಲೆಯಾಗುತ್ತದೆ, ಯಥೇಚ್ಛ ಅನುದಾನವೂ ಸಿಗುತ್ತದೆ! 'ಬದಲಾವಣೆಯೇ ಜಗದ ನಿಯಮ' ಅಲ್ಲವೇ? ಹೀಗಾಗಿ ಇಂಥ ಬದಲಾವಣೆಯನ್ನು ಸ್ವೀಕರಿಸೋಣ. ಜತೆಗೆ 'ಕನ್ನಡ ಸಾಹಿತ್ಯ ಪರಿಷತ್ತು' ಎಂಬ ಹೆಸರನ್ನು ಬದಲಿಸಿ 'ಕನ್ನಡ ಪರಿಷತ್ತು' ಎಂದು ಮಾಡಿಬಿಡಲಿ, ಆಗ ಸಮ್ಮೇಳನಾಧ್ಯಕ್ಷರ ಆಯ್ಕೆಯ ಚರ್ಚೆಗೆ ಮಂಗಳ ಹಾಡಿದಂತಾಗುತ್ತದೆ!

- ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಎಲ್ಲೆಲ್ಲೂ ಸಂಗೀತವು

ಕನ್ನಡ ಚಲನಚಿತ್ರ ರಂಗಕ್ಕೆ ಸಂಗೀತ ನಿರ್ದೇಶಕ ವಿಜಯ ಭಾಸ್ಕರ್ ನೀಡಿದ ಕೊಡುಗೆ ಮಹತ್ತರವಾದುದು. ವಿಜಯಭಾಸ್ಕರ್‌ರ ಜನ್ಮ ಶತಮಾನೋತ್ಸವದ ಈ ಸಂದರ್ಭದಲ್ಲಿ, ಅವರ ಜನಪ್ರಿಯ ಹಾಡುಗಳನ್ನು ತಮ್ಮ ಅಂಕಣದಲ್ಲಿ ಸ್ವಾರಸ್ಯಕರವಾಗಿ ಉಲ್ಲೇಖಿಸಿ ಗೌರವ ಸಲ್ಲಿಸಿದ ಶ್ರೀವತ್ಸ ಜೋಶಿ ಅವರಿಗೆ ವಂದನೆಗಳು. 'ಎಲ್ಲೆಲ್ಲೂ ಸಂಗೀತ'ವು ಪಸರಿಸಿ ಶಾಶ್ವತವಾಗಿರಬೇಕಾದರೆ ಇಂಥ ಮಹನೀಯರು ರಾಗ ಸಂಯೋಜಿಸಿದ ಹಾಡುಗಳನ್ನು ಕೇಳಬೇಕು, ಹಾಡಬೇಕು ಮತ್ತು ಈ ತರಹದ ಬರಹಗಳ ಮೂಲಕ ನೆನಪಿಸಿಕೊಳ್ಳಬೇಕು.

- ರಾಘವೇಂದ್ರ ಜೋಯಿಸ್, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಗಣೇಶ ಡಂಬಳ, ಹರಪನಹಳ್ಳಿ**
  ಭಟ್ರೇ, ನಾನು ಕೊಟ್ಟ ನವಿಲುಗರಿಯನ್ನು ಆಕೆ ಇನ್ನೂ ಇಟ್ಟುಕೊಂಡಿರಬಹುದಾ?
  - **ಅದು ಈಗ ಮರಿ ಹಾಕಿ ಪ್ರಧಾನಿ ನಿವಾಸದಲ್ಲಿ ಓಡಾಡುತ್ತದೆಯಂತೆ!**
- **ನಾಗರಾಜ ಜಂಬೂರು, ಚಿತ್ರದುರ್ಗ**
  ಭಟ್ರೇ, ದೇವರುಗಳು ಕಾಮ, ಸಂಭೋಗದಲ್ಲಿ ನಿರತರಾಗ್ತಾರಾ?
  - **'ಹುಟ್ಟಿಸುವ ದೇವರು ಹುಲ್ಲು ಮೇಯಿಸ್ತಾನಾ' ಎಂಬ ಗಾದೆ ಕೇಳಿಯೂ ಈ ಮಾತಾ?!**
- **ರತ್ನಾಕರ ಹೂವಪ್ಪ, ಹುಲಿಯೂರುದುರ್ಗ**
  ಭಟ್ರೇ, ಏಕಕಾಲದಲ್ಲಿ ಇಬ್ಬರನ್ನು ಪ್ರೀತಿಸಬಹುದಾ?
  - **'ಏಕ' ಎಂದ ಮಾತ್ರಕ್ಕೆ ಒಬ್ಬರನ್ನೇ ಪ್ರೀತಿಸಬೇಕು ಎಂದು ಭಾವಿಸಬೇಕಿಲ್ಲ!**
- **ವೀರೇಶ ಕಮತಗಿ, ಅಡಗೂರು**
  ಭಟ್ರೇ, ಗಂಡಸರು ಆಗಾಗ ಹಾಕುವ ಸವಾಲು ಮತ್ತು ಈಡೇರಿಸದ ಸವಾಲು ಯಾವುದು?
  - **'ಮೀಸೆ ಬೋಳಿಸಿಕೊಳ್ಳುತ್ತೇನೆ' ಅನ್ನೋದು!**
- **ನಾಗಶ್ರೀ, ಹೊಸದುರ್ಗ**
  ಭಟ್ರೇ, ಸಾಮಾನ್ಯವಾಗಿ ಹೆಂಗಸರೇಕೆ ಬಾರ್‌ಗೆ ಹೋಗುವುದಿಲ್ಲ?
  - **ಎಣ್ಣೆ ಹೊಡೆಯದೇ ಹಾಗೆ ಆಡ್ತಾರೆ, ಇನ್ನು ಹೋದರೆ ಗತಿಯೇನು?!**
- **ನವೀನ ನಾಯಕ, ಜಮಾಲಾಬಾದ್**
  ಭಟ್ರೇ, ನನ್ನ ಮಗಳಿಗೆ 'ಮಳೆ' ಅಂತ ಹೆಸರಿಡಬಹುದಾ?
  - **ಅವಳ ಹೆಸರನ್ನು ಇಂಗ್ಲಿಷಿನಲ್ಲಿ 'ಮೇಲ್' ಅಂತ ಓದಿದರೆ ಕಷ್ಟ!**
- **ರಾಜು ಕೆಂಭಾವಿ, ಮುಂಡರಗಿ**
  ಭಟ್ರೇ, ನೀವು ಚುನಾವಣೆಗೆ ನಿಂತರೆ ಗೆಲ್ಲಬಹುದು ಅಂತ ಭಾವಿಸಿದ್ದೀರಂತೆ?
  - **ಆದರೆ ಚುನಾವಣೆಗೆ ನಿಲ್ಲುವಷ್ಟು ಮೂರ್ಖನಾಗಿಲ್ಲವಲ್ಲ!**
- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
  ಭಟ್ರೇ, ಮೋದಿ ರಷ್ಯಾಧ್ಯಕ್ಷ ಪುಟಿನ್ ಭೇಟಿಯಾದಾಗ ಏನೆಂದು ಸಲಹೆ ಕೊಡಬಹುದು?
  - **ಪ್ಲೀಸ್ ಪುಟ್ ಆಫ್ ವಾರ್!**
- **ಅಬ್ಬೂರು ಸುಬ್ಬಣ್ಣ, ಚನ್ನಪಟ್ಟಣ**
  ಸರ್, ಚನ್ನಪಟ್ಟಣ ಉಪಚುನಾವಣೆಗೆ ಯಾರು ಮೈತ್ರಿ ಅಭ್ಯರ್ಥಿ ಆಗಬಹುದು?
  - **ಜವಾನ, ಇಲ್ಲವೇ ಕಿಸಾನ!**
- **ರುಕ್ಕು, ಚಾಮರಾಜಪೇಟೆ**
  ಭಟ್ರೇ, ಮುಂಬೈಯಲ್ಲಿ ಸಲ್ಲೂಗೆ ಯಾರಿಗೂ ಸಲ್ಲದ ಭದ್ರತೆಯಂತೆ?
  - **ಇನ್ನು ಮುಂದೆ ಸಲ್ಲಾಪಕ್ಕೂ ಸಂಚಕಾರ!**

ಕೂದಲು ಇಲ್ಲದಿದ್ದರೆ ತಲೆಗೆ ಬೆಲೆ ಇಲ್ಲವೇ...!?

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್

dhyapaa@gmail.com

ನನ್ನ ತಲೆಯ ಮೇಲೆ ಕೂದಲು ಇಲ್ಲ. ಹಾಗಂತ ಅದು ಕೆಲಸಕ್ಕೆ ಬಾರದ್ದು ಎಂದು ಅರ್ಥವೇ? ಅದನ್ನು ಬೇರೆಯವರಿಗೆ ಕೊಟ್ಟು ಬಿಡಬೇಕೇ? ಅಥವಾ ಯಾರಾದರೂ ಅದನ್ನು ಕಡಿದು ಕೊಂಡು ಹೋದರೂ ನಾನು ಸುಮ್ಮನಿರಬೇಕೇ?'' ಈ ಮಾತನ್ನು ಯಾರು, ಯಾರಿಗೆ, ಎಲ್ಲಿ, ಯಾವಾಗ ಹೇಳಿದರು?– ಸಂದರ್ಭ ಸೂಚಿಸಿರಿ. ಹಾಗೆಯೇ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

''ಸರಕಾರ ಹಣಕಾಸು ಮತ್ತು ತೆರಿಗೆ ವಿಷಯದಲ್ಲಿ ಪಾರದರ್ಶಕವಾಗಿರಬೇಕು'' ಎಂದು ಹೇಳಿದ, ಅದಕ್ಕೆ ಪ್ರಯತ್ನಿಸಿದ ಮೊದಲ ಭಾರತೀಯ ರಾಜಕಾರಣಿ ಯಾರು?

ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿಯವರಿಂದ ಪ್ರಭಾವಿತರಾಗಿ, ಅವರ ಅನುಯಾಯಿಯಾಗಿದ್ದು, ಕ್ರಾಂತಿಕಾರಿಗಳ ಜತೆಯೂ ಸಂಪರ್ಕ ಇಟ್ಟುಕೊಂಡಿದ್ದವರು ಯಾರು?

ಭಾರತದ ಸಂಸತ್ತಿನಲ್ಲಿ ತಮ್ಮದೇ ಪಕ್ಷದ ಪ್ರಧಾನಿಯ ಮಾತಿಗೆ ತಿರುಗೇಟು ನೀಡಿದವರು ಯಾರು?

ಪಕ್ಷದಲ್ಲಿ ವ್ಯಕ್ತಿಪೂಜೆಯನ್ನು ವಿರೋಧಿಸಿದವರು ಯಾರು?

ಅಭಿವೃದ್ಧಿಶೀಲ ದೇಶಗಳಲ್ಲಿಯೇ ಮೊದಲ ಯುದ್ಧ ವಿಮಾನ ತಯಾರಿಕೆಗೆ ಸೂಚಿಸಿದವರು ಯಾರು?

ಜವಾಹರಲಾಲ್ ನೆಹರು ಮತ್ತು ಅವರ ತಂದೆ ಮೋತಿಲಾಲ್ ನೆಹರು ಇಬ್ಬರೊಂದಿಗೂ ಸಮಾನವಾಗಿ ಸ್ನೇಹವುಳ್ಳವರಾಗಿದ್ದವರು ಯಾರು?

ತಮ್ಮ ರಾಜಕೀಯ ಜೀವನವಿಡೀ ಒಂದೇ ಪಕ್ಷದಲ್ಲಿದ್ದು, ಪಕ್ಷದ ನಿರ್ಧಾರ ತಪ್ಪು ಅನಿಸಿದಾಗೆಲ್ಲ ಅದನ್ನು ನಿರ್ಭೀಡೆಯಿಂದ ವಿರೋಧಿಸಿಯೂ, ಆರು ದಶಕಗಳ ಕಾಲ ಅದೇ ಪಕ್ಷದಲ್ಲಿ ಪಕ್ಷನಿಷ್ಠರಾಗಿ, ಕೊನೆಯವರೆಗೂ ಇದ್ದವರು ಯಾರು?

ಬಿಟ್ಟ ಸ್ಥಳ ತುಂಬಿರಿ

ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಕಾಲದಲ್ಲಿ ಇವರು...... ಸಲ ಜೈಲಿಗೆ ಹೋಗಿ ಬಂದಿದ್ದರು.

ಭಾರತ ತನಗೆ ಬೇಕಾದ ಯುದ್ಧ ಸಾಮಗ್ರಿಗಳನ್ನು ತಾನೇ ತಯಾರಿಸಿಕೊಳ್ಳಬೇಕು ಎಂದು ಹೇಳಿದವರು.....

ಇದೇನು? ಇತಿಹಾಸ ತರಗತಿಯ ಪ್ರಶ್ನೆ ಪತ್ರಿಕೆಯೇ? ಎಂದು ಕೇಳಬೇಡಿ. ಆದರೆ ಈ ಎಲ್ಲ ಪ್ರಶ್ನೆಗೂ ಇರುವ ಉತ್ತರ ಒಂದೇ. ಅದು ಸರಿಯಾಗಿದ್ದರೆ ನೂರಕ್ಕೆ ನೂರು ಅಂಕ 'ಗ್ಯಾರಂಟಿ'!

ಇದನ್ನೆಲ್ಲ ಮಾಡಿದ 'ಮಹಾವೀರ' ಯಾರು? ಇದು ಪರೀಕ್ಷೆ ಅಲ್ಲ, ಹೆಚ್ಚು ತಲೆ ಕೆಡಿಸಿಕೊಳ್ಳಬೇಡಿ, ಆದರೆ ಇದು ತಲೆಗೆ ಸಂಬಂಧಪಟ್ಟ ವಿಷಯವಂತೂ ಹೌದು. ಉತ್ತರವನ್ನು ನಾನೇ ಹೇಳಿಬಿಡುತ್ತೇನೆ. ಈ ಎಲ್ಲ ಪ್ರಶ್ನೆ, ಸಂದರ್ಭ ಸೂಚಿಸಿರಿ, ಬಿಟ್ಟ ಸ್ಥಳಕ್ಕೆ ಉತ್ತರ, ಒಂದು ಹೆಸರು. ಅದೇ, ಅದೇ, 'ಮಹಾವೀರ ತ್ಯಾಗಿ!'

ಸ್ಫಟಿಕದಷ್ಟೇ ಶುದ್ಧ ನಡೆ, ವಜ್ರದಷ್ಟೇ ಕಠಿಣ ನುಡಿ, ಆಲದ ಮರದಂಥ ನಿಲುವಿನ ಮಹಾವೀರ ತ್ಯಾಗಿ ಹುಟ್ಟಿದ್ದು 1899ನೇ ಇಸವಿಯ ಕೊನೆಯ ದಿನ. ಊರು ಉತ್ತರ ಪ್ರದೇಶದ ಅಮರೋಹಿ ಜಿಲ್ಲೆಯ ಧಾರವಾಸಿ. ತ್ಯಾಗಿ ಮೀರತ್‌ನಲ್ಲಿ ಓದು ಮುಗಿಸಿ, ಬ್ರಿಟಿಷ್ ಇಂಡಿಯಾ ಆರ್ಮಿ ಸೇರಿಕೊಂಡರು. ಬಲೂಚಿಸ್ತಾನ ಮತ್ತು ಪರ್ಷಿಯಾದ ಗಡಿ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದರು. ಜಲಿಯನ್ ವಾಲಾಬಾಗ್ ಹತ್ಯಾಕಾಂಡದಿಂದ ಮನನೊಂದು ಸೇನೆಗೆ ರಾಜೀನಾಮೆ ನೀಡಿದರು. ಆದರೆ ಅಂದಿನ ಬ್ರಿಟಿಷ್ ಸರಕಾರ ಅವರನ್ನು ಗೌರವಯುತವಾಗಿ ಕಳಿಸಿಕೊಡಲಿಲ್ಲ. ಈಗ ಪಾಕಿಸ್ತಾನದಲ್ಲಿರುವ ಬಲೂಚಿಸ್ತಾನದ ರಾಜಧಾನಿ ಕ್ವೆಟ್ಟಾಕ್ಕೆ ಅವರನ್ನು ಕರೆಸಿ, ಕೋರ್ಟ್ ಮಾರ್ಷಲ್ ಮಾಡಲಾಯಿತು. ಸಂಬಳ, ಭತ್ಯೆ ಏನನ್ನೂ ಕೊಡದೆ ಅವರನ್ನು ಕಳಿಸಿಕೊಡಲಾಯಿತು. ಖಾಲಿ ಕೈಯಲ್ಲಿ ದೆಹಲಿಗೆ ಹಿಂತಿರುಗಿ ಬಂದ ತ್ಯಾಗಿ ಗಾಂಧೀಜಿಯವರಿಂದ ಪ್ರಭಾವಿತರಾದರು. ಗಾಂಧೀಜಿಯ ಅನುಯಾಯಿಯಾಗಿ ಅವರೊಂದಿಗೆ ಸೇರಿ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು.

ಅಸಹಕಾರ ಚಳವಳಿಯಲ್ಲಿ ಭಾಗಿಯಾದ ಕಾರಣಕ್ಕೆ ತ್ಯಾಗಿ ಬಂಧನಕ್ಕೊಳಗಾದರು. ಎರಡು ವರ್ಷಗಳ ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆಯಾಗಿ ಬಂದ ನಂತರ ತಮ್ಮ ಜಿಲ್ಲೆಯಲ್ಲಿ ಅಸಹಕಾರ ಚಳವಳಿಯನ್ನು ಪುನರಾರಂಭ ಮಾಡಿದ್ದಕ್ಕೆ ಬಂಧಿತರಾಗಿ ಪುನಃ ಜೈಲು ಸೇರಿದರು. ಬೇರೆ ಬೇರೆ ಕಾರಣಗಳಿಂದಾಗಿ ತ್ಯಾಗಿ ಒಂದಲ್ಲ, ಎರಡಲ್ಲ, ಹನ್ನೊಂದು ಬಾರಿ ಜೈಲಿಗೆ ಹೋಗಿ ಶಿಕ್ಷೆ ಅನುಭವಿಸಿ ಬಂದಿದ್ದರು. ತಮ್ಮ ಇಪ್ಪತ್ತೊಂದನೇ ವರ್ಷದಿಂದ ನಲವತ್ತೇಳನೇ ವರ್ಷದವರೆಗಿನ ಅವಧಿಯಲ್ಲಿ ಅವರು ಹೊರಗೆ ಇದ್ದದ್ದಕ್ಕಿಂತ ಜೈಲಿನ ಒಳಗೆ ಇದ್ದದ್ದೇ ಹೆಚ್ಚು.

ಜೈಲಿನಲ್ಲಿರುವಾಗ ಅವರಿಗೆ ಜವಾಹರಲಾಲ್ ನೆಹರು ಮತ್ತು ಅವರ ತಂದೆ ಮೋತಿಲಾಲ್ ನೆಹರು ಪರಿಚಯವಾಯಿತು. ಇಬ್ಬರೊಂದಿಗೂ ಆತ್ಮೀಯತೆ ಬೆಳೆಯಿತು. ಆತ್ಮೀಯತೆ ಯಾವ ಪ್ರಮಾಣದಲ್ಲಿ ಇತ್ತೆಂದರೆ, ಒಂದು ಸಂದರ್ಭದಲ್ಲಿ ಜವಾಹರಲಾಲ್ ಮತ್ತು ಮೋತಿಲಾಲ್ ನೆಹರು ಅವರ ನಡುವೆ ಯಾವುದೋ ಕಾರಣಕ್ಕೆ ಭಿನ್ನಾಭಿಪ್ರಾಯ ಉಂಟಾದಾಗ ತ್ಯಾಗಿ ಮಧ್ಯಸ್ಥಿಕೆ ವಹಿಸಿ, ತಂದೆ–ಮಗನ ನಡುವೆ ರಾಜಿ ಮಾಡಿಸಿದ್ದರು. ತ್ಯಾಗಿ ಜವಾಹರಲಾಲ್ ನೆಹರು ಅವರನ್ನು ಆಗಾಗ ಖಂಡಿಸುತ್ತಿದ್ದರೂ ತಮ್ಮ ಜೀವನದ ಕೊನೆಯವರೆಗೂ ಅವರೊಂದಿಗೆ ಆತ್ಮೀಯರಾಗಿಯೇ ಇದ್ದರು. ಗಾಂಧೀಜಿಯವರ ಜತೆ ಅಹಿಂಸಾ ಮಾರ್ಗದಲ್ಲಿಯೇ ಸ್ವಾತಂತ್ರ್ಯಕ್ಕಾಗಿ ಹೋರಾಟ ಮುಂದುವರಿಸಿದ್ದ ತ್ಯಾಗಿ, ಕ್ರಾಂತಿಕಾರಿಗಳಾದ ಅಷ್ಫಾಕ್ ಉಲ್ಲಾ ಖಾನ್, ರಾಮ ಪ್ರಸಾದ್ ಬಿಸ್ಮಿಲ್, ಪ್ರೇಮ್ ಕಿಶನ್ ಖನ್ನಾ ಮೊದಲಾದವರೊಂದಿಗೂ ಸತತ ಸಂಪರ್ಕದಲ್ಲಿದ್ದರು.

ಸ್ವಾತಂತ್ರ್ಯ ಸಿಕ್ಕ ನಂತರ ತ್ಯಾಗಿ ಭಾರತದ ಸಂವಿಧಾನ ಸಭೆಯ ಸದಸ್ಯರಾಗಿದ್ದರು. ರಾಜಕೀಯವಾಗಿ ತಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲದೆ ಅಕ್ಕಪಕ್ಕದ ಜಿಲ್ಲೆಗಳಿಗೂ ವ್ಯಾಪ್ತಿಯನ್ನು ಬೆಳೆಸಿಕೊಂಡರು. 1950ರಲ್ಲಿ ಭಾರತ ಗಣತಂತ್ರ ದೇಶವಾದಾಗ ತ್ಯಾಗಿ ಎರಡು ವರ್ಷ ಸಂಸತ್ತಿನ ತಾತ್ಕಾಲಿಕ ಸದಸ್ಯರಾಗಿದ್ದರು. 1952ರಿಂದ 1967ರವರೆಗೆ ಒಟ್ಟು ಮೂರು ಅವಧಿಗೆ ತ್ಯಾಗಿ ಲೋಕಸಭೆಗೆ ಆಯ್ಕೆಯಾದರು. ನೆಹರು ಮಂತ್ರಿಮಂಡಲದಲ್ಲಿ ತ್ಯಾಗಿ ಮೊದಲು ಎರಡು ವರ್ಷ ಕಂದಾಯ ಮತ್ತು ಆಯವ್ಯಯ ಸಚಿವರಾಗಿದ್ದರು. ಆ ಕಾಲದಲ್ಲೇ ಅವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವುದು, ಮುಂಜಾಗ್ರತಾ ಕ್ರಮಕ್ಕಾಗಿ ಜನರನ್ನು ಅಮಾನುಷವಾಗಿ ಬಂಧಿಸುವುದು, ಬಂಧಿಸಿದವರಿಗೆ ರಕ್ಷಣೆ ನೀಡದೆ ಇರುವುದು ಮೊದಲಾದವುಗಳನ್ನು ವಿರೋಧಿಸಿದ್ದರು. ಸ್ವಾತಂತ್ರ್ಯ ಸಿಕ್ಕ ದಶಕದ ನಂತರ, ಕೇರಳದ ಚುನಾಯಿತ ಸರಕಾರವನ್ನು ವಜಾ ಮಾಡಬೇಕೆಂಬ ಕೇಂದ್ರ ಸರಕಾರದ ನಿಲುವನ್ನು ಅವರು ಖಂಡಿಸಿದ್ದರು. ಪಕ್ಷದ ಕಾರ್ಯಕಾರಿ ಸಮಿತಿಯಲ್ಲಿರುವ ಇಪ್ಪತ್ತೊಂದು ಜನರ ಸ್ಥಾನಕ್ಕೆ ತಮಗೆ ಬೇಕಾದವರನ್ನೇ ಪುನಃ ಪುನಃ ನಾಮನಿರ್ದೇಶನ ಮಾಡುವುದನ್ನು ಅವರು ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿಯೇ ವಿರೋಧಿಸಿದ್ದರು. ಕನಿಷ್ಠ ಹತ್ತು ಸ್ಥಾನಕ್ಕಾದರೂ ಚುನಾವಣೆ ನಡೆಸಿ ಎಂಬ ಸಲಹೆ ನೀಡಿದ್ದರು. ಅವರ ಅಭಿಪ್ರಾಯವನ್ನು ಒಂದು ಹಂತದಲ್ಲಿ ಮನ್ನಿಸಿದ ನೆಹರು, ವರ್ಷದಿಂದ ವರ್ಷಕ್ಕೆ ಅದೇ ಸದಸ್ಯರನ್ನು ಮರು ನಾಮಕರಣ ಮಾಡಿದ್ದರು.

ನೆಹರು ಮಂತ್ರಿಮಂಡಳದಲ್ಲಿ ನಾಲ್ಕು ವರ್ಷ ಅವರು ರಕ್ಷಣಾ ಸಚಿವಾಲಯದ ರಾಜ್ಯ ಮಂತ್ರಿಯಾಗಿದ್ದರು. ಆಗ ಭಾರತೀಯ ಸೇನೆಯಲ್ಲಿ ಸ್ವದೇಶಿ ಯುದ್ಧೋಪಕರಣಗಳನ್ನು ಪ್ರೋತ್ಸಾಹಿಸಿದರು. ಭಾರತೀಯ ಸಶಸ್ತ್ರ ಪಡೆಗೆ ಬೇಕಾದ ಉಪಕರಣಗಳನ್ನು, ಯುದ್ಧ ಸಾಮಗ್ರಿಗಳನ್ನು ಭಾರತದಲ್ಲಿಯೇ ತಯಾರಿಸಬೇಕು ಎಂಬುದು ಅವರ ನಿಲುವಾಗಿತ್ತು. ಅವರು ಮಾರುತಿ ಯುದ್ಧ ವಿಮಾನ ತಯಾರಿಕೆಯ ಯೋಜನೆಯನ್ನು ಭಾರತದಲ್ಲಿ ಆರಂಭಿಸಿದರು. ಇದು ಭಾರತ ಮಾತ್ರವಲ್ಲ, ಅಭಿವೃದ್ಧಿಶೀಲ ದೇಶಗಳಲ್ಲೇ ಉತ್ಪಾದಿಸಲ್ಪಟ್ಟ ಮೊದಲ ಯುದ್ಧ ವಿಮಾನವೆಂಬ ಕೀರ್ತಿಗೂ ಪಾತ್ರವಾಯಿತು. ಹಾಗಂತ ಅವರು ವಿದೇಶಗಳಿಂದ ಯುದ್ಧ ಸಾಮಗ್ರಿಗಳನ್ನು ಖರೀದಿಸುವುದರ ವಿರೋಧಿಯಾಗಿರಲಿಲ್ಲ. ಬದಲಾಗಿ, ಭಾರತ ತನಗೆ ಬೇಕಾದ ಯುದ್ಧ ಸಾಮಗ್ರಿ, ಶಸ್ತ್ರಾಸ್ತ್ರ ಖರೀದಿಗೆ ಒಂದೋ–ಎರಡೋ ದೇಶವನ್ನು ಮಾತ್ರ ಅವಲಂಬಿಸಬೇಕಾಗಿಲ್ಲ, ಯಾವುದೇ ದೇಶದಿಂದ ಸಾಮಗ್ರಿ ಖರೀದಿಸಲು ಸ್ವತಂತ್ರವಾಗಿದೆ ಎಂಬ ಹೇಳಿಕೆಯನ್ನು ನೀಡಿ ಆ ಕಾಲದಲ್ಲಿ ಎಲ್ಲರ ಗಮನ ಸೆಳೆದಿದ್ದರು. ಭಾರತೀಯ ನೌಕಾಪಡೆಯ 'ಐಎನ್‌ಎಸ್ ಗರುಡ' ಕೂಡ ಅವರ ಕಾಲಾವಧಿಯಲ್ಲೇ ಕಾರ್ಯಾರಂಭ ಮಾಡಿತ್ತು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ, ಪಾಕಿಸ್ತಾನ ಭಾರತದಿಂದ ಬೇರೆಯಾದ ನಂತರ, ಭಾರತದ ಸೇನೆಯಲ್ಲಿ ಮುಸ್ಲಿಮರ ಸಂಖ್ಯೆ ಗಣನೀಯವಾಗಿ ಕುಸಿದಿತ್ತು. ಅದಕ್ಕೆ ಭಾರತೀಯ ಸೇನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರನ್ನು ನೇಮಿಸಿಕೊಳ್ಳಲು ತ್ಯಾಗಿ ಸೂಚನೆ ನೀಡಿದ್ದರು.

ಇದೆಲ್ಲ ಒಂದುಕಡೆಯಾದರೆ, ತಮ್ಮ ಒಂದು ಹೇಳಿಕೆಯಿಂದಾಗಿ ತ್ಯಾಗಿ ಅಂದು ಎಲ್ಲರ ಗಮನ ಸೆಳೆದಿದ್ದರು. ಅದು 1962ರಲ್ಲಿ ಭಾರತ ಮತ್ತು ಚೀನಾ ನಡುವೆ ನಡೆದ ಯುದ್ಧಕ್ಕೆ ಒಂದು ವರ್ಷ ಮೊದಲು ನಡೆದ ಘಟನೆ. ಅಂದು ಸಂಸತ್ತಿನಲ್ಲಿ, ಭಾರತದ ಲಡಾಕ್ ಪ್ರದೇಶದಲ್ಲಿರುವ ಅಕ್ಸಾಯ್ ಚಿನ್ ಕುರಿತು ಗಂಭೀರ ಚರ್ಚೆ ನಡೆಯುತ್ತಿತ್ತು. ವಿಪಕ್ಷಗಳು ಸರಕಾರದ ಮೇಲೆ ಮುಗಿಬಿದ್ದಿದ್ದವು. ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ವಿರುದ್ಧ ಹಿಗ್ಗಾಮುಗ್ಗ ವಾಗ್ದಾಳಿ ನಡೆಸಿದ್ದವು. ಅಂದು ವಿಪಕ್ಷದ ವಾಗ್ದಾಳಿಗೆ ಪ್ರಧಾನಿ ಕಂಗಾಲಾಗಿದ್ದರು. ಅದಕ್ಕೆ ಕಾರಣವೂ ಇತ್ತು. 1950ರ ದಶಕದಲ್ಲಿ ಚೀನಾ ತನ್ನ ದೇಶದಲ್ಲಿರುವ ಕ್ಸಿನ್‌ಜಿಯಾಂಗ್ ಮತ್ತು ಪಶ್ಚಿಮ ಟಿಬೆಟ್ ನಡುವೆ ಸಂಪರ್ಕ ಕಲ್ಪಿಸಲು 1200 ಕಿಲೋಮೀಟರ್ ಉದ್ದದ ರಸ್ತೆಯನ್ನು ನಿರ್ಮಿಸಿತ್ತು. ಅದರಲ್ಲಿ 179 ಕಿಲೋಮೀಟರ್ ರಸ್ತೆ ಭಾರತದ ಹಕ್ಕಿನಲ್ಲಿರುವ ಅಕ್ಸಾಯ್ ಚಿನ್ ಪ್ರದೇಶದ ಮೂಲಕ ಸಾಗಿ ಹೋಗುತ್ತಿತ್ತು. ಇದರಿಂದ ಚೀನಾ ಸೇನೆ ಭಾರತವನ್ನು ಸುಲಭವಾಗಿ ಪ್ರವೇಶಿಸಬಹುದಾಗಿತ್ತು. 1957ರವರೆಗೂ ಭಾರತ ಸರಕಾರಕ್ಕೆ ಈ ರಸ್ತೆಯ ಬಗ್ಗೆ ಗೊತ್ತೇ ಇರಲಿಲ್ಲ. 1958ರಲ್ಲಿ ಪ್ರಕಟವಾದ ಚೀನಾ ನಕ್ಷೆಯಲ್ಲಿ ಈ ರಸ್ತೆಯನ್ನು ಕಂಡಾಗಲೇ ಅದು ಗೊತ್ತಾದದ್ದು. ಭಾರತಕ್ಕೆ ಗೊತ್ತೇ ಆಗದಂತೆ ಭಾರತದ ಭೂಮಿಯನ್ನು ಚೀನಾ ಕಬಳಿಸಿದ್ದು ಎಲ್ಲರ ನಿದ್ದೆಗೆಡಿಸಿತ್ತು. ವಿಪಕ್ಷಗಳು ನೆಹರು ಅವರನ್ನು ತರಾಟೆಗೆ ತೆಗೆದುಕೊಂಡಾಗ, ನೆಹರು ಅವರು 'ಹಿಂದಿ–ಚೀನಿ ಭಾಯಿ ಭಾಯಿ' (ಭಾರತೀಯರು ಮತ್ತು ಚೀನಿಯರು ಸಹೋದರರು) ಎಂಬ ಹೇಳಿಕೆ ನೀಡಿದ್ದರು. ಅದರೊಂದಿಗೆ, ''ಹದಿನೇಳು ಸಾವಿರ ಅಡಿ ಎತ್ತರದ ಆ ಪ್ರದೇಶದಲ್ಲಿ ಒಂದು ಹುಲ್ಲು ಕಡ್ಡಿಯೂ ಬೆಳೆಯುವುದಿಲ್ಲ. ಅದು ವಾಸಿಸಲು ಯೋಗ್ಯವಾದ ಅಥವಾ ಏನನ್ನಾದರೂ ಬೆಳೆಯಲು ಯೋಗ್ಯವಾದ ಭೂಮಿಯಲ್ಲ. ಅದು ಎಲ್ಲಿದೆ ಎಂದೂ ನಮ್ಮಲ್ಲಿ ಬಹಳಷ್ಟು ಜನರಿಗೆ ತಿಳಿದಿಲ್ಲ. ಅದೊಂದು ಪ್ರಯೋಜನಕ್ಕೆ ಬಾರದ ಭೂಮಿ'' ಎಂಬ ಹೇಳಿಕೆ ನೀಡಿದ್ದು ವಿಪಕ್ಷದವರನ್ನು ಇನ್ನಷ್ಟು ಕೆರಳಿಸಿತ್ತು. ತ್ಯಾಗಿ ಮಾತನಾಡಲು ಎದ್ದು ನಿಂತರು. ಆಗ ಅವರು ಸಚಿವರಾಗಿರದೆ ಕೇವಲ ಸಂಸದರಾಗಿದ್ದರು. ಸಾಮಾನ್ಯವಾಗಿ ಪಕ್ಷದವರು ಅದರಲ್ಲೂ ಸರಕಾರದಲಿದ್ದವರು ಅದರ ಪರವಾಗಿಯೇ ಮಾತನಾಡುತ್ತಾರೆ ತಾನೆ? ಅಂದು ಪ್ರಧಾನಿ ನೆಹರು ಆಗಲಿ, ವಿಪಕ್ಷದವರಾಗಲಿ ಅದನ್ನೇ ಅಪೇಕ್ಷಿಸಿದ್ದರು. ಆದರೆ ತ್ಯಾಗಿ ಅಂದು ಬೇರೆ ರೀತಿಯಲ್ಲಿಯೇ ಮಾತನಾಡಿದ್ದರು. ಹೆಚ್ಚು ಉದ್ದ ಮಾತನಾಡದ ತ್ಯಾಗಿ ಕೆಲವೇ ವಾಕ್ಯಗಳಲ್ಲಿ ತಮ್ಮ ಮಾತು ಮುಗಿಸಿದ್ದರು. ತ್ಯಾಗಿಯ ತಲೆಯ ಮೇಲೆ ಕೂದಲು ಇರಲಿಲ್ಲ. ಅವರು ತಮ್ಮ ಬೋಳು ತಲೆಯನ್ನು ತೋರಿಸಿ, ''ನನ್ನ ತಲೆಯ ಮೇಲೆ ಕೂದಲು ಇಲ್ಲ, ನನ್ನದು ಬೋಳು ತಲೆ. ಹಾಗಾದರೆ ನನ್ನ ತಲೆಗೆ ಯಾವ ಬೆಲೆಯೂ ಇಲ್ಲವೇ? ನನ್ನ ತಲೆ ಯಾವ ಪ್ರಯೋಜನಕ್ಕೂ ಬಾರದು ಎಂದು ಅರ್ಥವೇ? ಅದನ್ನು ಬೇರೆಯವರಿಗೆ ಕೊಟ್ಟುಬಿಡಬೇಕೇ? ಅಥವಾ ನನ್ನ ತಲೆಯನ್ನು ಬೇರೆಯವರು ಕತ್ತರಿಸಿದರೆ ನಾನು ಸುಮ್ಮನಿರಬೇಕೇ? ಅಕ್ಸಾಯ್ ಚಿನ್ ಭಾರತದ ತಲೆ ಇದ್ದಂತೆ. ಚೀನಾ ಅದನ್ನು ಕಬಳಿಸಿದೆ. ಅದು ಬಂಜರು ಭೂಮಿ ಎಂದು ನಾವು ಸುಮ್ಮನೆ ಕುಳಿತುಕೊಳ್ಳಬೇಕೇ?'' ಎಂದರು. ತ್ಯಾಗಿಯವರ ಮಾತು ಕೇಳಿ ಅಂದು ನೆಹರು ಅಷ್ಟೇ ಅಲ್ಲ, ವಿಪಕ್ಷದವರೂ ಆಶ್ಚರ್ಯಕ್ಕೊಳಗಾಗಿದ್ದರು. ಜತೆಗೆ, ಬಿಸಿಯಾಗಿದ್ದ ಚರ್ಚೆ ಅಂದು ನಗುವಿನೊಂದಿಗೆ ಮುಕ್ತಾಯಗೊಂಡಿತು. ನಂತರ ಭಾರತ ಮತ್ತು ಚೀನಾದ ನಡುವೆ ಯುದ್ಧ ನಡೆದದ್ದು, ಅದರ ಪರಿಣಾಮ ಏನಾಯಿತು ಎನ್ನುವುದು, ಎಲ್ಲವೂ ಈಗ ಇತಿಹಾಸ. ಅದರ ಕುರಿತು ಹೆಚ್ಚೇನೂ ಹೇಳಬೇಕಾಗಿಲ್ಲ. ಆದರೆ ತ್ಯಾಗಿ ಆ ಸಂದರ್ಭದಲ್ಲಿ ಆಡಿದ ಮಾತು ಇಂದಿಗೂ ಅಮರವೂ, ಮಾದರಿಯೂ ಆಗಿದೆ.

ತ್ಯಾಗಿ 'ವೇ ಕ್ರಾಂತಿ ಕೆ ದಿನ್' ಮತ್ತು 'ಮೇರಾ ಕೌನ್ ಸುನೇಗಾ' ಎಂಬ ಎರಡು ಹಿಂದಿ ಕೃತಿಗಳನ್ನು ರಚಿಸಿದ್ದಾರೆ. ನಂತರ ಆ ಎರಡೂ ಕೃತಿಗಳು ಮತ್ತು ಅವರ ಕೆಲವು ಲೇಖನಗಳನ್ನು ಸೇರಿಸಿ 'ಆಜಾದಿ ಕಾ ಆಂದೋಲನ್' ಶೀರ್ಷಿಕೆಯಲ್ಲಿ ಒಂದೇ ಪುಸ್ತಕ ಮಾಡಲಾಯಿತು. ಯಾವುದಕ್ಕೂ ಅಳುಕದ, ಹಿಂಜರಿಯದ ತ್ಯಾಗಿ ತಮ್ಮ ಕೊನೆಯ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯ ಎದುರು ಸೋತರು. ಆದರೆ ಇರುವಷ್ಟು ದಿನವೂ ಅಂಜಿಕೆಯಿಲ್ಲದೆ ತಮ್ಮ ಅಭಿಪ್ರಾಯವನ್ನು ಪಕ್ಷದಲ್ಲಿ ಮಂಡಿಸುತ್ತಿದ್ದರು. ಆದಾಗ್ಯೂ ಕೊನೆಯವರೆಗೂ ನೆಹರು ಅವರಿಗೆ ಆಪ್ತರಾಗಿಯೇ ಉಳಿದಿದ್ದರು.

ಒಂದು ಸಮಯದಲ್ಲಿ, ಇಂದಿರಾ ಗಾಂಧಿಯವರನ್ನು ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ಪಕ್ಷದ ಕೆಲವು ಮುಖ್ಯಮಂತ್ರಿಗಳು ಒತ್ತಾಯಿಸಿದ್ದರು. ನೆಹರೂ ಅವರಿಗೂ ಅದು ಮನಸ್ಸಿತ್ತು. ಆದರೆ ತ್ಯಾಗಿ ಅದನ್ನು ವಿರೋಧಿಸಿದ್ದರು. ''ಒಂದು ವೇಳೆ ಹಾಗೇನಾದರೂ ಮಾಡುವ ಮನಸ್ಸಿದ್ದರೆ ನೀವು ಪ್ರಧಾನಮಂತ್ರಿಯ ಹುದ್ದೆಗೆ ರಾಜೀನಾಮೆ ನೀಡಿ'' ಎಂದು ನೆಹರು ಅವರಿಗೆ ಪತ್ರ ಬರೆದಿದ್ದರು, ಮಹಾವೀರ ತ್ಯಾಗಿ.

ಇಂದಿನ ಕಾಂಗ್ರೆಸ್ ಪಕ್ಷದ ಹಲವು ನಾಯಕರು ಇವರನ್ನು ಇಷ್ಟಪಡಲು ಇದೇ ಕಾರಣ. ಹಲವು ನಾಯಕರು ಇಷ್ಟಪಡದೇ ಇರಲೂ ಇದೇ ಕಾರಣ. ಜತೆಗೆ, ಇವರ ಹೆಸರನ್ನೇ ಕೇಳದ ರಾಜಕಾರಣಿಗಳು ಇಂದಿನ ದಿನಮಾನದಲ್ಲಿ ಇದ್ದರೂ ಆಶ್ಚರ್ಯವಿಲ್ಲ. ರಾಜಕಾರಣಿಗಳು 'ಹೈಕಮಾಂಡ್' ಸಂಸ್ಕೃತಿ ಬಂದಮೇಲಂತೂ ತ್ಯಾಗಿಯಂಥವರನ್ನು ಊಹಿಸಲೂ ಸಾಧ್ಯವಿಲ್ಲ. ಕೆಲವು ಪಾಶ್ಚಿಮಾತ್ಯ ದೇಶಗಳಲ್ಲಿ ಇಂದಿಗೂ ಪಕ್ಷದ ವಿರುದ್ಧವಾಗಿ ಹೋಗುವುದಿದೆ. ಅಲ್ಲಿ ಪಕ್ಷದ ನಿಲುವು ಏನು ಎನ್ನುವುದಕ್ಕಿಂತ ವಿಷಯ ಏನು ಎನ್ನುವುದು ಪ್ರಮುಖವಾಗುತ್ತದೆ. ಒಂದು ಸಮಸ್ಯೆ ಅಥವಾ ವಿಷಯದ ಮೇಲೆ ಚರ್ಚೆಯಾಗುತ್ತದೆ, ಯಾವುದೇ ಪಕ್ಷದವರಾದರೂ ತಮ್ಮ ನಿಲುವನ್ನು ಪ್ರಕಟಿಸುತ್ತಾರೆ. ಆ ವಿಷಯಕ್ಕೆ ಸಂಬಂಧಿಸಿದಂತೆ ಸಾರಾಸಗಟಾಗಿ ಪರ ಅಥವಾ ವಿರೋಧ ಮಾಡಬೇಕು ಎಂದು ಪಕ್ಷ ಆದೇಶ ನೀಡುವುದಿಲ್ಲ, ಚುನಾಯಿತರು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಅದು ಪಕ್ಷದ ಪರವಾಗಿಯೂ ಇರಬಹುದು, ವಿರೋಧವಾಗಿಯೂ ಇರಬಹುದು, ಅವರ ದೃಷ್ಟಿಯಲ್ಲಿ ದೇಶಕ್ಕೆ ಒಳಿತು ಅನಿಸಿದ್ದನ್ನು ಹೇಳುತ್ತಾರೆ. ಹೆಚ್ಚಿನ ಜನರ ಅಭಿಪ್ರಾಯದಂತೆ ನಿರ್ಣಯ ಕೈಗೊಳ್ಳಲಾಗುತ್ತದೆ.

ನಿಜವಾಗಿ ದೇಶ ನಡೆಯಬೇಕಾದದ್ದು, ದೇಶ ಉದ್ಧಾರ ಆಗುವುದು ಹಾಗೆಯೇ. ಆದರೆ ಇಂದು ಭಾರತದಂಥ ದೇಶದಲ್ಲಿ ಅಧಿಕಾರ ಹಿಡಿಯುವುದು, ಹಿಡಿದ ಅಧಿಕಾರವನ್ನು ಉಳಿಸಿಕೊಳ್ಳುವುದೇ ಪ್ರಮುಖ ವಿಷಯವಾಗಿರುವಾಗ, ನಿಜವಾದ ಸಮಸ್ಯೆಗಳೆಲ್ಲ ಮಣ್ಣಂಗಟ್ಟಿ. ವಿರೋಧಿಸಬೇಕು ಎಂಬ ಒಂದೇ ಕಾರಣಕ್ಕೆ ವಿರೋಧ. ಇದು ಯಾವುದೇ ಒಂದು ಪಕ್ಷಕ್ಕೆ ಸೀಮಿತವಲ್ಲ, ಇಂದು ಭಾರತದ ಎಲ್ಲ ಪಕ್ಷಗಳೂ ಇದೇ ಹಾದಿಯಲ್ಲಿ ಮುನ್ನಡೆಯುತ್ತಿವೆ. ಇದರಿಂದ ರಾಜಕೀಯ ಮುಂದುವರಿಯುತ್ತದೆಯೇ ವಿನಾ ದೇಶ ಒಂದು ಇಂಚೂ ಮುಂದುವರಿಯುವುದಿಲ್ಲ.

ಭಾರತೀಯ ಕಾರ್ಪೊರೇಟ್ ಜಗತ್ತಿನ ಸಾಕ್ಷಿಪ್ರಜ್ಞೆ ರತನ್ ಟಾಟಾ

ನೂರಾರು ಕೋಟಿಗಳ ಒಡೆಯನಾದರೂ ಶ್ರೀಮಂತನಲ್ಲದ ವಿಶಿಷ್ಟ ಉದ್ಯಮಿ ರತನ್ ಟಾಟಾ. ಅವರೊಬ್ಬ ಸಾದಾಸೀದಾ ಮನುಷ್ಯ. ಅವರಿಗೆ ತಾನೊಬ್ಬ ದೊಡ್ಡ ಉದ್ಯಮಿಯೆಂಬ ಅಹಂ ಇರಲಿಲ್ಲ. ಪ್ರಚಾರದಲ್ಲಿರಲು ಅವರಿಗೆ ದಾಕ್ಷಿಣ್ಯವಾಗುತ್ತಿತ್ತು. ಆದರೆ ಅವರಿಗೆ ಬಿಲಿಯನೇರ್‌ನ ಹೃದಯವಿತ್ತು. ಸಮಾಜ ಸೇವೆಯಲ್ಲೇ ಯಶಸ್ಸಿನ ನಿಜವಾದ ಮಾನದಂಡ ಅಡಗಿದೆ ಎಂಬುದು ಅವರ ಬದುಕಿನ ಸಂದೇಶವಾಗಿತ್ತು.



ರತ್ನಸದೃಶ

ಗುರ್‌ಚರಣ್ ದಾಸ್

vveditoped@gmail.com

ರತನ್ ಟಾಟಾ ನೂರಾರು ಬಿಲಿಯನ್ ಡಾಲರ್ ಸಂಪತ್ತಿನ ಉದ್ಯಮ ಸಾಮ್ರಾಜ್ಯಕ್ಕೆ ಅಧಿಪತಿಯಾಗಿದ್ದರು. ಆದರೆ ಅವರ ಹೆಸರು ಬಿಲಿಯನೇರ್‌ಗಳ ಪಟ್ಟಿಯಲ್ಲಿ ಎಂದೂ ಬರುತ್ತಿರಲಿಲ್ಲ. ಈ ವೈರುಧ್ಯಕ್ಕೊಂದು ಕಾರಣವಿದೆ. ಟಾಟಾ ಗ್ರೂಪ್‌ನ ವಿನ್ಯಾಸವೇ ಬಹಳ ವಿಶಿಷ್ಟವಾದುದು. ಅಲ್ಲಿ ಸಂಪತ್ತು ವ್ಯಕ್ತಿಗಳ ಹೆಸರಿನಲ್ಲಿ ಇರುವುದಿಲ್ಲ, ಬದಲಿಗೆ ಚಾರಿಟಬಲ್ ಟ್ರಸ್ಟ್‌ನ ಹೆಸರಿನಲ್ಲಿರುತ್ತದೆ. ಟಾಟಾ ಸಮೂಹದ ಕಂಪನಿಗಳಿಗೆ ಬಂದ ಲಾಭವನ್ನು ಆ ಟ್ರಸ್ಟ್ ಸಾಮಾಜಿಕ ಕಾರ್ಯಗಳಿಗೆ ಖರ್ಚು ಮಾಡುತ್ತದೆ. ಶಿಕ್ಷಣ, ಆರೋಗ್ಯ, ಮಾನವ ಕಲ್ಯಾಣ ಹೀಗೆ ನಾನಾ ಕ್ಷೇತ್ರಗಳಲ್ಲಿ ಟಾಟಾ ಟ್ರಸ್ಟ್ ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡುತ್ತಿದೆ. ರತನ್ ಟಾಟಾ ಅವರ ಪ್ರಕರಣಕ್ಕೆ ಬಂದರೆ ಇನ್ನೊಂದು ವೈಶಿಷ್ಟ್ಯವಿದೆ. ಅವರೊಬ್ಬ ಸಾದಾಸೀದಾ ಮನುಷ್ಯ. ಅವರಿಗೆ ತಾನೊಬ್ಬ ದೊಡ್ಡ ಉದ್ಯಮಿಯೆಂಬ ಅಹಂ ಇರಲಿಲ್ಲ. ಪ್ರಚಾರದಲ್ಲಿರಲು ಅವರಿಗೆ ದಾಕ್ಷಿಣ್ಯವಾಗುತ್ತಿತ್ತು. ಆದರೆ ಅವರಿಗೆ ಬಿಲಿಯನೇರ್‌ನ ಹೃದಯವಿತ್ತು. ಸಮಾಜ ಸೇವೆಯಲ್ಲೇ ಯಶಸ್ಸಿನ ನಿಜವಾದ ಮಾನದಂಡ ಅಡಗಿದೆ ಎಂಬುದು ಅವರ ಬದುಕಿನ ಸಂದೇಶವಾಗಿತ್ತು. ಅವರು ಭಾರತೀಯ ಕಾರ್ಪೊರೇಟ್ ಜಗತ್ತಿನ ಸಾಕ್ಷಿಪ್ರಜ್ಞೆಯಾಗಿದ್ದರು ಎಂಬ ಕಾರಣಕ್ಕಾಗಿಯೇ ಅವರಿಗೆ ಜಗತ್ತಿನಾದ್ಯಂತ ದೊಡ್ಡ ಗೌರವವಿತ್ತು. ಅಕ್ಟೋಬರ್ 9ರಂದು ರತನ್ ಟಾಟಾ ಇಹಲೋಕ ತ್ಯಜಿಸಿದಾಗ ಜಗತ್ತಿನ ಮೂಲೆ ಮೂಲೆಯಿಂದ ಶೋಕ ಸಂದೇಶಗಳು ಹರಿದುಬಂದಿದ್ದಕ್ಕೆ ಇದೇ ಕಾರಣ.

1980ರ ದಶಕದಲ್ಲಿ ಆಹ್ವಾನದ ಮೇರೆಗೆ ನಾನು ಟಾಟಾ ಗ್ರೂಪ್‌ನ ಒಂದು ಕಂಪನಿಯ ಆಡಳಿತ ಮಂಡಳಿಯ ಸದಸ್ಯನಾಗಿ ಕೆಲಸ ಮಾಡಿದ್ದೆ. ಒಂದು ಬೆಳಗ್ಗೆ ಬಾಂಬೆ ಹೌಸ್‌ನಲ್ಲಿ ನಡೆದಿದ್ದ ಸಭೆಗೆ ಚೇರ್ಮನ್ ಫ್ರೆಡ್ಡಿ ಮೆಹ್ತಾ ಅವರು 'ರತನ್' ಎಂದು ತಾವು ಪ್ರೀತಿಯಿಂದ ಕರೆಯುತ್ತಿದ್ದ ಯುವಕನನ್ನು ಕರೆದುಕೊಂಡು ಬಂದಿದ್ದರು. ನನಗೆ ಆತ ಅಪರಿಚಿತ ವ್ಯಕ್ತಿ. ಆದರೆ ನೋಡಲು ಸ್ಫುರದ್ರೂಪಿಯಾಗಿದ್ದ ಮತ್ತು ಮುಜುಗರದ ಮುದ್ದೆಯಾಗಿದ್ದ ಕಾರಣಕ್ಕೆ ಇಂದಿಗೂ ಆ ಮುಖ ನೆನಪಿದೆ. ಅವರು 'ಟಾಟಾ' ಎಂಬ ದೊಡ್ಡ ವ್ಯಕ್ತಿ ಎಂದು ಅಲ್ಲಿದ್ದ ಯಾರೂ ಹೇಳಲಿಲ್ಲ. ಸಭೆ ಶುರುವಾಗಿ ಹದಿನೈದು ನಿಮಿಷ ಕಳೆದಿರಬಹುದು. ನಾಯಿಯೊಂದು ಬೋರ್ಡ್ ಮೀಟಿಂಗಿನ ಕೊಠಡಿಗೆ ಬಂದು ರತನ್ ಕಾಲಿನ ಬಳಿ ಕುಳಿತಿತು. ನನ್ನನ್ನು ಬಿಟ್ಟು ಸಭೆಯಲ್ಲಿದ್ದ ಯಾರಿಗೂ ಅದು ವಿಶೇಷವೆನ್ನಿಸಲಿಲ್ಲ. ನಂತರ ನನಗೆ ತಿಳಿದಿದ್ದೇನೆಂದರೆ, ಅದು ಬಾಂಬೆ ಹೌಸ್ ಬಳಿ ಕೆಲ ದಿನಗಳ ಹಿಂದೆ ರತನ್ ರಕ್ಷಿಸಿ ಕರೆದುಕೊಂಡು ಬಂದು ಆಶ್ರಯ ನೀಡಿದ್ದ ಬೀದಿನಾಯಿಯಾಗಿತ್ತು ಮತ್ತು ಅಂಥ ಇನ್ನೂ ಅನೇಕ ನಾಯಿಗಳು ಅವರ ಆಶ್ರಯದಲ್ಲಿದ್ದವು.

ನಂತರ ನಾನು ರತನ್ ಬಗ್ಗೆ ಕೇಳಿದ್ದು 1991ರಲ್ಲಿ. ಆಗಷ್ಟೇ ಅವರು ಜೆ.ಆರ್.ಡಿ. ಟಾಟಾರಿಂದ ಟಾಟಾ ಸಮೂಹದ ಮುಖ್ಯಸ್ಥನ ಸ್ಥಾನವನ್ನು ವಹಿಸಿಕೊಂಡಿದ್ದರು. ಇದು ಸ್ವಜನಪಕ್ಷಪಾತ ಎಂದು ನಾನು ಟೀಕಿಸಿದ್ದೆ. ಇಂಗ್ಲಿಷ್‌ನಲ್ಲಿ ಅದಕ್ಕೆ ನೆಪೋಟಿಸಂ ಎನ್ನುತ್ತಾರೆ. 'ನೆಪೋಟ್' ಎಂಬ ಪದ ಲ್ಯಾಟಿನ್ ಮೂಲದಿಂದ ಬಂದಿದೆ. ಇಂಗ್ಲಿಷ್‌ನಲ್ಲಿ ಅದರರ್ಥ ನೆವ್ಯೂ. ಅಂದರೆ ಸಂಬಂಧಿಕ. ಸಂಸ್ಕೃತದ 'ನಪಾತ್'ಗೆ ಇದರ ಜತೆ ನಂಟಿದೆ. ರತನ್ ಟಾಟಾ ಜೆ.ಆರ್.ಡಿ. ಟಾಟಾಗೆ ಸಂಬಂಧಿಯಾಗಿದ್ದರು. ಹೀಗಾಗಿ ನನ್ನ ಪ್ರತಿಕ್ರಿಯೆ ಸಹಜವಾಗಿತ್ತು. ಏಕೆಂದರೆ ಅಲ್ಲಿಯವರೆಗೆ ರತನ್ ಮಾಡಿದ ಸಾಧನೆ ಅಷ್ಟಕ್ಕಷ್ಟೇ ಆಗಿತ್ತು. ನ್ಯಾಷನಲ್ ರೇಡಿಯೋ ಆ್ಯಂಡ್ ಇಲೆಕ್ಟ್ರಾನಿಕ್ಸ್ (ನೆಲ್ಕೋ) ಎಂಬ ವಿಫಲ ಉದ್ದಿಮೆಯನ್ನು ಅವರು ನಡೆಸುತ್ತಿದ್ದರು. ಅವರು ಉದ್ಯಮ ಜಗತ್ತಿಗೆ ಬಂದಿದ್ದೇ ಆಕಸ್ಮಿಕವಾಗಿತ್ತು. ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ರತನ್ ಆರ್ಕಿಟೆಕ್ಚರ್ ಓದಿದ್ದರು. ಬಳಿಕ ಆರ್ಕಿಟೆಕ್ಟ್ ಆಗಿ ಕೆಲಸ ಮಾಡುತ್ತಿದ್ದರು. ಅಮೆರಿಕದಲ್ಲೇ ಉಳಿದುಕೊಳ್ಳುವುದಕ್ಕೂ ಬಯಸಿದ್ದರು. ಆದರೆ ಅವರನ್ನು ಬೆಳೆಸಿದ ಅಜ್ಜಿ ತನಗೆ ಹುಷಾರಿಲ್ಲದಾಗ ರತನ್‌ರನ್ನು ಭಾರತಕ್ಕೆ ಕರೆಸಿಕೊಂಡಿದ್ದರು.



ವಿಧಿಯು ಸರಿಯಾದ ಸಮಯಕ್ಕೆ ಸರಿಯಾದ ಜಾಗದಲ್ಲೇ ರತನ್ ಟಾಟಾರನ್ನು ತಂದು ಕೂರಿಸಿತ್ತು. ಪ್ರಧಾನಿ ನರಸಿಂಹ ರಾವ್ ಆಗಷ್ಟೇ ಭಾರತದ ಆರ್ಥಿಕತೆಯನ್ನು ಜಗತ್ತಿಗೆ ತೆರೆದಿದ್ದರು. ಭಾರತೀಯ ಉದ್ದಿಮೆಗಳು ಎರಡು ತಲೆಮಾರುಗಳ ಲೈಸೆನ್ಸ್‌ರಾಜ್, ಕೋಟಾರಾಜ್ ಹಾಗೂ ಇನ್‌ಸ್ಪೆಕ್ಟರ್ ರಾಜ್ ಸಂಕೋಲೆಯಿಂದ ಬಿಡಿಸಿಕೊಂಡು ಸ್ವತಂತ್ರವಾಗಿದ್ದವು. ಉದ್ಯಮಿಗಳಿಗೆ ಅಪಾರ ಅವಕಾಶಗಳು ಸೃಷ್ಟಿಯಾಗಿದ್ದವು. ಆದರೆ ಅವುಗಳನ್ನು ಬಾಚಿಕೊಳ್ಳುವುದಕ್ಕೂ ಮೊದಲು ರತನ್ ಟಾಟಾ ತನ್ನ ಮನೆಯನ್ನು ಸರಿಪಡಿಸಿಕೊಳ್ಳಬೇಕಿತ್ತು. ಜೆ.ಆರ್.ಡಿ ಟಾಟಾ ಬಿಟ್ಟುಹೋಗಿದ್ದ ಉದ್ಯಮ ಸಾಮ್ರಾಜ್ಯ ಅಲುಗಾಡುತ್ತಿತ್ತು. ಟಾಟಾ ಸಮೂಹದ ಕಂಪನಿಗಳು ಚೆಲ್ಲಾಪಿಲ್ಲಿಯಾಗುವ ಭೀತಿಯಲ್ಲಿದ್ದವು. ಏಕೆಂದರೆ ಸಮೂಹದ ಮೂರು ಬೃಹತ್ ಕಂಪನಿಗಳಾದ ಟಾಟಾ ಸ್ಟೀಲ್, ಟಾಟಾ ಕೆಮಿಕಲ್ಸ್ ಮತ್ತು ಇಂಡಿಯನ್ ಹೋಟೆಲ್ಸ್‌ಗಳನ್ನು ಕ್ರಮವಾಗಿ ರುಸ್ಸಿ ಮೋದಿ, ದರ್ಬಾರಿ ಸೇಠ್ ಹಾಗೂ ಅಜಿತ್ ಕೇರ್ಕರ್ ಎಂಬ ಮೂವರು ಉದ್ಯಮಪತಿಗಳು ತಮ್ಮಿಷ್ಟಕ್ಕೆ ತಕ್ಕಂತೆ ನಡೆಸುತ್ತಿದ್ದರು.

ಈ ಮೂವರೂ ಬಹಳ ದಕ್ಷ ಆಡಳಿತಗಾರರು ಎಂಬುದು ನಿಜ. ಆದರೆ ಇವರು ಯಾವುದಕ್ಕೂ ಕೇರ್ ಮಾಡುತ್ತಿರಲಿಲ್ಲ. ಬದುಕಿಗಿಂತ ತಾವೇ ದೊಡ್ಡವರು ಎಂಬಂತೆ ಮೆರೆಯುತ್ತಿದ್ದರು. ಯಾರಿಗೂ ಹೆದರುತ್ತಿರಲಿಲ್ಲ. ಈ ಸತ್ರಪರನ್ನು ನೋಡಿ ಸ್ವತಃ ಜೆ.ಆರ್.ಡಿ. ಟಾಟಾ ಕಂಗಾಲಾಗಿದ್ದರು. ಹೀಗೆ ಅವರು ಬಿಟ್ಟು ಹೋದ ಟಾಟಾ ಗ್ರೂಪ್‌ನಲ್ಲಿ ಮೂವರು ಅಸಾಧಾರಣ ವ್ಯಕ್ತಿಗಳನ್ನು ದಾರಿಗೆ ತರುವುದು ರತನ್‌ಗಿದ್ದ ಮೊದಲ ಸವಾಲಾಗಿತ್ತು. ರತನ್ ಸೋಲುವ ಸಾಧ್ಯತೆಗಳೇ ಹೆಚ್ಚಿದ್ದವು. ಆದರೆ ತನ್ನದೇ ಶಸ್ತ್ರಾಸ್ತ್ರಗಳನ್ನು ಹುಡುಕಿಕೊಂಡು ಯುದ್ಧ ಆರಂಭಿಸಿದ ರತನ್ ಟಾಟಾ ಗೆದ್ದುಬಿಟ್ಟರು. ಟಾಟಾ ಗ್ರೂಪ್‌ನಲ್ಲಿ ಬಹಳ ಜನರಿಗೆ ಗೊತ್ತೇ ಇಲ್ಲದಿದ್ದ ನಿವೃತ್ತಿಯ ವಯಸ್ಸಿನ ನಿಯಮವನ್ನು ಹುಡುಕಿ ತೆಗೆದ ಅವರು, ಆ ಮೂವರನ್ನೂ ಬಹಳ ಸುಲಭವಾಗಿ ಮನೆಗೆ ಕಳುಹಿಸಿದರು. ಆಗಲೇ ಜಗತ್ತಿಗೆ ರತನ್ ಟಾಟಾ ಬಳಿ ಮೆದುವಾದ ವೆಲ್ವೆಟ್ ಹ್ಯಾಂಡ್‌ಗ್ಲೌಸಿನೊಳಗೆ ಕಬ್ಬಿಣದ ಮುಷ್ಟಿಯಿದೆ ಎಂಬುದು ಗೊತ್ತಾಗಿದ್ದು. ರತನ್ ಕೈಗೊಂಡ ಆ ನಿರ್ಧಾರದಿಂದ ಟಾಟಾ ಸಮೂಹದ ಭವಿಷ್ಯವೇ ಬದಲಾಯಿತು. ಎಲ್ಲಾ ಕಂಪನಿಗಳ ನಡುವೆ ಒಗ್ಗಟ್ಟು ಮೂಡಿತು. ಇದರಲ್ಲಿ ಭಾರತೀಯ ಕಾರ್ಪೊರೇಟ್ ಜಗತ್ತಿಗೊಂದು ಒಳ್ಳೆಯ ಪಾಠವಿದೆ. ಹೇಗೆ ಪ್ರಜಾಪ್ರಭುತ್ವದಲ್ಲಿ ಕಾನೂನಿಗಿಂತ ಯಾರೂ ಮೇಲೆ ಅಲ್ಲವೋ ಹಾಗೆಯೇ ಉದ್ದಿಮೆಯಲ್ಲಿ ಯಾರೂ 'ಕಂಪನಿಗಿಂತ ದೊಡ್ಡವರಲ್ಲ'. ಪ್ರಜಾಪ್ರಭುತ್ವವನ್ನೂ, ಕಂಪನಿಗಳನ್ನೂ 'ಸಾಮಾನ್ಯ' ವ್ಯಕ್ತಿಗಳು ನಡೆಸುವುದೇ ಒಳ್ಳೆಯದು.

ನಂತರದ್ದು ರತನ್ ಟಾಟಾ ಎಂಬ ದೂರದೃಷ್ಟಿಯ ಉದ್ಯಮಿಯ ಕತೆ. ಅವರು ಟಾಟಾ ಸಮೂಹವನ್ನು ಭಾರತದಾಚೆಗೂ ವಿಸ್ತರಿಸಿ ಜಾಗತಿಕ ಹೆಸರನ್ನಾಗಿ ರೂಪಾಂತರಗೊಳಿಸಿದರು. ಮೊದಲಿಗೆ ಬ್ರಿಟನ್ನಿನ ಟೆಟ್ಲಿ ಟೀ ಕಂಪನಿಯನ್ನು ಖರೀದಿಸಿದರು. ನಂತರ ಬ್ರಿಟನ್ನಿನ ಉಕ್ಕು ಉತ್ಪಾದಕ ಕಂಪನಿ ಕೋರಸ್ ಖರೀದಿಸಿದರು. ಅದೇ ದೇಶದ ಜಾಗ್ವಾರ್ ಲ್ಯಾಂಡ್ ರೋವರ್ ಬ್ರ್ಯಾಂಡ್‌ಗಳನ್ನು ಫೋರ್ಡ್ ಮೋಟರ್ ಕಂಪನಿಯಿಂದ ಖರೀದಿಸಿದರು. ತನ್ಮೂಲಕ ಬ್ರಿಟನ್ನಿನಲ್ಲಿ ಅತಿದೊಡ್ಡ ಬಂಡವಾಳ ಹೂಡಿಕೆದಾರನಾದರು. ಕೋರಸ್ ಕಂಪನಿಯನ್ನು ಖರೀದಿಸಿದ ನಿರ್ಧಾರವು ಮುಂದೆ ಜಾಗತಿಕ ಆರ್ಥಿಕ ಕುಸಿತದ ಸಮಯದಲ್ಲಿ ಟಾಟಾಗೆ ದೊಡ್ಡ ತಲೆನೋವಾಯಿತು ಎಂಬುದು ಬೇರೆ ವಿಷಯ. ಭಾರತದಲ್ಲಿ ಸಿಮೆಂಟ್, ಜವಳಿ, ಕಾಸ್ಮೆಟಿಕ್ಸ್, ಫಾರ್ಮಾಸ್ಯುಟಿಕಲ್ಸ್‌ಗೆ ಸಂಬಂಧಿಸಿದ ಅನೇಕ ಕಂಪನಿಗಳನ್ನು ಮಾರಾಟ ಮಾಡಿದ ರತನ್ ಟಾಟಾ, ಬೇರೆ ಬೇರೆ ಹೊಸ ಕ್ಷೇತ್ರಗಳಿಗೆ ಕಾಲಿರಿಸುವ ಸಾಹಸಕ್ಕೆ ಮುಂದಾದರು. ಅದರಂತೆ ಟೆಲಿಕಾಂ, ರೀಟೇಲ್ ಹಾಗೂ ಹಣಕಾಸು ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿದರು. ಅದರ ಬೆನ್ನಲ್ಲೇ ಮೊದಲ ಸ್ವದೇಶಿ ಕಾರು 'ಇಂಡಿಕಾ' ತಯಾರಿಸಿದರು. ನಂತರ ದೇಶದ ಅತ್ಯಂತ ಸೋವಿ ಕಾರು 'ನ್ಯಾನೋ' ಬಿಡುಗಡೆ ಮಾಡಿದರು. ಉತ್ಪಾದನೆ ಹಾಗೂ ಮಾರ್ಕೆಟಿಂಗ್ ವೈಫಲ್ಯದಿಂದ ನ್ಯಾನೋ ಫೇಲಾಯಿತು. 1 ಲಕ್ಷ ರುಪಾಯಿಗೆ ಸಿಗುವ ಕಾರು ಜಗತ್ತಿನ ಅತ್ಯಂತ ಸೋವಿ ಕಾರೇನೋ ಆಗಿತ್ತು. ಆದರೆ, ಅದನ್ನು 'ಚೀಪ್ ಕಾರು' ಎಂಬಂತೆ ಜನರು ನೋಡತೊಡಗಿದರು. ಹೀಗಾಗಿ ನಿರೀಕ್ಷೆಯಂತೆ ಬೇಡಿಕೆ ಬರಲಿಲ್ಲ.

2012ರಲ್ಲಿ ಟಾಟಾ ಗ್ರೂಪ್‌ನ ಮುಖ್ಯಸ್ಥನ ಸ್ಥಾನದಿಂದ ರತನ್ ಕೆಳಗಿಳಿದಾಗ ಅದರ ವ್ಯವಹಾರ 25 ಪಟ್ಟು ಬೆಳೆದಿತ್ತು. 1991ರಲ್ಲಿ ರತನ್ ಆ ಹುದ್ದೆ ವಹಿಸಿಕೊಂಡಾಗ ಟಾಟಾ ಸಮೂಹದ ವ್ಯವಹಾರ 4 ಬಿಲಿಯನ್ ಡಾಲರ್ ಇತ್ತು. 2012ರಲ್ಲಿ ಅದು 100 ಬಿಲಿಯನ್ ಡಾಲರ್‌ಗೆ ಏರಿತ್ತು. ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಕಂಪನಿ ಏಷ್ಯಾದ ಅತಿ ದೊಡ್ಡ ಐಟಿ ಕಂಪನಿಯಾಗಿ ಹೊರಹೊಮ್ಮಿತ್ತು. ಟಾಟಾ ಸಮೂಹದ ಶೇ.90ರಷ್ಟು ಲಾಭ ಅದೊಂದೇ ಕಂಪನಿಯಿಂದ ಬರುತ್ತಿತ್ತು. ಆ ಕಂಪನಿಯಿಂದ ಪ್ರತಿ ವರ್ಷ 4 ಬಿಲಿಯನ್ ಡಾಲರ್ ಡಿವಿಡೆಂಡ್ ಸಿಗುತ್ತಿತ್ತು. ಹೀಗಾಗಿ ಅದು ಟಾಟಾ ಸಮೂಹದ ಚಿನ್ನದ ಮೊಟ್ಟೆಯಿಡುವ ಕೋಳಿಯೆಂಬ ಖ್ಯಾತಿ ಗಳಿಸಿತು.

ಆದರೆ ರತನ್ ಟಾಟಾ ಅವಧಿಯು ಕೋರ್ಟ್ ಸಮರದ ಮೂಲಕ ಅಂತ್ಯವಾಯಿತು ಎಂಬುದು ಬೇಸರದ ಸಂಗತಿ. ಟಾಟಾ ಸಮೂಹದಲ್ಲಿ ಅತಿದೊಡ್ಡ ಷೇರುದಾರನಾಗಿದ್ದ ಕುಟುಂಬದ ಸೈರಸ್ ಮಿಸ್ತ್ರಿ ಅವರು ಟಾಟಾಗೆ ಉತ್ತರಾಧಿಕಾರಿಯಾದರು. ಅದೇಕೋ ಸರಿಹೋಗಲಿಲ್ಲ. ಹೀಗಾಗಿ ಮಿಸ್ತ್ರಿಯನ್ನು ರತನ್ ಟಾಟಾ ಹೊರಗೆ ಹಾಕಿದರು. ಆದರೆ ಮಿಸ್ತ್ರಿ ಸುಮ್ಮನೆ ಹೋಗಲಿಲ್ಲ. ಟಾಟಾ ಗ್ರೂಪ್ ಮೇಲೆ ಕೇಸು ಹಾಕಿದರು. ಟಾಟಾ ಸಮೂಹದಲ್ಲಿ ಸ್ವಜನಪಕ್ಷಪಾತ ನಡೆಯುತ್ತದೆ, ಕಡಿಮೆ ಷೇರು ಹೊಂದಿರುವವರಿಗೆ ತಾರತಮ್ಯ ಮಾಡಲಾಗುತ್ತದೆ, ಭ್ರಷ್ಟಾಚಾರವನ್ನು ಕಡೆಗಣಿಸಲಾಗುತ್ತದೆ ಎಂದೆಲ್ಲಾ ಅವರು ದೂರಿದರು. ಆರಂಭದಲ್ಲಿ ಕೋರ್ಟುಗಳು ಮಿಸ್ತ್ರಿ ಪರವಾಗಿಯೇ ಆದೇಶಗಳನ್ನು ನೀಡಿದವು. ಅಂತಿಮವಾಗಿ, ಮಿಸ್ತ್ರಿಯನ್ನು ಹೊರಹಾಕಿದ್ದು ಸರಿಯಾಗಿದೆ ಎಂಬ ತೀರ್ಪು ಸುಪ್ರೀಂಕೋರ್ಟ್‌ನಲ್ಲಿ ಬಂದಿತು.

ರತನ್ ಟಾಟಾ ಅವರ ಬದುಕಿನಿಂದ ಕಲಿಯಬೇಕಾದ ಕೊನೆಯ ಪಾಠ ಉತ್ತರಾಧಿಕಾರಕ್ಕೆ ಸಂಬಂಧಿಸಿದ್ದು. 2017ರಲ್ಲಿ ಅತ್ಯಂತ ದಕ್ಷ ಉದ್ಯಮಿ ಮತ್ತು ಆಡಳಿತಗಾರ ಎನ್. ಚಂದ್ರಶೇಖರ್ ಅವರನ್ನು ಟಾಟಾ ಸಮೂಹದ ಸಿಇಒ ಹುದ್ದೆಗೆ ರತನ್ ನೇಮಿಸಿದರು. ಆದರೆ, ಟಾಟಾ ಟ್ರಸ್ಟ್‌ಗೆ ಮುಖ್ಯಸ್ಥನಾಗಿ ತಾವೇ ಉಳಿದುಕೊಂಡರು. ಟಾಟಾ ಟ್ರಸ್ಟ್ ಎಂಬುದು ಟಾಟಾ ಸಮೂಹದ ಎಲ್ಲಾ ಕಂಪನಿಗಳಿಗೆ ಮುಖ್ಯಸ್ಥನಂತೆ. ಆದರೆ, ವ್ಯವಹಾರದಲ್ಲಿ ಅದು ನೇರವಾಗಿ ತಲೆಹಾಕುವುದಿಲ್ಲ. ಹೀಗೆ ಟಾಟಾ ಕುಟುಂಬವನ್ನು ಟಾಟಾ ಗ್ರೂಪ್‌ನ ಕಂಪನಿಗಳನ್ನು ನಡೆಸುವ ಜವಾಬ್ದಾರಿಯಿಂದ ರತನ್ ಹೊರಗೆ ತಂದರು. ಭಾರತೀಯ ಕಾರ್ಪೊರೇಟ್ ಜಗತ್ತಿಗೆ ಇದು ಬಹಳ ಮುಖ್ಯವಾದ ಪಾಠ. ಏಕೆಂದರೆ ಇಲ್ಲಿ ಯೋಗ್ಯತೆಯಿಲ್ಲದ ಅನೇಕ ಮಕ್ಕಳು ಅಪ್ಪನಿಂದ ಕಂಪನಿಯ ಚುಕ್ಕಾಣಿ ಪಡೆದುಕೊಳ್ಳುತ್ತಾರೆ. ಹೀಗಾಗಿ ಭಾರತದ ಸಾಕಷ್ಟು ಕಂಪನಿಗಳು ಇಂದು ಕೌಟುಂಬಿಕ ವ್ಯಾಜ್ಯಗಳಲ್ಲಿ ಮುಳುಗಿವೆ. ಕಂಪನಿಗಳನ್ನು ಕಟ್ಟುವವರು ತಮ್ಮ ಕುಟುಂಬ ಕೂಡ ಒಂದು ದಿನ ಕಂಪನಿಯ ಚುಕ್ಕಾಣಿಯನ್ನು ಬಿಡಬೇಕು ಎಂಬುದನ್ನು ಮನಗಂಡರೆ ಮಾತ್ರ ಭಾರತೀಯ ಉದ್ದಿಮೆಗಳು ಪ್ರೌಢಾವಸ್ಥೆಯನ್ನು ತಲುಪುತ್ತವೆ. ನಾವು ಕಟ್ಟಿದ ಕಂಪನಿಯ ದೈನಂದಿನ ವ್ಯವಹಾರಗಳನ್ನು ನೋಡಿಕೊಳ್ಳಲು ಒಂದಲ್ಲಾ ಒಂದು ದಿನ ಹೊರಗಿನವರನ್ನು ತರಬೇಕಾಗುತ್ತದೆ ಎಂಬುದಕ್ಕೆ ಉದ್ಯಮಿಗಳು ಮಾನಸಿಕವಾಗಿ ಮೊದಲೇ ಸಿದ್ಧರಾಗಿರಬೇಕು. ಮಗ ದಕ್ಷನೇ ಆಗಿರಬಹುದು, ಆದರೆ ಆತ ಆ ಕೆಲಸಕ್ಕೆ ಜಗತ್ತಿನಲ್ಲೇ ಬೆಸ್ಟ್ ಆಗಿರಬೇಕಿಲ್ಲ. ಇದು ಸಾಮಾನ್ಯ ಜ್ಞಾನ. ಕುಟುಂಬದ ಸದಸ್ಯ ರಿಸ್ಕ್ ತೆಗೆದುಕೊಳ್ಳುವಷ್ಟು ಧೈರ್ಯವಾಗಿ ಪ್ರೊಫೆಷನಲ್ ಮ್ಯಾನೇಜರ್ ರಿಸ್ಕ್ ತೆಗೆದುಕೊಳ್ಳಲಾರ ಎಂಬುದು ನಿಜವಲ್ಲ. ಕುಟುಂಬದ ಹಿಡಿತದಲ್ಲಿದ್ದ ಕಂಪನಿಯೊಂದು ಹೊರಗಿನ ಸಿಇಒ ಕೈಯಲ್ಲಿ ಫೇಲಾಯಿತು ಅಂದರೆ ನೀವು ಸರಿಯಾದ ಸಿಇಒ ಆಯ್ಕೆ ಮಾಡಿಲ್ಲ ಎಂದಷ್ಟೇ ಅರ್ಥ.

(ಲೇಖಕರು ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್ ಕಂಪನಿಯ ಮಾಜಿ ವ್ಯವಸ್ಥಾಪಕ ನಿರ್ದೇಶಕರು)

ಪ್ರತಿಸ್ಪಂದನ

ಶಂಕರನಾರಾಯಣ ಭಟ್

'ತಂಬುಳಿ' ಮೀಟಿದವ...!

ವಿಶ್ವೇಶ್ವರ ಭಟ್ಟರು 'ಇದೇ ಅಂತರಂಗ ಸುದ್ದಿ' ಅಂಕಣದಲ್ಲಿ (ವಿಶ್ವವಾಣಿ ಅ.20) ತಂಬುಳಿ ಬಗ್ಗೆ ಬರೆದದ್ದು ಖುಷಿ ನೀಡಿತು. ಕೊನೆಯಲ್ಲಿ ಅವರೇ ಹೇಳಿಕೊಂಡಂತೆ, ಅವರು ತಂಬುಳಿ ಅಥವಾ ತಂಬಳಿ ಬಗ್ಗೆ ಬರೆದದ್ದು ಏನೇನೂ ಅಲ್ಲ!

ತಂಬುಳಿಯಲ್ಲಿರುವ ವೈವಿಧ್ಯವು ವಿಶೇಷವಾಗಿ ಹವ್ಯಕರ ಊಟದಲ್ಲಿ ಕಾಣಸಿಗುತ್ತದೆ. ಇಲ್ಲೂ, ಕುಡಿಯುವ ತಂಬುಳಿ ಮತ್ತು ಅನ್ನಕ್ಕೆ ಬೇರೆ ಅಂತ ಇದೆ. ಕುಡಿಯಲೆಂದೇ ಇರುವ ತಂಬುಳಿಯು ಸಾಮಾನ್ಯವಾಗಿ ಸ್ವಲ್ಪ ಸಿಹಿಯಾಗಿರುತ್ತದೆ, ಅಷ್ಟೊಂದು ಖಾರವಾಗಿಯೂ ಹುಳಿಯಾಗಿಯೂ ಇರುವುದಿಲ್ಲ. ಉದಾಹರಣೆಗೆ, ಉರುಗೆಲೆ ಅಥವಾ ಒಂದೆಲಗ,

ಮೊಗೆಕಾಯಿ (ಮದ್ರಾಸ್ ಸೌತೆ) ತಿರುಳಿನಿಂದ ಮಾಡಿದ್ದು. ಇದನ್ನು 'ಮೊದಲು ಬಡಿಸಿಕೊಳ್ಳುವ ತಂಬುಳಿ' ಅಂತಲೂ ಕರೆಯುತ್ತಾರೆ. ಮದುವೆ–ಮುಂಜಿ ಮತ್ತಿತರ ಕಾರ್ಯಕ್ರಮಗಳಲ್ಲಿ ಈ 'ಕಡುತಂಬ್ಳಿ' ಇದ್ದೇ ಇರುತ್ತದೆ. ಕುಡಿಯುವ ತಂಬುಳಿಯನ್ನು ಮಜ್ಜಿಗೆ ಹುಲ್ಲಿನಿಂದಲೂ ತಯಾರಿಸುತ್ತಾರೆ. ಇನ್ನು, ಅನ್ನದ ಜತೆಗಂತೂ ಸಾಕಷ್ಟು ತಂಬುಳಿಗಳಿವೆ. ಶುಂಠಿ, ಜೀರಿಗೆ–ಕೊತ್ತುಂಬರಿ, ಜೀರಿಗೆ–ಮೆಂತ್ಯ, ಪೇರಲೆ ಕೊಡಿ, ಪತ್ರೆ ಕೊಡಿ, ಒಗ್ಗರಣೆ ಸಪ್ಪು, ಸಂಬಾರ ಸಪ್ಪು, ತೊಂಡೆ ಸಪ್ಪು, ಎಲಬದಿಗೆ ಸಪ್ಪು, ಹಸಿಮೆಣಸು–ಇಂಗು, ದಾಳಿಂಬೆ ಕೊಡಿ, ದಾಸಾಳ ಸಪ್ಪು (ಚಿತ್ರ ದಾಸಾಳ), ಜುಮ್ಮಿನ ಕಾಯಿ, ಮೂಸಂಬಿ ಹಣ್ಣಿನ ಸಿಪ್ಪೆ– ಇವಿಷ್ಟು ಸದ್ಯ ನೆನಪಾಗಿದ್ದು. ತಂಬುಳಿ ಇಲ್ಲದ ಊಟದ ದಿನಗಳೇ ನಮ್ಮ ಹವ್ಯಕರಲ್ಲಿ ಇರದು; ಒಂದಲ್ಲಾ ಒಂದು ಬಗೆಯ ತಂಬುಳಿ ದಿನನಿತ್ಯ ಇರಲೇಬೇಕು. ಸಾಮಾನ್ಯವಾಗಿ ಯಾರದ್ದಾದರೂ ಮನೆಯಲ್ಲಿ ವಯಸ್ಸಾದವರು ಯಾರನ್ನಾದರೂ ಊಟಕ್ಕೆ ಕರೆದಾಗ ಹೇಳುವ ಮಾತು– 'ಮತ್ತೇನೂ ಮಾಡಿ ಬಡಿಸಲಾರೆ, ಅನ್ನ–ತಂಬುಳಿ ಅಷ್ಟೇ' ಅಂತ. ಅಷ್ಟೇ ಅಲ್ಲ, ಯಾರಾದರೂ ಆಲಸಿಗಳಾಗಿದ್ದರೆ, 'ಏನು, ಒಂದು ಅನ್ನ–ತಂಬುಳಿ ಮಾಡಲೂ ಆಗುವುದಿಲ್ಲವೇ?' ಎಂದು ಕೇಳುವುದೂ ಉಂಟು.

ತಂಬುಳಿಗೆ ಅದರದೇ ಆದ ವಿಶಿಷ್ಟ–ವಿಶೇಷ ಸ್ಥಾನ ಇದ್ದೇ ಇದೆ. ತಂಬುಳಿ ಇಲ್ಲದ ಊಟ ಅಪೂರ್ಣ. ತಂಬುಳಿಯು ಅದೆಷ್ಟು ಲಘು ಆಹಾರ ಮತ್ತು ಆರೋಗ್ಯದಾಯಕ ಎಂದರೆ, ಅದನ್ನು ಉಂಡು ಕೆಟ್ಟವರು, ಹೊಟ್ಟೆ ಕೆಡಿಸಿಕೊಂಡವರು ಯಾರೂ ಇರಲಿಕ್ಕಿಲ್ಲ! ಇದರಲ್ಲಿ ಅದೆಷ್ಟೋ ಔಷಧಿಯುಕ್ತ ವಸ್ತುಗಳಿರುವುದರಿಂದ ಜೀರ್ಣಕ್ರಿಯೆಯನ್ನು ಸುಲಭವಾಗಿಸುತ್ತದೆ. ತಂಬುಳಿಯು ಅತ್ಯಂತ ಸರಳವಾಗಿ, ಹೆಚ್ಚುವರಿ ಖರ್ಚಿಲ್ಲದೆ ತಯಾರಾಗುವ ಖಾದ್ಯವಾಗಿರುವುದರಿಂದ ತನ್ನತನವನ್ನು ಜೋಪಾನವಾಗಿ ಕಾಪಿಟ್ಟುಕೊಂಡಿದೆ. ಇನ್ನಾವ ಖಾದ್ಯಕ್ಕೂ ಇದರ ಸ್ಥಾನವನ್ನು ತುಂಬಲು ಸಾಧ್ಯವಾಗಿಲ್ಲ. ಹೀಗೆ ಅದು ತನ್ನದೇ ಆದ 'ಬ್ರ್ಯಾಂಡ್ ಇಮೇಜ್' ಹೊಂದಿದೆ, ಪೇಟೆಂಟ್ ಕಾಯ್ದಿಟ್ಟುಕೊಂಡಿದೆ ಅಂದರೂ ತಪ್ಪಲ್ಲ. ತಂಬುಳಿಯ ರುಚಿಯನ್ನು ಬಲ್ಲವರೇ ಬಲ್ಲರು, ಒಮ್ಮೆ ರುಚಿ ಕಂಡವರು ಇದರ ಬೆನ್ನು ಹತ್ತುವುದರಲ್ಲಿ ಸಂಶಯವೇ ಇಲ್ಲ. ಉತ್ಸಾಹಿಯೊಬ್ಬರು ಇಂಥ ಮಹತ್ವದ ಊಟದ ಪದಾರ್ಥದ ಹೆಸರಿನಲ್ಲೇ ಹೋಟೇಲು ಪ್ರಾರಂಭಿಸಿದ್ದಾರೆ ಅಂದರೆ ಅದು ಯಶಸ್ಸು ಕಾಣುವುದರಲ್ಲಿ ಅನುಮಾನವೇ ಇಲ್ಲ. ತಂಬುಳಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾನ್ಯತೆ ಸಿಕ್ಕರೂ ಆಶ್ಚರ್ಯ ಪಡಬೇಕಾಗಿಲ್ಲ!

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : **VISHWESHWAR BHAT**, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 165

ಸಮಾಚಾರ ಸಣ್ಣದಲ್ಲ

2 ಗಂಟೆಗೆ 21 ಕಿ.ಮೀ ಓಡಿದ ಸಿಎಂ ಒಮರ್

ಶ್ರೀನಗರ: ಕಾಶ್ಮೀರದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಮ್ಯಾರಥಾನ್‌ಗೆ ಚಾಲನೆ ನೀಡಿದ ಜಮ್ಮು-ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ(54), ಸ್ವತಃ 21 ಕಿಮೀ ಓಟ ಪೂರೈಸಿ ಅಚ್ಚರಿಗೆ ಕಾರಣವಾದರು. ಯಾವುದೇ ತರಬೇತಿ ಇಲ್ಲದೇ ಭಾಗವಹಿಸಿದ ಒಮರ್, ಹಾಫ್ ಮ್ಯಾರಥಾನ್ (21 ಕಿಮೀ) ದೂರವನ್ನು 2 ಗಂಟೆಗಳಲ್ಲಿ ಪೂರ್ಣಗೊಳಿಸಿದ್ದಾರೆ. ಬಾಲಿವುಡ್ ನಟ ಸುನೀಲ್ ಶೆಟ್ಟಿ ಚಾಲನೆ ವೇಳೆ ಹಾಜರಿದ್ದರು. ಮ್ಯಾರಥಾನ್‌ನಲ್ಲಿ 13 ದೇಶಗಳ 2,000ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದರು. ಇದು ಕಣಿವೆ ರಾಜ್ಯದಲ್ಲಿ ನಡೆದ ಮೊದಲ ಅಂತಾರಾಷ್ಟ್ರೀಯ ಮಟ್ಟದ ಅಥ್ಲೆಟಿಕ್ ಸ್ಪರ್ಧೆಯಾಗಿದೆ. ಈವರೆಗೆ 13 ಕಿ.ಮೀ.ಗೂ ಹೆಚ್ಚು ದೂರ ಓಡಿರಲಿಲ್ಲ. ಇಂದು ಓಡುವ ಆಲೋಚನೆಯೂ ಇರಲಿಲ್ಲ. ದೇಹದಲ್ಲಿ ಶಕ್ತಿಯೂ ಇರಲಿಲ್ಲ. ಓಟಕ್ಕೂ ಮುನ್ನ 1 ಬಾಳೆಹಣ್ಣು, ಒಂದೆರಡು ಖರ್ಜೂರ ತಿಂದಿದ್ದೆ. ಇಂದು ಓಟಗಾರರಿಂದ ಪ್ರೇರಿತನಾಗಿ ಈ ಸಾಧನೆ ಮಾಡಿದೆ ಎಂದು ಒಮರ್ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಬಿಷ್ಣೋಯ್ ಗ್ಯಾಂಗ್‌ಗೆ ಸಿದ್ದಿಕಿ ಪುತ್ರನ ಸವಾಲು!

ಮುಂಬೈ: ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನಿಂದ ಕೊಲೆಯಾದ ಎನ್‌ಸಿಪಿ(ಅಜಿತ್ ಬಣ) ನಾಯಕ ಬಾಬಾ ಸಿದ್ದಿಕಿ ಅವರ ಪುತ್ರ, ಶಾಸಕ ಝೀಶಾನ್ ಸಿದ್ದಿಕಿ, ತಂದೆಯ ಹಂತಕರಾದ ಬಿಷ್ಣೋಯ್ ಗ್ಯಾಂಗ್‌ಗೆ ಸವಾಲು ಹಾಕಿದ್ದಾರೆ. 'ಯುದ್ಧ ಮುಗಿದಿಲ್ಲ. ನ್ಯಾಯ ಸಿಗುವವರೆಗೂ ಸುಮ್ಮನಿರುವುದಿಲ್ಲ' ಎಂದು 'ಎಕ್ಸ್' ಸಂದೇಶದಲ್ಲಿ ಹೇಳಿದ್ದಾರೆ. ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ನನ್ನ ತಂದೆಯನ್ನು ಕೊಂದರು. ಆದರೆ ಹೋರಾಟ ನಾನು ಮುಂದುವರಿಸುತ್ತೇನೆ. ಹಂತಕರಿಗೆ ಸವಾಲು ಹಾಕುತ್ತೇನೆ ಎಂದು ಬರೆದಿದ್ದಾರೆ.

ಆಟೋ-ಬಸ್ ಅಪಘಾತ; 8 ಮಕ್ಕಳು ಸೇರಿ 12 ಸಾವು

ಜೈಪುರ: ರಾಜಸ್ಥಾನದ ಧೋಲ್‌ಪುರದಲ್ಲಿ ಆಟೋ ರಿಕ್ಷಾ ಮತ್ತು ಖಾಸಗಿ ಬಸ್ ನಡುವೆ ಮುಖಾಮುಖಿ ಡಿಕ್ಕಿಯಾಗಿದ್ದು, ಆಟೋದಲ್ಲಿದ್ದ 8 ಮಕ್ಕಳು ಸೇರಿದಂತೆ ಒಟ್ಟು 12 ಮಂದಿ ಸಾವನ್ನಪ್ಪಿದ್ದಾರೆ. ಕರೌಲಿ-ಧೋಲ್‌ಪುರ ರಾಷ್ಟ್ರೀಯ ಹೆದ್ದಾರಿ 11ಎಯಲ್ಲಿ ಬರುವ ಸುನಿಪುರ ಗ್ರಾಮದ ಬಳಿ ಶನಿವಾರ ರಾತ್ರಿ 11 ಗಂಟೆಯಲ್ಲಿ ಅಪಘಾತವಾಗಿದೆ. ಐವರು ಬಾಲಕರು, ಮೂವರು ಬಾಲಕಿಯರು, ಇಬ್ಬರು ಮಹಿಳೆಯರು, ಇಬ್ಬರು ಪುರುಷರು ಸಾವಿಗೀಡಾಗಿದ್ದಾರೆ. ಆಟೋದಲ್ಲಿ ಪ್ರಯಾಣಿಸುತ್ತಿದ್ದವರು ಬರಿ ನಗರದ ಗುಮತ್ ಮೊಹಲ್ಲಾ ನಿವಾಸಿಗಳು. ಬರೌಲಿ ಗ್ರಾಮದಲ್ಲಿ ವಿವಾಹವೊಂದರಲ್ಲಿ ಭಾಗವಹಿಸಿ ಮನೆಗೆ ವಾಪಸಾಗುತ್ತಿದ್ದಾಗ ಅಪಘಾತವಾಗಿದೆ.

ವಂಚನೆ-ವೈಎಸ್‌ಆರ್ ಪಕ್ಷ ಶಾಸಕಿ ವಿರುದ್ಧ ದೂರು

ಹೈದರಾಬಾದ್: ತಿರುಪತಿ ತಿರುಮಲ ದೇಗುಲದಲ್ಲಿ ವಿಐಪಿ ದರ್ಶನ ಕೊಡಿಸುವುದಾಗಿ ಹಣ ಪಡೆದು ವಂಚಿಸಿದ ಆರೋಪದಡಿ ವೈಎಸ್‌ಆರ್ ಕಾಂಗ್ರೆಸ್ ಎಂಎಲ್‌ಸಿ ಮಾಯನ ಜಾಕಿಯಾ ಖಾನಮ್ ಮತ್ತು ಇತರೆ ಇಬ್ಬರ ವಿರುದ್ಧ ಆಂಧ್ರಪ್ರದೇಶ ಪೊಲೀಸರು ವಂಚನೆ ಪ್ರಕರಣ ದಾಖಲಿಸಿದ್ದಾರೆ. ಟಿಟಿಡಿ ಪರವಾಗಿ ದೂರು ದಾಖಲಾಗಿದೆ. ಖಾನಂ, ಆಕೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಕೃಷ್ಣ ತೇಜ ಮತ್ತು ಮತ್ತೊಬ್ಬ ವ್ಯಕ್ತಿ ಪಿ.ಚಂದ್ರಶೇಖರ್ ವಿಐಪಿ ದರ್ಶನ ಮತ್ತು ವೇದ ಆಶೀರ್ವಾದಂ, ಧಾರ್ಮಿಕ ವಿಧಿಗಳನ್ನು ತಿಮ್ಮಪ್ಪನ ಸನ್ನಿಧಿಯಲ್ಲಿ ನೆರವೇರಿಸಿಕೊಡುವುದಾಗಿ ವ್ಯಕ್ತಿಯೊಬ್ಬರಿಂದ 65,000 ರು. ಪಡೆದು ವಂಚಿಸಿದ್ದಾರೆ ಎಂದು ದೂರಲಾಗಿದೆ. ತಿರುಮಲ ದೇವಸ್ಥಾನದಲ್ಲಿ ಶನಿವಾರ ವಿಐಪಿ ದರ್ಶನದ ಆಮಿಷವೊಡ್ಡಿ ಎನ್.ಸಾಯಿ ಕುಮಾರ್ ಎಂಬವರಿಂದ ಶ್ರೀವಾರಿ ದೇವ ಸ್ಥಾನದ ಬಳಿ ಇಬ್ಬರು ಆರೋಪಿಗಳು ಹಣ ಪಡೆದಿದ್ದಾರೆ ಎಂದು ಟಿಟಿಡಿಯ ವಿಜಿಲೆನ್ಸ್ ಅಧಿಕಾರಿ ದೂರಿದ್ದಾರೆ.

ಚುನಾವಣೆ ಬೆಟ್ಟಿಂಗ್; ಟ್ರಂಪ್ ಪರ ಒಲವು

ವಾಷಿಂಗ್ಟನ್: ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆ ಸಮೀಪಿಸುತ್ತಿದ್ದಂತೆ ಬೆಟ್ಟಿಂಗ್ ಮಾರುಕಟ್ಟೆಯಲ್ಲಿ ಭರಾಟೆ ಜೋರಾಗಿದೆ. ಮಾಜಿ ಅಧ್ಯಕ್ಷ, ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಪರವೇ ಹೆಚ್ಚಿನವರು ಹಣ ಹೂಡುತ್ತಿದ್ದಾರೆ ಎಂದು ವರದಿಯಾಗಿದೆ. ಕೆಲ ಸಮೀಕ್ಷೆಗಳು ಡೆಮಾಕ್ರಟಿಕ್ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ಮತ್ತು ಡೊನಾಲ್ಡ್ ಟ್ರಂಪ್ ನಡುವೆ ಬಿರುಸಿನ ಸ್ಪರ್ಧೆ ಇದೆ ಎಂದು ತೋರಿಸುತ್ತಿದ್ದರೂ, ಕ್ರಿಪ್ಟೋ ಆಧಾರಿತ ಪಾಲಿಮಾರ್ಕೆಟ್‌ನಲ್ಲಿ ಶೇ.60ರಷ್ಟು ಗೆಲ್ಲುವ ಅವಕಾಶದೊಂದಿಗೆ ಟ್ರಂಪ್ ಮುಂದೆ ಇದ್ದಾರೆ ಎಂದು ವರದಿ ಗಮನ ಸೆಳೆದಿದೆ. ನ.5ರಂದು ಚುನಾವಣೆ ನಡೆಯಲಿದೆ. ಮತ್ತೊಂದು ಸಮೀಕ್ಷೆ ಪ್ರಕಾರ ಕಮಲಾ ಹ್ಯಾರಿಸ್‌ರನ್ನು ಶೇ.48.4ರಷ್ಟು ಜನ ಬೆಂಬಲಿಸಿದ್ದರೆ, ಟ್ರಂಪ್ ಅವರನ್ನು ಶೇ.46.3ರಷ್ಟು ಮಂದಿ ಬೆಂಬಲಿಸಿದ್ದಾರೆ ಎನ್ನಲಾಗಿದೆ.

{ **ಸಂಜಯ್ ರಾವತ್** } ಶಿವಸೇನೆ(ಉ.ಬಣ) ಸಂಸದ

ಚುನಾವಣಾ ಆಯೋಗದ ನೆರವಿನಿಂದ ಬಿಜೆಪಿ ಮತದಾರರ ಪಟ್ಟಿ ತಿರುಚುತ್ತಿದೆ. ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭೆ ಚುನಾವಣೆ ಗೆಲ್ಲಲು ಆಡಳಿತಾರೂಢ ಬಿಜೆಪಿ ಕುಟಿಲ ತಂತ್ರ ಅನುಸರಿಸುತ್ತಿದೆ. ಎರಡೂ ರಾಜ್ಯಗಳ ಮತದಾರರ ಪಟ್ಟಿಯಲ್ಲಿ ಬಹಳ ವ್ಯತ್ಯಾಸ ಕಂಡುಬರುತ್ತಿದೆ. ಹರಿಯಾಣ ವಿಧಾನಸಭೆ ಚುನಾವಣೆಯಲ್ಲೂ ಮತದಾರರ ಪಟ್ಟಿ ತಿರುಚಲಾಗಿತ್ತು.

99 ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಣೆ | ಇನ್ನೂ 189 ಕ್ಷೇತ್ರಗಳ ಆಯ್ಕೆಗೆ ಚರ್ಚೆ | ಶಿಂದೆ, ಅಜಿತ್ ಪಕ್ಷಗಳ ಪ್ರಕಟಣೆ ಬಾಕಿ | ನಾಗಪುರ ನೈಋತ್ಯದಿಂದ ಫಡ್ನವೀಸ್

ಮಹಾ ಚುನಾವಣೆಗೆ ಬಿಜೆಪಿ ಪ್ರಥಮ ಪಟ್ಟಿ

ಮುಂಬೈ: ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಭಾನುವಾರ ಮಧ್ಯಾಹ್ನ ಹೊರಬಿದ್ದಿದ್ದು, 99 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ. ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ನಾಗಪುರ ಸೌತ್ ವೆಸ್ಟ್ ಕ್ಷೇತ್ರದ ಅಭ್ಯರ್ಥಿಯಾಗಲಿದ್ದಾರೆ.

ಮಹಾರಾಷ್ಟ್ರ ರಾಜ್ಯ ಬಿಜೆಪಿ ಘಟಕ ಅಧ್ಯಕ್ಷ ಚಂದ್ರಶೇಖರ್ ಬವಾನ್‌ಕುಲೆ ಕಾಮಠಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಸಚಿವರಾದ ಗಿರೀಶ್ ಮಹಾಜನ್ ಅವರಿಗೆ ಜಾಮ್ನರ್, ಸುಧೀರ್ ಮುಂಗಾಂತಿವಾರ್ ಅವರಿಗೆ ಬಲ್ಲಾಪುರ, ಶ್ರೀಜಯ ಅಶೋಕ್ ಚವಾಣ್ ಅವರಿಗೆ ಭೋಕರ್, ಆಶೀಶ್ ಶೆಲಾರ್ ಅವರಿಗೆ ವಾಂದ್ರೆ ವೆಸ್ಟ್, ಮಂಗಲ್ ಪ್ರಭಾತ್ ಲೋಢಾ ಅವರಿಗೆ ಮಲಬಾರ್ ಹಿಲ್, ರಾಹುಲ್ ನರ್ವೇಕರ್ ಅವರಿಗೆ ಕೊಲಾಬ, ಛತ್ರಪತಿ ಶಿವೇಂದ್ರ ರಾಜೇ ಭೋಸಲೆ ಅವರಿಗೆ ಸತಾರ, ಶ್ವೇತಾ ವಿದ್ಯಾಧರ್ ಮಹಾಲೆಗೆ ಚಿಖಲೀ, ಅನುರಾಧಾ ತಾಯ್ ಅತುಲ್ ಚವಾನ್ ಅವರಿಗೆ ಫುಲಂಬರಿ, ಮೇಘನಾ ಬೋರ್ಡಿಕರ್‌ಗೆ ಜಿಂತೂರ್ ಮತ್ತು ಶ್ರೀವಿಜಯಾ ಅಶೋಕ್ ಚವಾಣ್ ಅವರಿಗೆ ಬೋಕರ್ ಕ್ಷೇತ್ರದ ಟಿಕೆಟ್ ಸಿಕ್ಕಿದೆ.

ಸಹಮತ ಸಮಸ್ಯೆ: 288 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದ್ದರೂ ಸದ್ಯ ಬಿಜೆಪಿ ಮೊದಲ ಪಟ್ಟಿಯಲ್ಲಿ ಕೇವಲ 99 ಕ್ಷೇತ್ರಗಳಿಗಷ್ಟೇ ಅಭ್ಯರ್ಥಿಗಳನ್ನು ಆಖೈರುಗೊಳಿಸಿದೆ. ಇದು 'ಮಹಾಯುತಿ'ಯ ಮಿತ್ರಪಕ್ಷಗಳಾದ ಶಿವಸೇನೆ(ಶಿಂದೆ ಬಣ) ಮತ್ತು ಎನ್‌ಸಿಪಿ(ಅಜಿತ್ ಬಣ) ಜತೆ ಕ್ಷೇತ್ರ ಹಂಚಿಕೆ ವಿಚಾರದಲ್ಲಿ ಸಹಮತ ಸಾಧ್ಯವಾಗಿಲ್ಲ ಎಂಬುದನ್ನು ಎತ್ತಿ ತೋರಿಸುತ್ತಿದೆ ಎಂದೇ ಮಹಾರಾಷ್ಟ್ರ ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗಿದೆ.

288 ಕ್ಷೇತ್ರಗಳ ಪೈಕಿ 99 ಕ್ಷೇತ್ರಗಳಿಗಷ್ಟೇ ಮಹಾಯುತಿಯ ಅಭ್ಯರ್ಥಿಗಳ ಹೆಸರು ಭಾನುವಾರ ಘೋಷಣೆಯಾಗಿದ್ದು, ಇನ್ನೂ 189 ಕ್ಷೇತ್ರಗಳಿಗೆ ಹೆಸರು ಅಂತಿಮಗೊಳ್ಳಬೇಕಿದೆ. ಶಿವಸೇನೆಗೆ(ಶಿಂದೆ ಬಣ) ಮತ್ತು ಎನ್‌ಸಿಪಿಗೆ(ಅಜಿತ್ ಬಣ) ಎಷ್ಟು ಕ್ಷೇತ್ರಗಳನ್ನು ಬಿಟ್ಟುಕೊಡಲಾಗಿದೆ ಎಂಬುದು ಇನ್ನಷ್ಟೇ ತಿಳಿಯಬೇಕಿದೆ.



ಆರ್‌ಎಸ್‌ಎಸ್ ಕಾರ್ಯತಂತ್ರ!

ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಇನ್ನೇನು ಸೋಲು ಕಂಡಿತು ಎಂದುಕೊಳ್ಳುತ್ತಿರುವಾಗಲೇ ಕಮಲ ಪಕ್ಷ ಗೆಲುವಿನ ನಗೆ ಬೀರಿತು. ಅದಕ್ಕೆ ಕಾರಣವಾಗಿದ್ದು, 'ರಾಷ್ಟ್ರೀಯ ಸ್ವಯಂಸೇವಕ ಸಂಘ'ದ(ಆರ್‌ಎಸ್‌ಎಸ್) ಕಾರ್ಯಕರ್ತರ ಪರಿಶ್ರಮ ಎಂಬ ಮಾತುಗಳಿವೆ. ಮಹಾರಾಷ್ಟ್ರ ಚುನಾವಣೆಯಲ್ಲೂ ಆರ್‌ಎಸ್‌ಎಸ್ ಅದೇ ಬಗೆಯಲ್ಲಿ ಹೊಸತಂತ್ರಗಳನ್ನು ಹೂಡಲಿದೆ ಎಂದು ಹೇಳಲಾಗಿದೆ.
ಈ ಮೊದಲು ಬಿಜೆಪಿ-ಸಂಘದ ಮಧ್ಯೆ ಅಂತರ ಉಂಟಾಗಿತ್ತು. ಪ್ರಧಾನಿ ಮೋದಿ ಅವರ ಕೆಲವು ಏಕಮುಖ ನಿರ್ಧಾರಗಳನ್ನು ಆರ್‌ಎಸ್‌ಎಸ್ ವಿರೋಧಿಸಿತ್ತು. ಈ ಬಿರುಕಿನ ಪರಿಣಾಮವೇನು ಎಂಬುದಕ್ಕೆ ಏಪ್ರಿಲ್‌ನಲ್ಲಿ ನಡೆದ ಲೋಕಸಭೆ ಚುನಾವಣೆ ಸಾಕ್ಷಿಯಾಗಿದೆ.
ಬಳಿಕ ಪರಿಸ್ಥಿತಿ ತಿಳಿಯಾಗಿದೆ. ಬಿಜೆಪಿ ಸೋಲಲಿದ್ದ ಹರಿಯಾಣದಲ್ಲಿ ಸಮೀಕ್ಷೆಗಳನ್ನೇ ತಲೆಕೆಳಗಾಗಿಸಿ ಗೆಲುವನ್ನು ಕಮಲ ಪಕ್ಷ ದಕ್ಕಿಸಿಕೊಂಡಿದೆ. ಅದಕ್ಕೆ ಕಾರಣವಾಗಿದ್ದೇ ಆರ್‌ಎಸ್‌ಎಸ್ ತಂತ್ರ ಎನ್ನಲಾಗಿದೆ. ಇದೀಗ ಮಹಾರಾಷ್ಟ್ರದಲ್ಲಿಯೂ ಮಹಾಯುತಿ ಮೈತ್ರಿಕೂಟದ ಪರವಾಗಿ ಸಾರ್ವಜನಿಕ ಅಭಿಪ್ರಾಯ ರೂಪಿಸಲು ಆರ್‌ಎಸ್‌ಎಸ್ ಮುಂದಾಗಿದೆ. ಅದಾಗಲೇ ಪ್ರಚಾರ ಕಾರ್ಯವನ್ನು ಬೇರುಮಟ್ಟದಲ್ಲಿ ಆರಂಭಿಸಿದೆ. 10 ಜನರ ಸಣ್ಣ ಗುಂಪುಗಳನ್ನಾಗಿ ಮಾಡಿಕೊಂಡು ಸ್ಥಳೀಯರ ಮೂಲಕ ಮತದಾರರನ್ನು ನೇರವಾಗಿ ತಲುಪುತ್ತಿದೆ ಎಂದು ಹೇಳಲಾಗುತ್ತಿದೆ.

150 ಕ್ಷೇತ್ರಗಳಿಗೆ ಬಿಜೆಪಿ ಆಸಕ್ತಿ

ಆಡಳಿತ ನಡೆಸುತ್ತಿರುವ ಮೂರೂ ರಾಜಕೀಯ ಪಕ್ಷಗಳು ಈ ಚುನಾವಣೆಯನ್ನು 'ಮಹಾಯುತಿ ಮೈತ್ರಿಕೂಟ'ದ ಹೆಸರಲ್ಲೇ ಒಟ್ಟಾಗಿ ಎದುರಿಸಲು ನಿರ್ಧರಿಸಿವೆ. 288 ಕ್ಷೇತ್ರಗಳ ಪೈಕಿ 150 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲು ಬಿಜೆಪಿ ಇಚ್ಛಿಸುತ್ತಿದೆ. ಆದರೆ, ಶಿವಸೇನೆ(ಶಿಂದೆ ಬಣ) ಮತ್ತು ಎನ್‌ಸಿಪಿ(ಅಜಿತ್ ಬಣ) ಕೂಡಾ ಹೆಚ್ಚಿನ ಕ್ಷೇತ್ರಗಳಿಗೆ ಪಟ್ಟು ಹಿಡಿದಿವೆ. ಪರಿಣಾಮ, ಅಭ್ಯರ್ಥಿಗಳ ಪೂರ್ಣ ಪಟ್ಟಿ ಪ್ರಕಟವಾಗುವುದು ವಿಳಂಬವಾಗುತ್ತಿದೆ.
ಸದ್ಯ, 260 ಕ್ಷೇತ್ರಗಳಿಗೆ ಮಹಾಯುತಿ ಮೈತ್ರಿಕೂಟದ ಪಕ್ಷಗಳಲ್ಲಿ ಸಹಮತ ವ್ಯಕ್ತವಾಗಿದೆ. ಉಳಿದ 28 ಕ್ಷೇತ್ರಗಳ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ ಎಂದು ತಿಳಿದುಬಂದಿದೆ.ಕೆಲ ಮೂಲಗಳ ಪ್ರಕಾರ 260 ಕ್ಷೇತ್ರಗಳಲ್ಲಿ ಬಿಜೆಪಿಗೆ 142 ಕ್ಷೇತ್ರಗಳು ದೊರಕಿವೆ. ಶಿವಸೇನೆ(ಶಿಂದೆ ಬಣ)ಗೆ 66 ಮತ್ತು ಎನ್‌ಸಿಪಿ(ಅಜಿತ್ ಬಣ)ಕ್ಕೆ 52 ಕ್ಷೇತ್ರಗಳಲ್ಲಿ ಅವಕಾಶವಾಗಿವೆ. 28 ಕ್ಷೇತ್ರಗಳ ಹಂಚಿಕೆ ಬಾಕಿಯಾಗಿದೆ ಎನ್ನಲಾಗಿದೆ.

ಮಹಾಯುತಿ ಪಟ್ಟಿ ವಿಳಂಬ!

288 ಸದಸ್ಯ ಬಲದ ಮಹಾರಾಷ್ಟ್ರ ವಿಧಾನಸಭೆಗೆ ನ.20ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ. ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಆಯ್ಕೆ, ಮಿತ್ರಪಕ್ಷಗಳ ಜತೆ ಕ್ಷೇತ್ರ ಹೊಂದಾಣಿಕೆ, ಅಭ್ಯರ್ಥಿ ಪಟ್ಟಿ ಪ್ರಕಟಣೆ ಪ್ರಕ್ರಿಯೆಯಲ್ಲಿ ಪೂರ್ಣ ಮಗ್ನವಾಗಿವೆ. ಕಾಂಗ್ರೆಸ್, ಎನ್‌ಸಿಪಿ(ಶರದ್ ಬಣ) ಮತ್ತು ಶಿವಸೇನೆ (ಉದ್ಧವ್ ಬಣ) ಅದಾಗಲೇ ಒಟ್ಟು 270ಕ್ಕೂ ಅಧಿಕ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪ್ರಕಟಿಸಿವೆ. ಆದರೆ, ಆಡಳಿತಾರೂಢ ಪಕ್ಷವಾದ ಬಿಜೆಪಿ ಮತ್ತು ಶಿವಸೇನೆ(ಶಿಂದೆ ಬಣ) ಹಾಗೂ ಎನ್‌ಸಿಪಿ(ಅಜಿತ್ ಬಣ) ಪಟ್ಟಿ ಪ್ರಕಟಣೆ ವಿಳಂಬವಾಗಿದೆ.

ಮಹಾರಾಷ್ಟ್ರ ಚುನಾವಣೆ ಘಟ್ಟ	
ಅಧಿಸೂಚನೆ ಪ್ರಕಟ	ಅ.22
ನಾಮಪತ್ರಕ್ಕೆ ಕಡೆದಿನ	ಅ.29
ನಾಮಪತ್ರ ಪರಿಶೀಲನೆ	ಅ.30
ನಾಮಪತ್ರ ವಾಪಸ್	ನ.4
ಮತದಾನ ಒಂದೇ ಹಂತ	ನ.20
ಮತ ಎಣಿಕೆ-ಫಲಿತಾಂಶ	ನ.23

'ಜನಮತ ಪೋಲ್ಸ್' ಸಮೀಕ್ಷೆ	
ಮಹಾರಾಷ್ಟ್ರ ಒಟ್ಟು ಸ್ಥಾನ	288
ಸರಕಾರ ರಚನೆಗೆ ಸದಸ್ಯರು	145
ಎನ್‌ಡಿಎ ಮೈತ್ರಿಕೂಟ	129-133
ಬಿಜೆಪಿ ಗಳಿಕೆ	82-84
'ಇಂಡಿಯ' ಒಕ್ಕೂಟ	138-142
ಕಾಂಗ್ರೆಸ್ ಸಾಧನೆ	52-54
ಇತರೆ ಪಕ್ಷಗಳು	16-18
ಸಮೀಕ್ಷಾ ವರದಿ; ಅತಂತ್ರ ವಿಧಾನಸಭೆ	

ಹೆಚ್ಚು ಮಕ್ಕಳ ಹೊಂದುವಂತೆ ಯುವಜನತೆಗೆ ಸಲಹೆ

ಆಂಧ್ರದಲ್ಲಿ ವೃದ್ಧರೇ ಅಧಿಕ: ನಾಯ್ಡು ಆತಂಕ

ಅಮರಾವತಿ: ದಕ್ಷಿಣ ಭಾರತದಲ್ಲಿ ವೃದ್ಧರ ಸಂಖ್ಯೆ ಹೆಚ್ಚಿದೆ. ಜನಸಂಖ್ಯಾ ಸಮತೋಲನ ದೃಷ್ಟಿಯಿಂದ ಈ ತಲೆಮಾರಿನ ಯುವಜನರು ಹೆಚ್ಚು ಮಕ್ಕಳನ್ನು ಹೊಂದಬೇಕಿದೆ ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಸಲಹೆ ನೀಡಿದ್ದಾರೆ.

ರಾಜ್ಯ ಸರಕಾರದ ಕಾರ್ಯಕ್ರಮವೊಂದರಲ್ಲಿ ಶನಿವಾರ ಮಾತನಾಡಿದ ಅವರು, ಜನಸಂಖ್ಯಾ ನಿರ್ವಹಣೆಗೆ ರಾಜ್ಯ ಸರಕಾರ ಯೋಜನೆ ರೂಪಿಸುತ್ತಿದೆ. ಅದರಡಿ ಹೆಚ್ಚು ಮಕ್ಕಳನ್ನು ಹೊಂದುವ ಕುಟುಂಬಗಳಿಗೆ ಪ್ರೋತ್ಸಾಹಧನ ನೀಡುವ ಮಸೂದೆ ತರಲು ರಾಜ್ಯ ಸರಕಾರ ಚಿಂತನೆ ನಡೆಸುದೆ. ಅಷ್ಟೇ ಅಲ್ಲ, ಎರಡಕ್ಕಿಂತ ಹೆಚ್ಚು ಮಕ್ಕಳಿರುವವರಿಗಷ್ಟೇ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸಲು ಅರ್ಹತೆ ಎಂದು ನಿಯಮ ರೂಪಿಸುವ ಬಗೆಗೂ ಚಿಂತನೆ ನಡೆದಿದೆ ಎಂದು ಹೇಳಿದ್ದಾರೆ.



ಹೆಚ್ಚು ಮಕ್ಕಳನ್ನು ಹೊಂದಿರುವವರು ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂಬ ಕಾನೂನನ್ನು ಈ ಹಿಂದೆ ಮಾಡಿದ್ದೆವು. ಆದರೆ ಈಗ ಆ ಕಾನೂನು ರದ್ದುಪಡಿಸಿದ್ದೇವೆ. ಬದಲಾಗಿ ಹೆಚ್ಚು ಮಕ್ಕಳನ್ನು ಹೊಂದುವ ಈ ತಲೆಮಾರಿನ ಕುಟುಂಬಗಳಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಲು ಆಲೋಚಿಸುತ್ತಿದ್ದೇವೆ. 2047ರ ವೇಳೆಗೆ ವಯೋಮಾನ ಜನಸಂಖ್ಯೆಯಲ್ಲಿ ಸಮತೋಲನ ಸಾಧಿಸಬೇಕಿದೆ ಎಂದು ನಾಯ್ಡು ಹೇಳಿದರು.

ದಕ್ಷಿಣ ಭಾರತದ ಯುವಜನರು ನೌಕರಿ, ವ್ಯಾಸಂಗಕ್ಕೆಂದು ವಿದೇಶಗಳಿಗೆ ತೆರಳುತ್ತಿದ್ದಾರೆ. ಉತ್ತರ ಭಾರತದ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಈ ಕಾರಣಗಳಿಂದಾಗಿ ದಕ್ಷಿಣ ಭಾರತದ ರಾಜ್ಯಗಳಲ್ಲಿ, ಅದರಲ್ಲೂ ಆಂಧ್ರದಲ್ಲಿ ಯುವಜನರ ಸಂಖ್ಯೆ ತಗ್ಗಿ, ವೃದ್ಧರ ಸಂಖ್ಯೆಯೇ ಹೆಚ್ಚಿದೆ. ಇದು ಆತಂಕಕಾರಿ ವಿಷಯ. ಜಪಾನ್, ಚೀನಾ ಸಹಿತ ಯುರೋಪಿಯನ್ ದೇಶಗಳೂ ಇದೇ ಸಮಸ್ಯೆಯಿಂದ ಪರಿತಪಿಸುತ್ತಿವೆ ಎಂದು ಮುಖ್ಯಮಂತ್ರಿ ವಿವರಿಸಿದ್ದಾರೆ.

ಫಲವತ್ತತೆ ಕುಸಿತ

ದಕ್ಷಿಣದ ರಾಜ್ಯಗಳಲ್ಲಿ ಸಂತಾನಶಕ್ತಿಯ ಫಲವತ್ತತೆ ಕುಸಿಯುತ್ತಿದೆ. ದಕ್ಷಿಣದಲ್ಲಿ ಫಲವತ್ತತೆ ದರ ಶೇ.1.6ರಷ್ಟಿದೆ. ಇದು ರಾಷ್ಟ್ರೀಯ ಪ್ರಮಾಣ ಶೇ.2.1ಕ್ಕಿಂತಲೂ ಬಹಳ ಕಡಿಮೆಯಿದೆ ಎಂದು ಕಳವಳ ವ್ಯಕ್ತಪಡಿಸಿರುವ ನಾಯ್ಡು, ಪರಿಸ್ಥಿತಿ ಹೀಗೇ ಮುಂದುವರಿದರೆ 2047ರ ವೇಳೆಗೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಗ್ರಾಮೀಣ ಭಾರತದಲ್ಲಿಯೂ ಎಲ್ಲೆಡೆ ವೃದ್ಧರೇ ಕಾಣಸುತ್ತಾರೆ ಎಂದಿದ್ದಾರೆ.

ಎರಡು ಕಿಮೀ.ವರೆಗೂ ಕೇಳಿಸಿದ ಸ್ಫೋಟದ ಸದ್ದು | 200 ಅಡಿಗಳಷ್ಟು ಆವರಿಸಿದ್ದ ದಟ್ಟ ಹೊಗೆ | ಯಾವುದೇ ಸಾವು-ನೋವು ವರದಿಯಾಗಿಲ್ಲ

ದೆಹಲಿ ಸಿಆರ್‌ಪಿಎಫ್ ಶಾಲೆ ಬಳಿ ಭಾರೀ ಸ್ಫೋಟ

ದೆಹಲಿ: ದೆಹಲಿಯ ರೋಹಿಣಿ ಸೆಕ್ಟರ್ 14 ಪ್ರದೇಶದಲ್ಲಿನ ಕೇಂದ್ರೀಯ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಶಾಲೆ ಸಮೀಪ ಭಾನುವಾರ ಬೆಳಗ್ಗೆ 7.50ರಲ್ಲಿ ನಿಗೂಢ ಸ್ಫೋಟವಾಗಿದ್ದು, ಬೆಂಕಿ ಹೊತ್ತಿಕೊಂಡಿದೆ. ಸ್ಫೋಟದ ಸದ್ದು 2 ಕಿಮೀಗಳಷ್ಟು ದೂರದವರೆಗೂ ಕೇಳಿಸಿದೆ. ಸುದೈವವಶಾತ್ ಘಟನೆಯಲ್ಲಿ ಯಾವುದೇ ಸಾವು-ನೋವು ಸಂಭವಿಸಿಲ್ಲ.

ಸ್ಫೋಟದ ತೀವ್ರತೆಗೆ ಶಾಲೆಯ ಗೋಡೆಗೆ ಹಾನಿಯಾಗಿದೆ. ಸಮೀಪದ ಅಂಗಡಿಯ ಗಾಜುಗಳು ಹಾಗೂ ಅಂಗಡಿ ಬಳಿ ನಿಲ್ಲಿಸಿದ್ದ ಕಾರಿನ ಗಾಜುಗಳು ಹಾನಿಗೊಳಗಾಗಿವೆ. ಮೋಟಾರ್ ಬೈಕ್ ಸವಾರನೊಬ್ಬ ಸ್ವಲ್ಪದರಲ್ಲೇ ಪಾರಾಗಿದ್ದಾನೆ. ಸ್ಫೋಟಕ್ಕೆ ಕೆಲವೇ ಸೆಕೆಂಡ್‌ಗಳ ಮುಂಚೆ ಬೈಕ್ ಸ್ಫೋಟ ನಡೆದ ಕಾಂಪೌಂಡ್ ಪಕ್ಕದಲ್ಲೇ ಹಾದು ಹೋಗಿದೆ.

ಎನ್‌ಐಎ-ಎನ್‌ಎಸ್‌ಜಿ ದೌಡು: ಸ್ಫೋಟದ ಸುದ್ದಿ ತಿಳಿದ ಬಳಿಕ ಸ್ಥಳೀಯ ಪೊಲೀಸರು, ಎನ್‌ಎಸ್‌ಜಿ ಮತ್ತು ಎನ್‌ಐಎ ತಂಡಗಳು, ಸ್ಥಳೀಯ ಆಡಳಿತದ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದ್ದಾರೆ. ವಿಧಿವಿಜ್ಞಾನ ತಂಡದವರೂ ಸ್ಥಳದಲ್ಲಿ ಸಾಕ್ಷ್ಯಗಳನ್ನು ಕಲೆಹಾಕುತ್ತಿದ್ದಾರೆ. ಬಾಂಬ್ ನಿಷ್ಕ್ರಿಯ ದಳದ ಮತ್ತೊಂದು ತಂಡ ಕೂಡ ಪರಿಶೀಲನೆ ನಡೆಸುತ್ತಿದೆ. ಎನ್‌ಎಸ್‌ಜಿ ತಂಡ ಸುತ್ತಲ ಪ್ರದೇಶವನ್ನು ರೊಬೊ ಮೂಲಕ ಸ್ಕ್ಯಾನ್ ಮಾಡುತ್ತಿದೆ. ಸ್ಫೋಟಕ್ಕೆ ಕಚ್ಚಾ ಬಾಂಬ್ ಬಳಸಲಾಗಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಪೊಲೀಸರು ಸ್ಥಳಕ್ಕೆ ತೆರಳಿದಾಗ ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿತ್ತು. ಅಗ್ನಿಶಾಮಕ ದಳದ 2 ವಾಹನಗಳು ಸ್ಥಳಕ್ಕೆ ಧಾವಿಸಿವೆ. ಪರಿಶೀಲನೆ ವೇಳೆ ಕಾಂಪೌಂಡ್ ಬಳಿ ಬಿಳಿಬಣ್ಣದ ಪುಡಿ ಪತ್ತೆಯಾಗಿದ್ದು, ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಿಕೊಡಲಾಗಿದೆ.

ಕೇಂದ್ರ ಗೃಹ ಸಚಿವಾಲಯ ದೆಹಲಿ ಪೊಲೀಸರಿಂದ ವಿವರವಾದ ವರದಿ ಕೋರಿದೆ.

ಸ್ಥಳೀಯರಲ್ಲಿ ಆತಂಕ

ಸ್ಫೋಟದಿಂದ ಸ್ಥಳೀಯರು ಆತಂಕಗೊಂಡಿದ್ದು, ಸಮಗ್ರ ತನಿಖೆಗೆ ಒತ್ತಾಯಿಸಿದ್ದಾರೆ. 'ಮನೆಯಲ್ಲಿ ಮಲಗಿದ್ದಾಗ ಭಾರೀ ಸ್ಫೋಟದ ಶಬ್ದ ಕೇಳಿಸಿತು. ಕಟ್ಟಡ ಕುಸಿದಿರಬಹುದು ಎಂದೇ ಭಾವಿಸಿದ್ದೆವು. ಹೊರ ಬಂದು ನೋಡಿದಾಗ ದಟ್ಟ ಹೊಗೆ ಆವರಿಸಿರುವುದು ಹಾಗೂ ದುರ್ವಾಸನೆ ಬರುತ್ತಿರುವುದು ತಿಳಿಯಿತು' ಎಂದು ಶಾಲೆ ಸಮೀಪದ ನಿವಾಸಿಯೊಬ್ಬರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ. ಹೊಗೆ ರಸ್ತೆಯಲ್ಲಿ 200 ಅಡಿಗಿಂತಲೂ ಹೆಚ್ಚು ದೂರದವರೆಗೂ ಆವರಿಸಿತ್ತು. ರಾಸಾಯನಿಕ ಬೆರೆತ ವಾಸನೆ ಬರುತ್ತಿತ್ತು ಎಂದು ನಿವಾಸಿ ರಾಕೇಶ್ ಗುಪ್ತಾ ಎಂಬವರು ಹೇಳಿದ್ದಾರೆ.

ವಯನಾಡು ಕ್ಷೇತ್ರ; ನವ್ಯಾ ಹರಿದಾಸ್ ಬಿಜೆಪಿ ಅಭ್ಯರ್ಥಿ

ದೆಹಲಿ: ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ರಾಜೀನಾಮೆಯಿಂದ ತೆರವಾಗಿರುವ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ನ.13ರಂದು ಉಪ ಚುನಾವಣೆ ನಡೆಯುತ್ತಿದ್ದು, ಕಾಂಗ್ರೆಸ್‌ನಿಂದ ಪ್ರಿಯಾಂಕಾ ಗಾಂಧಿ ವಾದ್ರಾ ಕಣಕ್ಕಿಳಿಯುತ್ತಿದ್ದಾರೆ. ಅವರ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ನವ್ಯಾ ಹರಿದಾಸ್ ಸ್ಪರ್ಧೆ ಮಾಡಲಿದ್ದಾರೆ. ಬಿಜೆಪಿ ಅಭ್ಯರ್ಥಿ ಪಟ್ಟಿ ಶನಿವಾರ ಸಂಜೆ ಪ್ರಕಟವಾಗಿದೆ. ಎಡಪಕ್ಷಗಳ ಒಕ್ಕೂಟ(ಎಲ್‌ಡಿಎಫ್) ಅಭ್ಯರ್ಥಿಯಾಗಿ ಸತ್ಯನ್ ಮೊಕೇರಿ ಸ್ಪರ್ಧೆ ಮಾಡುತ್ತಿದ್ದಾರೆ.

39 ವರ್ಷದ ನವ್ಯಾ ಹರಿದಾಸ್ ಬಿಜೆಪಿಯ ಮಹಿಳಾ ಮೋರ್ಚಾದ ಕೇರಳ ಘಟಕದ ಪ್ರಧಾನ ಕಾರ್ಯದರ್ಶಿ. ಕೋಯಿಕ್ಕೋಡ್ ನಗರಪಾಲಿಕೆಯಲ್ಲಿ 2 ಬಾರಿ ಕೌನ್ಸಿಲರ್ ಆಗಿದ್ದವರು. 2021ರಲ್ಲಿ ನಡೆದ ಕೇರಳ ವಿಧಾನಸಭೆ ಚುನಾವಣೆಯಲ್ಲಿ ಕೋಯಿಕ್ಕೋಡ್ ದಕ್ಷಿಣ ಕ್ಷೇತ್ರದಲ್ಲಿ ಸ್ಪರ್ಧಿಸಿ ಪರಾಜಿತರಾಗಿದ್ದಾರೆ.

ಕಲ್ಲಿಕೋಟೆ ವಿಶ್ವವಿದ್ಯಾಲಯ ವ್ಯಾಪ್ತಿಯ ಕೆಎಂಸಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಬಿಟೆಕ್ ಪದವಿ ಗಳಿಸಿದ್ದಾರೆ. 'ವಯನಾಡ್ ಕ್ಷೇತ್ರದ ಜನತೆ ಉತ್ತಮ ಸಂಸದರ ನಿರೀಕ್ಷೆಯಲ್ಲಿದ್ದಾರೆ. ತಮ್ಮ ಜತೆಗೇ ಇದ್ದು ಸ್ಪಂದಿಸುವ ಜನಪ್ರತಿನಿಧಿ ಅವರಿಗೆ ಬೇಕಿದ್ದಾರೆ. ಆದರೆ, ಕಾಂಗ್ರೆಸ್ ಪ್ರತಿನಿಧಿ ಜನರ ನಿರೀಕ್ಷೆಗಳನ್ನು ಹುಸಿ ಮಾಡಿದ್ದಾರೆ. 2 ಬಾರಿ ಪಾಲಿಕೆ ಕೌನ್ಸಿಲರ್ ಆಗಿ ಅನುಭವ ಪಡೆದಿರುವ ನಾನು ಜನರ ನಿರೀಕ್ಷೆಗಳಿಗೆ ಖಂಡಿತಾ ಸ್ಪಂದಿಸುವೆ ಎಂದು ನವ್ಯಾ ಹೇಳಿದ್ದಾರೆ.

ಯಮುನೆಯಲ್ಲಿ ಭರ್ತಿ ನೊರೆ | ಹೊಮ್ಮುತ್ತಿದೆ ವಿಷಗಾಳಿ

ವಿಷಮಯ ಗಾಳಿ ಬಳಿಕ ದೆಹಲಿಗೆ ಕಲುಷಿತ ಯಮುನೆಯ ಸಮಸ್ಯೆ

ದೆಹಲಿ: ಈವರೆಗೂ ಕಲುಷಿತ ಗಾಳಿಯಿಂದ ಪರಿತಪಿಸುತ್ತಿದ್ದ ರಾಷ್ಟ್ರದ ರಾಜಧಾನಿ ದೆಹಲಿಗೆ, ಪಕ್ಕದಲ್ಲೇ ಹರಿಯುವ ನದಿ ಯಮುನೆಯೂ ಅಪಾಯಕಾರಿಯಾಗಿ ಪರಿಣಮಿಸಿದೆ.

ಉತ್ತರ ಭಾರತದ ಪವಿತ್ರ ನದಿಗಳಲ್ಲೊಂದಾದ ಯಮುನಾ ನದಿ ದೆಹಲಿ ಬಳಿ ವಿಷಕಾರಿ ನೊರೆಯಿಂದ ಸಂಪೂರ್ಣ ಕಲುಷಿತವಾಗಿದೆ. ಅಷ್ಟೇ ಅಲ್ಲ, ಕಲುಷಿತ ಯಮುನಾ ನದಿಯಿಂದ ಅಪಾಯಕಾರಿಯಾದ ವಿಷಗಾಳಿಯೂ ಉತ್ಪತ್ತಿಯಾಗುತ್ತಿದ್ದು, ಸುತ್ತಲಿನ ವಾತಾವರಣಕ್ಕೆ ಸೇರಿಕೊಳ್ಳುತ್ತಿದೆ. ಯಮುನೆಯನ್ನು ತಕ್ಷಣ ಶುದ್ಧೀಕರಿಸದೇ ಇದ್ದರೆ ದೆಹಲಿಯ ಜನರಿಗಷ್ಟೇ ಅಲ್ಲ, ಸುತ್ತಮುತ್ತಲ ಪ್ರದೇಶದಲ್ಲಿನ ಎಲ್ಲಾ ಬಗೆಯ ಜೀವರಾಶಿಗೂ ಪ್ರಾಣಕಂಟಕವಾಗಲಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿನ ವಾಯುವಿನ ಗುಣಮಟ್ಟ ಹಾಳಾಗಲು, ಗಾಳಿ ವಿಷಮಯವಾಗಲು ಮಿತಿಮೀರಿದ ವಾಹನಗಳು, ಡೀಸೆಲ್ ವಾಹನಗಳಿಂದ ಹೊರಹೊಮ್ಮುವ ಹೊಗೆ ಕಾರವಾಗುತ್ತಿದೆ.

ಅದಕ್ಕಿಂತ ಮುಖ್ಯವಾಗಿ ನೆರೆಯ ಕೃಷಿ ಪ್ರಧಾನ ರಾಜ್ಯಗಳಾದ ಹರಿಯಾಣ, ಉತ್ತರ ಪ್ರದೇಶ, ಪಂಜಾಬ್‌ನ ಗ್ರಾಮಗಳಲ್ಲಿನ ಭತ್ತದ ಗದ್ದೆಗಳಲ್ಲಿ ಕಟಾವಿನ ಬಳಿಕ ಕೃಷಿ ತ್ಯಾಜ್ಯಕ್ಕೆ ಬೆಂಕಿ ಹಾಕುವುದರಿಂದ ಹೊರಹೊಮ್ಮು ದಟ್ಟ ಹೊಗೆ ದೆಹಲಿಯ ಆಗಸವನ್ನು ಆವರಿಸಿಕೊಂಡು ಆಮ್ಲಜನಕವೇ ಇಲ್ಲದಂತೆ ಮಾಡುತ್ತಿದೆ. ಯಮುನಾ ನದಿ ಕಲುಷಿತಗೊಳ್ಳಲು ದೆಹಲಿಯ ಸುತ್ತಮುತ್ತ ಇರುವ ಕಾರ್ಖಾನೆಗಳು ಕಾರಣವಾಗುತ್ತಿವೆ. ಕಾರ್ಖಾನೆ ದ್ರವತ್ಯಾಜ್ಯದಿಂದ, ಅದರಲ್ಲೂ ಟೆಕ್ಸ್‌ಟೈಲ್, ಉಡುಪು ತಯಾರಿಕಾ ಘಟಕಗಳಿಂದ ಹೊರಬೀಳುವ ಸೋಪಿನ ನೊರೆ ನದಿಯನ್ನು ಸೇರಿಕೊಂಡು ನೀರನ್ನು ವಿಷಮಯವಾಗಿಸುತ್ತಿದೆ ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಉ.ಪ್ರದೇಶ ಬಿಜೆಪಿ ನಾಯಕನ ಪುತ್ರನೇ ವರ

ಪಾಕ್-ಭಾರತ ಆನ್‌ಲೈನ್ ನಿಖಾ

ಲಖನೌ: ಭಾರತ-ಪಾಕಿಸ್ತಾನ ನಡುವೆ ದ್ವೇಷಮಯ ವಾತಾವರಣವಿದ್ದರೂ ಮದುವೆ ಸಂಬಂಧ ಬೆಸೆಯುವುದಕ್ಕೆ ಯಾವುದೇ ಅಡ್ಡಿ ಇಲ್ಲವಾಗಿದೆ. ಭಾರತದ ವರ-ಪಾಕಿಸ್ತಾನದ ವಧು ಆನ್‌ಲೈನ್‌ನಲ್ಲೇ ನಿಖಾ ಮಾಡಿಕೊಂಡಿದ್ದಾರೆ. ಎರಡೂ ಕಡೆಯ ಕುಟುಂಬಗಳವರು, ಬಂಧು-ಮಿತ್ರರು ಅಪರೂಪದ ಈ ವಿವಾಹಕ್ಕೆ ಆನ್‌ಲೈನ್‌ನಲ್ಲೇ ಭಾಗಿಯಾಗಿ ಸಂಭ್ರಮಿಸಿದ್ದಾರೆ.

ಉತ್ತರ ಪ್ರದೇಶದ ಜೌನ್‌ಪುರ ಜಿಲ್ಲೆಯ ಬಿಜೆಪಿ ಕಾರ್ಪೊರೇಟರ್ ತಹಸೀನ್ ಶಾಹಿದ್ ಅವರ ಹಿರಿಯ ಪುತ್ರ ಮೊಹಮ್ಮದ್ ಅಬ್ಬಾಸ್ ಹೈದರ್ ಮತ್ತು ಲಾಹೋರ್ ನಿವಾಸಿ ಆಂಡ್ಲೀಪ್ ಜಹ್ರಾ ವಿವಾಹ ಇತ್ತೀಚೆಗೆ ವಾಟ್ಸಾಪ್ ವಿಡಿಯೊ ಕಾಲ್‌ನಲ್ಲೇ ನೆರವೇರಿದೆ. ಈ ವಿಚಾರವೀಗ ವ್ಯಾಪಕ ಚರ್ಚೆಗೂ ಕಾರಣವಾಗಿದೆ.

ಎರಡೂ ದೇಶಗಳ ನಡುವಿನ ರಾಜಕೀಯ ಬಿಕ್ಕಟ್ಟಿನ ಪರಿಣಾಮ ವೀಸಾ ಪಡೆಯಲು ಸಾಧ್ಯವಾಗಿಲ್ಲ. ಇನ್ನೊಂದೆಡೆ ವಧುವಿನ ತಾಯಿ ರಾಣಾ ಯಾಸ್ಮಿನ್ ಜೈದಿ ಅನಾರೋಗ್ಯಕ್ಕೆ ಒಳಗಾಗಿ ಆಸ್ಪತ್ರೆಗೆ ದಾಖಲಾಗಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುವಂತಾಗಿದೆ. ಪರಿಸ್ಥಿತಿಯ ಅನಿವಾರ್ಯತೆಯಿಂದ ನಿಖಾವನ್ನು ಆನ್‌ಲೈನ್‌ನಲ್ಲೇ ನಡೆಸಲಾಗಿದೆ. ಲಾಹೋರ್‌ನಲ್ಲಿನ ವಧುವಿನ ಮನೆಯಲ್ಲೇ ಶಿಯಾ ಧಾರ್ಮಿಕ ಮುಖಂಡ ಮೌಲಾನಾ ಮಹ್ಫೂಜುಲ್ ಹಸನ್ ಖಾನ್ ಅವರು ವಧು-ವರನ ಒಪ್ಪಿಗೆ ಪಡೆದು ನಿಕಾ ನೆರವೇರಿಸಿಕೊಟ್ಟರು. ವರನ ಮನೆಯಲ್ಲಿ ನಡೆದ ಮದುವೆ ಸಮಾರಂಭದಲ್ಲಿ ಬಿಜೆಪಿ ಎಂಎಲ್‌ಸಿ ಬ್ರಿಜೇಶ್ ಸಿಂಗ್ ಪ್ರಿಶು ಮತ್ತಿತರ ಗಣ್ಯರು ಭಾಗವಹಿಸಿ ವಧು-ವರನನ್ನು ಹಾರೈಸಿದರು.



ಪತ್ನಿ ಜಹ್ರಾಗೆ ಭಾರತೀಯ ವೀಸಾ ಯಾವುದೇ ತೊಂದರೆ ಇಲ್ಲದೇ ಸಿಗಲಿದೆ ಎಂಬ ವಿಶ್ವಾಸವನ್ನು ವರ ಹೈದರ್ ವ್ಯಕ್ತಪಡಿಸಿದ್ದಾರೆ.

ಜಾರ್ಖಂಡಲ್ಲಿ ಏಕಾಂಗಿ ಸ್ಪರ್ಧೆ: ಆರ್‌ಜೆಡಿ ಪ್ರಕಟ

ರಾಂಚಿ: ಜಾರ್ಖಂಡ್ ವಿಧಾನಸಭಾ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧೆ ಮಾಡುವುದಾಗಿ 'ಇಂಡಿಯ' ಒಕ್ಕೂಟದ ಪಾಲುದಾರ ಪಕ್ಷವಾದ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಭಾನುವಾರ ಪ್ರಕಟಿಸಿದೆ. ಪರಿಣಾಮ 'ಇಂಡಿ' ಒಕ್ಕೂಟದಲ್ಲಿ ಮತ್ತೊಮ್ಮೆ ಅಸಮಾಧಾನ ಕಾಣಿಸಿಕೊಂಡಿದೆ.

ಜಾರ್ಖಂಡ್‌ನ 81 ಕ್ಷೇತ್ರಗಳಲ್ಲಿ 70 ಕಡೆ ಜೆಎಂಎಂ ಮತ್ತು ಕಾಂಗ್ರೆಸ್ ಪಕ್ಷ ಸ್ಪರ್ಧೆ ಮಾಡಲಿದ್ದು, ಕೈಬೆರಳೆಣಿಕೆಯಷ್ಟು ಕ್ಷೇತ್ರಗಳನ್ನಷ್ಟೇ ಆರ್‌ಜೆಡಿಗೆ ಬಿಟ್ಟುಕೊಡಲು ಮುಂದಾಗಿರುವುದಕ್ಕೆ ಪಕ್ಷದ ಮುಖ್ಯಸ್ಥ ಲಾಲೂ ಪ್ರಸಾದ್ ಯಾದವ್ ಮತ್ತು ಪುತ್ರ, ಮಾಜಿ ಡಿಸಿಎಂ ತೇಜಸ್ವಿ ಯಾದವ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹಾಗಾಗಿ ಆರ್‌ಜೆಡಿ ಜಾರ್ಖಂಡ್ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲಿದೆ ಎಂದು ಪಕ್ಷದ ಹಿರಿಯ ಮುಖಂಡ ಮನೋಜ್ ಝಾ ಭಾನುವಾರ ಘೋಷಿಸಿದ್ದಾರೆ.

ಕಾಂಗ್ರೆಸ್ ಮತ್ತು ಜೆಎಂಎಂ 81 ಕ್ಷೇತ್ರಗಳಲ್ಲಿ ಸಿಂಹಪಾಲು ಇಟ್ಟುಕೊಂಡು, ಕೇವಲ 6 ಕ್ಷೇತ್ರಗಳನ್ನು ಆರ್‌ಜೆಡಿಗೆ ಬಿಟ್ಟುಕೊಟ್ಟಿವೆ. ಆದರೆ ತೇಜಸ್ವಿ ಯಾದವ್ ಇದನ್ನು ಒಪ್ಪಿಲ್ಲ. ಕನಿಷ್ಠ 12-13 ಕ್ಷೇತ್ರಗಳನ್ನಾದರೂ ಬಿಟ್ಟುಕೊಡಬೇಕು. ಇಲ್ಲವಾದರೆ ಏಕಾಂಗಿ ಸ್ಪರ್ಧೆ ಖಚಿತ ಎಂದು ಮನೋಜ್ ಝಾ ಹೇಳಿದ್ದಾರೆ. ಆರ್‌ಜೆಡಿಗೆ ಕೇವಲ 6 ಸ್ಥಾನ ಮತ್ತು 5 ಕ್ಷೇತ್ರಗಳನ್ನು ಎಡಪಕ್ಷಕ್ಕೆ ಹಂಚಲು ಜೆಎಂಎಂ ಮತ್ತು ಕಾಂಗ್ರೆಸ್ ನಿರ್ಧರಿಸಿವೆ.

ಕಂಚಿ ಶ್ರೀಗಳ ವಿಶಿಷ್ಟ ವ್ಯಾಖ್ಯಾನ

ಎನ್‌ಡಿಎ ಎಂದರೆ ನರೇಂದ್ರ ದಾಮೋದರದಾಸ್ ಅನುಶಾಸನ್

ವಾರಾಣಸಿ: ಕೇಂದ್ರದಲ್ಲಿ 3ನೇ ಬಾರಿ ಸರಕಾರ ರಚಿಸಿ ಹ್ಯಾಟ್ರಿಕ್ ಸಾಧಿಸಿರುವ 'ಎನ್‌ಡಿಎ' ಮೈತ್ರಿಕೂಟವನ್ನು ಬಹಳವಾಗಿ ಶ್ಲಾಘಿಸಿರುವ ಶ್ರೀ ಕಂಚಿಕಾಮಕೋಟಿ ಪೀಠದ ಶಂಕರಾಚಾರ್ಯ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿ, ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ಪ್ರಶಂಸೆಯ ಮಳೆಗರೆದರು.

ಉತ್ತರ ಪ್ರದೇಶದ ವಾರಾಣಸಿ ನಗರದಲ್ಲಿ ಖಾಸಗಿ ನೇತ್ರಚಿಕಿತ್ಸಾಲಯದ ಪ್ರಾರಂಭೋತ್ಸವದಲ್ಲಿ ಭಾಗವಹಿಸಿದ್ದ ಕಂಚಿ ಶ್ರೀಗಳು, 'ಎನ್‌ಡಿಎ' ಎಂದರೆ ನ್ಯಾಷನಲಿಸ್ಟ್ ಡೆಮಾಕ್ರೆಟಿಕ್ ಅಲಯನ್ಸ್ ಎಂದೇ ಇರಬಹುದು. ಆದರೆ, ನನ್ನ ಪ್ರಕಾರ ಅದು 'ನರೇಂದ್ರ ದಾಮೋದರದಾಸ್ ಕಾ ಅನುಶಾಸನ್' ಎಂದರ್ಥ ಎಂದು ಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಿದರು. ದೇವರು ನರೇಂದ್ರ ಮೋದಿಯನ್ನೂ ಅವರ ಸರಕಾರವನ್ನೂ ಬಹಳವಾಗಿ ಆಶೀರ್ವದಿಸಿದ್ದಾನೆ. ಹಾಗಾಗಿಯೇ ಮರಳಿ ಅವರದೇ ಸರಕಾರ ಬರುವಂತಾಗಿದೆ. ಮೋದಿ ಸಾಮಾನ್ಯ ಜನರ ಕಷ್ಟಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಬದ್ಧತೆಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಶ್ರೀಗಳು ಪ್ರಶಂಸಿಸಿದ್ದಾರೆ.

ಇದೇ ಕಾರಣದಿಂದಾಗಿ ಎನ್‌ಡಿಎ ಸರಕಾರ ಇಡೀ ವಿಶ್ವಕ್ಕೇ ಮಾದರಿಯಾಗಿದೆ. ಬೇರೆ ದೇಶಗಳೂ ಕೂಡ ಮೋದಿ ಅವರ ಆಡಳಿತ ಮಾದರಿಯನ್ನು ಮೆಚ್ಚಿಕೊಂಡಿವೆ. ಭಾರತದ ಪ್ರಗತಿ ಅದ್ವಿತೀಯವಾಗಿದೆ. ವಿಶ್ವದಲ್ಲಿ ಶಾಂತಿ ಸ್ಥಾಪನೆಗೆ ಕಾರಣವಾಗಲಿದೆ. ಜಗತ್ತಿನ ಅಭಿವೃದ್ಧಿಗೂ ಕೊಡುಗೆ ನೀಡಲಿದೆ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ಬಾಂಗ್ಲಾ ನುಸುಳುಕೋರ ಗಡಿಪಾರು: ಸಿಎಂ ಶರ್ಮಾ

ಅಸ್ಸಾಂ: ಭಾರತದ ಗಡಿಯಲ್ಲಿ ನುಸುಳಿಕೊಂಡು ಬಂದು ದೇಶದ ವಿವಿಧೆಡೆ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾದೇಶದ ಪ್ರಜೆಗಳ ಸಂಖ್ಯೆ ಹೆಚ್ಚುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಅಸ್ಸಾಂ ಸರಕಾರ ಕಠಿಣ ಕ್ರಮ ಕೈಗೊಳ್ಳುತ್ತಿದೆ. ಕರೀಮ್‌ಗಂಜ್ ಜಿಲ್ಲೆಯಲ್ಲಿ ಒಬ್ಬ ಬಾಂಗ್ಲಾದೇಶಿ ಪ್ರಜೆಯನ್ನು ಬಂಧಿಸಿ ಭಾನುವಾರ ವಾಪಸ್ ಬಾಂಗ್ಲಾಗೇ ಕಳುಹಿಸಿಕೊಡಲಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

ಬಾಂಗ್ಲಾ ಪ್ರಜೆ ಮೊಹಿಬುಲ್ಲಾನನ್ನು ಅಂತಾರಾಷ್ಟ್ರೀಯ ಗಡಿ ಬಳಿ ಬಂಧಿಸಿ ವಾಪಸ್ ಕಳುಹಿಸಲಾಗಿದೆ. ಅಸ್ಸಾಂನ ಕರೀಮ್ ಗಂಜ್, ಕ್ಯಾಚರ್, ಧುಬ್ರಿ ಮತ್ತು ದಕ್ಷಿಣ ಸಲ್ಮಾರಾ-ಮಂಕಚಾರ್ ಜಿಲ್ಲೆಗಳು ಬಾಂಗ್ಲಾದೇಶದೊಂದಿಗೆ 267.5 ಕಿಮೀ ಅಂತರದ ಅಂತಾರಾಷ್ಟ್ರೀಯ ಗಡಿಯನ್ನು ಹಂಚಿಕೊಂಡಿವೆ. ಅಸ್ಸಾಂ ಪೊಲೀಸರು ಮತ್ತು ಗಡಿ ಭದ್ರತಾ ಪಡೆ ಯೋಧರು ಗಡಿ ಯುದ್ದಕ್ಕೂ ಒಳನುಸುಳು ವಿಕೆಯ ಪ್ರಯತ್ನಗಳನ್ನು ವಿಫಲಗೊಳಿಸುತ್ತಿವೆ ಎಂದು ಶರ್ಮಾ ಹೇಳಿದ್ದಾರೆ.

ದಾಳಿಗೆ ಭಾರೀ ಬೆಲೆ ತೆರುವಿರಿ; ಹೆಜ್ಬೊಲ್ಲಾಗೆ ಇಸ್ರೇಲ್ ಎಚ್ಚರಿಕೆ

ಜೆರುಸಲೇಂ: ಇಸ್ರೇಲ್‌ನ ಕರಾವಳಿ ಭಾಗದಲ್ಲಿನ ತಮ್ಮ ಖಾಸಗಿ ನಿವಾಸದ ಮೇಲೆ ಲೆಬನಾನ್‌ನ ಉಗ್ರ ಸಂಘಟನೆ 'ಹೆಜ್ಬೊಲ್ಲಾ' ಡ್ರೋನ್‌ಗಳ ಮೂಲಕ ದಾಳಿ ನಡೆಸಿರುವುದಕ್ಕೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅಕ್ಷರಶಃ ಕುದ್ದು ಹೋಗಿದ್ದಾರೆ.

'ನನ್ನನ್ನು ಮತ್ತು ನನ್ನ ಪತ್ನಿಯನ್ನು ಹತ್ಯೆ ಮಾಡಲೆಂದು ನನ್ನ ಮನೆ ಮೇಲೆಯೇ ಡ್ರೋಣ್‌ಗಳಿಂದ ದಾಳಿ ನಡೆಸುವ ಮೂಲಕ ಹೆಜ್ಬೊಲ್ಲಾ ದೊಡ್ಡ ಪ್ರಮಾದವೆಸಗಿದೆ. ಅದಕ್ಕೆ ಭಾರೀ ಬೆಲೆ ತೆರಲೇಬೇಕಾಗುತ್ತದೆ' ಎಂದು ನೆತನ್ಯಾಹು ಗುಡುಗಿದ್ದಾರೆ.

ಹೆಜ್ಬೊಲ್ಲಾ ಉಗ್ರ ಸಂಘಟನೆ ಇರಾನ್‌ನ ಪ್ರಾಕ್ಸಿ ಆಗಿದೆ ಎಂದು ಛೇಡಿಸಿರುವ ನೆತನ್ಯಾಹು, ಈ ಡ್ರೋನ್ ದಾಳಿ, ಹತ್ಯೆಯ ಯತ್ನ ನನ್ನನ್ನಾಗಲೀ, ಇಸ್ರೇಲ್ ಸೇನೆಯನ್ನಾಗಲೀ ಯುದ್ಧ ಮುಂದುವರೆಸುವುದರಿಂದ ತಡೆಯಲು ಸಾಧ್ಯವೇ ಇಲ್ಲ ಎಂದಿದ್ದಾರೆ.

73 ಸಾವು: ಇನ್ನೊಂದೆಡೆ ಉತ್ತರ ಗಾಜಾ ಪಟ್ಟಿಯಲ್ಲಿರುವ ಬೀಟ್ ಲಾಹಿಯಾ ಪಟ್ಟಣದ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿದ್ದು, 73 ಪ್ಯಾಲೆಸ್ತೀನ್ ಪ್ರಜೆಗಳು ಸಾವಿಗೀಡಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ಬಹುಮಹಡಿ ಕಟ್ಟಡ ಗುರಿಯಾಗಿಸಿ ಕ್ಷಿಪಣಿ ದಾಳಿ ನಡೆಸಲಾಗಿದೆ. ಸಮೀಪದ ಹಲವು ಮನೆಗಳಿಗೂ ಹಾನಿಯಾಗಿದೆ ಎಂದು ಹಮಾಸ್ ಮಾಧ್ಯಮ ವರದಿ ಮಾಡಿದೆ.

ಸಮಾಚಾರ ಸಣ್ಣದಲ್ಲ

ಗಾಂಜಾ ಸಾಗಣೆ: ಆರೋಪಿಗಳಿಗೆ ಜೈಲು

ಚಿಕ್ಕಮಗಳೂರು: ಗಾಂಜಾ ಸಾಗಣೆ ಪ್ರಕರಣದಲ್ಲಿ ಮೂವರಿಗೆ ಶೃಂಗೇರಿ ನ್ಯಾಯಾಲಯವು ಮೂರು ತಿಂಗಳ ಜೈಲು ಶಿಕ್ಷೆ ಮತ್ತು ತಲಾ 3000 ದಂಡ ವಿಧಿಸಿದೆ. ಕೊಪ್ಪ ತಾಲೂಕು ಸಿಗೋಡುವಾಸಿ ಶಫನ್, ಮಂಗಳೂರು ಕೋಟೆಕಾರ್ ಸ್ಟ್ರೀಟ್ ನ ಅರ್ಫಾನ್ ಮತ್ತು ಮೊಹಮ್ಮದ್ ಇಬ್ಬಾಲ್ ಆರೋಪಿತರು. 11.4.2023 ರಂದು ಚಿಕ್ಕಮಗಳೂರು ಜಿಲ್ಲೆಯ ಗಡಿ ಭಾಗ ಶೃಂಗೇರಿ ತಾಲೂಕಿನ ಬೇಗಾರು ಗ್ರಾಮದಲ್ಲಿ ಅಬಕಾರಿ ನಿರೀಕ್ಷಕ ಲೋಕೇಶ್ ನೇತೃತ್ವದ ತಂಡ ಮಾರುತಿ ಸುಜುಕಿ ರಿಡ್ಸ್ (ಕೆಎ 03 ಎಂ ಡಿ 27 31) ಕಾರನ್ನು ತಡೆದು ಶೋಧಿಸಿದಾಗ 40 ಗ್ರಾಂ ಗಾಂಜಾ ಪತ್ತೆಯಾಗಿದ್ದು ಪ್ರಕರಣ ದಾಖಲಿಸಿದ್ದರು. ಕೊಪ್ಪ ತಾಲೂಕು ಅಬಕಾರಿ ನಿರೀಕ್ಷಕರಾದ ಬಿ ಎಸ್ ಪೃಥ್ವಿ, ತನಿಖೆ ನಡೆಸಿ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿದರು. ಇಲಾಖಾ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕರಾದ ಅರುಣಾಕ್ಷಿ ವಾದ ಮಂಡಿಸಿದ್ದರು.

ಪದಾಧಿಕಾರಿಗಳ ಪದಗ್ರಹಣ ಇಂದು

ಕೊಪ್ಪಳ: ನಗರದ ರೇಣುಕಾಚಾರ್ಯ ಕಲ್ಯಾಣ ಮಂಟಪದಲ್ಲಿ ಅ.21ರಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲೆ ಹಾಗೂ ತಾಲೂಕು

ಘಟಕಗಳ ಪದಾಧಿಕಾರಿಗಳ ಪದ ಗ್ರಹಣ ಸಮಾರಂಭ ನಡೆಯ ಲಿದೆ. ಸಮಾಜದ ಜನರು ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಮಹಾಸಭಾ ನೂತನ ಜಿಲಾ ಧ್ಯಕ್ಷ ಕಳಕನಗೌಡ ಪೊಲೀಸ್ ಪಾಟೀಲ್ ಹೇಳಿದರು. ನಗರದ ಮೀಡಿಯಾ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತ ನಾಡಿ, ಬೆಳಗ್ಗೆ 11ಕ್ಕೆ ನಡೆಯುವ ಪದಗ್ರಹಣ ಕಾರ್ಯ ಕ್ರಮದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ ಸೇರಿ ರಾಜ್ಯ ಮಟ್ಟದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ಜಿಲ್ಲೆ ಯ ಎಲ್ಲ ತಾಲೂಕುಗಳ ಪದಾಧಿಕಾರಿಗಳು ಕಾರ್ಯ ಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಮುದಾಯದ 500 ಕ್ಕೂ ಹೆಚ್ಚು ಜನ ಪಾಲ್ಗೊ ಳ್ಳುವ ಸಾಧ್ಯತೆ . ಪದಗ್ರಹಣ ಕಾರ್ಯಕ್ರಮದ ಬಳಿಕ ಸಮುದಾಯದಲ್ಲಿ ಆಗಬೇಕಿ ರುವ ಬೆಳವಣಿಗೆ, ಅಭಿವೃದ್ಧಿ ವಿಚಾರಗಳು , ರೂಪು ರೇಷೆಗಳ ಬಗ್ಗೆ ಚರ್ಚಿಸಲಾಗುವುದು. ದೇಸಾಯಿಗೌಡ ಪಾಟೀಲ್, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಉಮೇಶ ಕೆ.ಎತ್ತಿನಮನಿ, ಶಿವಪುತ್ರಪ್ಪ ಕಾಡನವರ್ ಇದ್ದರು.

ನಾರದಗಡ್ಡೆ ಮಠದ ಆಸ್ತಿ ಉಳಿಸಿ

ರಾಯಚೂರು: ಜಿಲ್ಲೆಯ ಮಾನ್ವಿ ತಾಲೂಕಿನ ನಾರದಗಡ್ಡೆಯ ಮಠದ ಆಸ್ತಿಯನ್ನು ಸುಳ್ಳು ದಾಖಲೆ ಸೃಷ್ಟಿಸಿ ಭೂ ಕಬಳಿಕೆ ಮಾಡಿಕೊಂಡಿದ್ದು ನ್ಯಾಯ ಒದಗಿಸಲು ಭಕ್ತರು ಒತ್ತಾಯಿಸಿದ್ದಾರೆ. ಅವರು ಜಿಲ್ಲಾಧಿಕಾರಿಗೆ ಈ ಬಗ್ಗೆ ದೂರು ಸಲ್ಲಿಸಿದ ಮಠದ ಭಕ್ತರು ತಾಲೂಕಿನ ಕಲ್ಲೂರಿನಲ್ಲಿರುವ ನಾರದಗಡ್ಡೆಗೆ ಸೇರಿದ ಸರ್ವೆ ನಂ 94, 94 ಹಾಗೂ 110ರಲ್ಲಿರುವ ಒಟ್ಟು 42 ಎಕರೆ ಭೂಮಿ ಕರಿಬಸ್ಸಯ್ಯಸ್ವಾಮಿ ನಾರದಗಡ್ಡೆ ಮಠ ಅವರ ಹೆಸರಿಗೆ ಪಟ್ಟಾ ಇತ್ತು. ಸ್ವಾತಂತ್ರ ಪೂರ್ವದಲ್ಲಿಯೇ ಲಿಂಗೈಕ್ಯರಾಗಿದ್ದರು. ಶ್ರೀಚನ್ನಬಸವ ರಾಜೇಂದ್ರ ಸ್ವಾಮೀಜಿ ಉರ್ಫ್ ಕರಿಬಸವಯ್ಯಸ್ವಾಮಿ ಉರುವಕುಂಡಾ ಬೆಂಗಳೂರು ಎಂಬುವವರ ಹೆಸರಿಗೆ ಜಿಪಿಎ ಮಾಡಲಾಗಿದೆ. ಈ ಸಂದರ್ಭದಲ್ಲಿ ರವಿಗೌಡ ಮೀರಾಪೂರು, ಪ್ರಕಾಶ, ಮಹೇಶ ನಾಯಕ, ರಮೇಶ ಇತರರಿದ್ದರು.

ಸರಕಾರಿ ಭೂಮಿ ಒತ್ತುವರಿ ತೆರವು ಮಾಡಿ

ರಾಯಚೂರು: ಸರಕಾರಿ ಭೂಮಿ ಒತ್ತುವರಿ ತಡೆಯಲು ಗ್ರಾಮ ಲೆಕ್ಕಾಧಿಕಾರಿಗಳು ಮನಸು ಮಾಡಿದರೆ ಮಾತ್ರ, ಸರ್ಕಾರಿ ಭೂಮಿ ರಕ್ಷಣೆ ಮಾಡಬಹುದಾಗಿದೆ ಎಂದು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ.ಎ.ಪಾಟೀಲ್ ಅವರು ಹೇಳಿದರು. ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳು ಬೆಂಗಳೂರು, ಕಂದಾಯ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲಾಡಳಿತ ರಾಯಚೂರು ಇವರ ಸಹಯೋಗದೊಂದಿಗೆ ಕರ್ನಾಟಕ ಭೂಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾಯಿದೆಗಳ ಬಗ್ಗೆ ಒಂದು ದಿನದ ಕಾರ್ಯಾಗಾರಕ್ಕೆ ಚಾಲನೆ ನೀಡಿದರು. ಕಂದಾಯ ಇಲಾಖೆಯು ಎಲ್ಲಾ ಇಲಾಖೆಗಳ ಮಾತೃ ಇಲಾಖೆಯಾಗಿದ್ದು, ಇಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಅದರಲ್ಲಿ ಗ್ರಾಮ ಸ್ಥಳೀಯ ಪೊಲೀಸರ ಪಾತ್ರ ಮಹತ್ವದಾಗಿದ್ದು, ಅವರು ಮನಸ್ಸು ಮಾಡಿದರೆ ಮಾತ್ರ ಸರಕಾರದ ಭೂಮಿ ರಕ್ಷಣೆ ಮಾಡಬಹುದಾಗಿದೆ ಎಂದು ಹೇಳಿದರು.

{ನಿಖಿಲ್ ಕುಮಾರಸ್ವಾಮಿ} ಯುವ ಘಟಕದ ಅಧ್ಯಕ್ಷ
ಎನ್‌ಡಿಎ ಅಭ್ಯರ್ಥಿಯನ್ನು ಎಲ್ಲರೂ ಬೆಂಬಲಿಸಿ ಜೆಡಿಎಸ್ ರಾಜ್ಯ, ಚನ್ನಪಟ್ಟಣದಲ್ಲಿ ಎನ್‌ಡಿಎ ಮೈತ್ರಿ ಕೂಟದ ವರಿಷ್ಠರ ತೀರ್ಮಾನದಂತೆ ಅಭ್ಯರ್ಥಿಯ ಆಯ್ಕೆಯಾಗಲಿದ್ದು, ಅದಕ್ಕೆ ನಮ್ಮ ಬೆಂಬಲವಿದೆ.

ಕೊಪ್ಪಳದ ಹಮಾಲರ ಕಾಲನಿಯಲ್ಲಿನ ಹಾಸ್ಟೆಲ್ | ಬಾಲಕಿಯರ ಕಾಲೇಜು ವಸತಿ ನಿಲಯದ ವಿದ್ಯಾರ್ಥಿನಿಯರಿಂದ ಹೋರಾಟ

ಮೂಲ ಸೌಲಭ್ಯಕ್ಕೆ ಆಗ್ರಹಿಸಿ ಪ್ರತಿಭಟನೆ

ಕೊಪ್ಪಳ: ನಗರದ ಹಮಾಲರ ಕಾಲನಿಯಲ್ಲಿನ ಪರಿಶಿಷ್ಟ ವರ್ಗದ ಹಾಸ್ಟೆಲ್ ವಿಭಾಗಿಸಿ ಮತ್ತೊಂದು ನಿಲಯ ತೆರೆಯುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿದ್ಯಾರ್ಥಿನಿಯರು ಭಾನುವಾರ ಪ್ರತಿಭಟಿಸಿದರು.

ಎಸ್‌ಎಫ್‌ಐ ನೇತೃತ್ವದಲ್ಲಿ ಹಾಸ್ಟೆಲ್ ಹೊರಗೆ ಪ್ರತಿಭಟಿಸಿದ ವಿದ್ಯಾರ್ಥಿನಿಯರು ನಿಲಯ ಪಾಲಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹಾಸ್ಟೆಲ್ ನ ರೂಂ ನಿಂದ ಹೊರ ಬಂದು, ಧರಣಿ ನಡೆಸಿ, ಸರಕಾರದ ವಿರುದ್ಧ ಘೋಷಣೆ ಕೂಗಿದರು. ಪ್ರತಿಭಟನೆ ಕೈ ಬಿಡುವಂತೆ ವಾರ್ಡನ್ ಗೀತಾ ಅವರು ಮಾಡಿದ ಮನವಿಗೆ ಪ್ರತಿಭಟನಾನಿರತ ವಿದ್ಯಾರ್ಥಿನಿಯರು ಸೊಪ್ಪು ಹಾಕಲಿಲ್ಲ. ಬದಲಾಗಿ ಸರಕಾರ ಮತ್ತು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬದಲಾಗಿ ಇಲಾಖೆ ಉನ್ನತ ಮಟ್ಟದ ಅಧಿಕಾರಿಗಳು ಸ್ಥಳಕ್ಕೆ ಬರುವಂತೆ ಪಟ್ಟು ಹಿಡಿದರು.

ಈ ಹಿನ್ನೆಲೆ ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ವ್ಯವಸ್ಥಾಪಕಿ ಮಂಜುಳಾ ಅವರು ಸ್ಥಳಕ್ಕೆ ಆಗಮಿಸಿ, ವಿದ್ಯಾರ್ಥಿನಿಯರ ಅಳಲು ಆಲಿಸಿದರು. ಅಧಿಕಾರಿ ಮುಂದೆ ನಿಲಯದಲ್ಲಿನ ಸಮಸ್ಯೆಗಳನ್ನು ಹೇಳಿಕೊಂಡರು. ಜಿಲ್ಲಾ ವ್ಯವಸ್ಥಾಪಕರ ಮುಂದೆಯೇ ಹಾಸ್ಟೆಲ್ ನಿಲಯ ಪಾಲರ ವಿರುದ್ಧ ಸಾಲು ಸಾಲು ದೂರು ಹೇಳಿಕೊಂಡರು. ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಪರಿಹರಿಸುವುದಾಗಿ ಭರವಸೆ ನೀಡಿದರು.

ಕೊಪ್ಪಳದ ಹಮಾಲರ ಕಾಲನಿಯಲ್ಲಿನ ಎಸ್ಟಿ ಹಾಸ್ಟೆಲ್ ಮುಂದೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿದ್ಯಾರ್ಥಿನಿಯರು ಭಾನುವಾರ ಪ್ರತಿಭಟಿಸಿದರು.

> ನಮ್ಮ ವಸತಿ ನಿಲಯಕ್ಕೆ ಕನಿಷ್ಠ ಭದ್ರತೆಯೂ ಇಲ್ಲ. ಹಾಸ್ಟೇಲ್ ಕಟ್ಟಡದ ಸುತ್ತಲೂ ಸುಸಜ್ಜಿತ ಕಾಂಪೌಡ್ ಇಲ್ಲ. ಸಿಸಿ ಕ್ಯಾಮೆರಾ, ಯುಪಿಎಸ್ ವ್ಯವಸ್ಥೆ ಇಲ್ಲ. ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಒ ಸೇರಿ ಅನೇಕರಿಗೆ ಮಾಹಿತಿ ನೀಡಿದ್ದೇವೆ. ಪ್ರತಿಯೊಬ್ಬರು ಕೂಡಾ ಹಾರಿಕೆಯ ಉತ್ತರ ನೀಡುತ್ತಾರೆ.
> -ಪೂಜಾ, ವಿದ್ಯಾರ್ಥಿನಿ

ಕೊಪ್ಪಳದ ಎಸ್ಟಿ ಹಾಸ್ಟೇಲ್ ಕಟ್ಟಡ ಕೇವಲ 150 ವಿದ್ಯಾರ್ಥಿನಿಯರು ಸಾಮರ್ಥ್ಯ ಹೊಂದಿದೆ. ಆದರೆ, ಸದ್ಯ 350 ವಿದ್ಯಾರ್ಥಿನಿಯರಿದ್ದು, ರೂಂನಲ್ಲಿ ಕುರಿಗಳಂತೆ ತುಂಬಿದ್ದಾರೆ. ಈಗ ತೀರಾ ಅಸಹನೀಯ ಸ್ಥಿತಿ ಎದುರಾಗಿದೆ. ಈ ಹಿನ್ನೆಲೆ ಹೆಚ್ಚುವರಿಯಾಗಿ ದುಪ್ಪಟ್ಟು ಪ್ರವೇಶ ನೀಡಿರುವ ಸರಕಾರ ಕೂಡಲೇ ಅರ್ಧದಷ್ಟು ವಿದ್ಯಾರ್ಥಿನಿಯರನ್ನು ಮತ್ತೊಂದು ಕಟ್ಟಡಕ್ಕೆ ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿದರು.

ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಗ್ಯಾನೇಶ ಕಡಗದ ಮಾತನಾಡಿ, ಸರಕಾರ ನೀಡುವ ಸೌಲಭ್ಯಗಳನ್ನು ವಿದ್ಯಾರ್ಥಿನಿಯರಿಗೆ ಸಲುಪಿಸುತ್ತಿಲ್ಲ. ಪ್ರತಿ ತಿಂಗಳು, ಮೈ ಸೋಪು, ಬಟ್ಟೆ ಸೋಪು, ಬ್ರಷ್,ಟೂತ್ ಪೇಸ್ಟ್, ಕೊಬ್ಬರಿ ಎಣ್ಣೆ ಸೇರಿದಂತೆ ಅನೇಕ ವಸ್ತುಗಳ ಕಿಟ್ ನೀಡಿಲ್ಲ. ಎರಡು ತಿಂಗಳಿನಿಂದ ಮೊಟ್ಟೆ, ಬಾಳೆಹಣ್ಣು ಸರಿಯಾಗಿ ಕೊಡುತ್ತಿಲ್ಲ. ಇಲಾಖೆಯಿಂದ ಬರುವ ಅನುದಾನ ಬಳಕೆ ಮಾಡದೇ ಕಾರ್ಯಕ್ರಮಗಳ ಹೆಸರಲ್ಲಿ ವಿದ್ಯಾರ್ಥಿಗಳಿಂದ ಹಣ ಸಂಗ್ರಹಿಸುವ ಕೆಲಸವನ್ನು ವಾರ್ಡನ್ ಗೀತಾ ಮಾಡುತ್ತಿದ್ದಾರೆ. ಈ ಮೂಲಕ ಆ ಬಡ ಮಕ್ಕಳಿಂದ ಹಣ ವಸೂಲಿ ಕೆಲಸವಾಗುತ್ತಿದೆ ಸೌಲಭ್ಯ ಕೇಳುವ ವಿದ್ಯಾರ್ಥಿನಿಯರಿಗೆ ವಾರ್ಡನ್ ಬೆದರಿಕೆ ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ಸಹ ಕಾರ್ಯದರ್ಶಿ ಬಾಲಾಜಿ, ಮುಖಂಡರಾದ ಶರೀಫ್, ಅಮರಯ್ಯ, ಅಮರೇಶ ಲಿಂಗದಹಳ್ಳಿ, ಕೇಂದ್ರ ಸಮಿತಿ ಸದಸ್ಯ ಅಮರೇಶ ಕಡಗದ, ವಿದ್ಯಾರ್ಥಿನಿಯರಾದ ಪೂಜಾ, ಲಕ್ಷ್ಮೀ, ಸವಿತಾ, ದುರುಗಮ್ಮ, ಅಖಿಲಾ, ಮಹಾಲಕ್ಷ್ಮಿ, ದೇವಿ, ಸಂಗೀತ ಸೇರಿ ಇತರರು ಇದ್ದರು.

ಸರಕಾರಿ ದಾಖಲೆಗಾಗಿ ಸಾರ್ವಜನಿಕರ ಪರದಾಟ

ಸಿರವಾರ: ಪಟ್ಟಣದ ತಹಸೀಲ್ ಕಾರ್ಯಾಲಯದಲ್ಲಿ ಈ ಹಿಂದೆ ಅರ್ಜಿದಾರರು ಸಲ್ಲಿಸಿದ ದಾಖಲೆಗಳು ನೀಡಲು ಸರಿಯಾದ ದಾಖಲೆಗಳನ್ನು ಪಡೆಯುತ್ತಿದ್ದರು.

> ನಮ್ಮ ಅಕ್ಕನ ವಿಧವಾ ವೇತನಕ್ಕಾಗಿ ಸುಮಾರು 3ಬಾರಿ ಅರ್ಜಿ ಸಲ್ಲಿಸದರೂ ಪ್ರತಿ ಬಾರಿ ಮೂಲ ದಾಖಲೆಗಳನ್ನು ಲಗತ್ತಿಸಿಲ್ಲವೆಂದು ಹಿಂಬರಹ ನೀಡಿದ್ದಾರೆ, ಇಲ್ಲಿಗೆ ಸುಮಾರು 2ಸಾವಿರ ಖರ್ಚು ಮಾಡಿ ಅರ್ಜಿ ಸಲ್ಲಿಸದರೂ ಇದುವರೆಗೂ ಪ್ರಮಾಣ ಪತ್ರ ನೀಡಿಲ್ಲ, ತಹಸೀಲ್ದಾರರ ನಡೆ ಅಸಮಾಧಾನ ತಂದಿದೆ.
> -ಜೆ. ನಾಗರಾಜ, ಅರ್ಜಿದಾರ

ಕೆಲವು ದಿನಗಳ ಹಿಂದೆ ನೂತನವಾಗಿ ಆಗಮಿಸಿದ ದ್ವಿತಿಯ ದರ್ಜೆಯ ತಹಸೀಲ್ದಾರ್ ಭೀಮರಾಯ ಅವರು ಬಂದ ನಂತರದಲ್ಲಿ ವಿವಿಧ ಸರಕಾರಿ ಸೌಲಭ್ಯಗಳನ್ನು ಪಡೆಯಲು ಯೋಜನೆಗಳಿಗೆ ಅರ್ಜಿದಾರರು ಸುಮಾರು 3ರಿಂದ 4ಭಾರಿ ಅರ್ಜಿ ಸಲ್ಲಿಸಿದರೂ, ಅದರ ಅವಧಿ ಮೀರುವವರೆಗೂ ಸರಿಯಾದ ಸಮಯಕ್ಕೆ ವಿಲೇವಾರಿ ಮಾಡದೇ ಬಂದ ಎಲ್ಲಾ ಅರ್ಜಿಗಳನ್ನು ಮೇಲಿಂದ ಮೇಲೆ ತಿರಸ್ಕರಿಸಿ ಇಲ್ಲ-ಸಲ್ಲದ ನಿಯಮಗಳನ್ನು ಹಾಕುವುದು, ಉದಾ: ಅರ್ಜಿ ಸಲ್ಲಿಸುವಾಗ ಎಲ್ಲಾ ದಾಖಲೆಗಳನ್ನು ಅಪಲೋಡ್ ಮಾಡಿದರೂ ಮತ್ತು ಎಲ್ಲಾ ದಾಖಲೆಗಳನ್ನು ನೋಡಿ ಗ್ರಾಮ ಲೆಕ್ಕಾಧಿಕಾರಿ ಹಾಗೂ ಕಂದಾಯ ನೀರಿಕ್ಷಕರು ಪರಿಶೀಲನೆ ಮಾಡಿದ ನಂತರ ಅವುಗಳನ್ನು ಮುಂದಿನ ಕ್ರಮಕ್ಕೆ ರವಾನೆ ಮಾಡಿದ್ದರೂ ಅಂತಹ ಅರ್ಜಿಗಳನ್ನು ತಿರಸ್ಕರಿಸುತ್ತಾರೆ.

ಅರ್ಜಿ ಸಲ್ಲಿಸದ ನಂತರ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷರು ದಾಖಲೆಗಳನ್ನು ಪರಿಶೀಲಿಸಿ ಅರ್ಜಿ ವಿಲೇವಾರಿ ಮಾಡುತ್ತರೆ. ಸರಿಯಾದ ದಾಖಲೆಗಳು ಇಲ್ಲವಾದರೆ ಅರ್ಜಿಯನ್ನು ತಿರಸ್ಕರಿಸಬಹುದು ಅರ್ಜಿಯನ್ನು ದಿನಗಳ ಅಂತ್ಯದಲ್ಲಿ ಅರ್ಜಿಯನ್ನು ಸರಿಯಾದ ಕಾರಣಗಳಿಂದ ತಿರಸ್ಕರಿಸಬೇಕಾದ ತಹಸೀಲ್ದಾರರು ಮೊದಲು ನಾಮ ಫಲಕದಲ್ಲಿ ನಿಯಮಗಳನ್ನು ಲಗತ್ತಿಸಿ ನಂತರ ಮಾನದಂಡಗಳನ್ನು ವಿಧಿಸಿ ಅರ್ಜಿಯನ್ನು ತಿರಸ್ಕರಿಸಲಿ ಎಂದು ಅರ್ಜಿದಾರರ ಅನಿಸಿಕೆಯಾಗಿದೆ. ಈ ವಿಷಯದ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನ ಹರಿಸಿ ಸಿರವಾರ ತಹಸೀಲ್ ಕಾರ್ಯಾಲಯದಲ್ಲಿ ಸಾರ್ವಜನಿಕರಿಗೆ ವಿವಿಧ ಸೇವೆಗಳಿಗೆ ತೊಂದರೆ ಉಂಟಾಗುತ್ತಿರುವುದನ್ನು ಸರಿಪಡಿಸಲು ಮುಂದಾಗಬೇಕು. ಇದನ್ನು ನಿರ್ಲಕ್ಷ್ಯ ವಹಿಸಿದರೆ ಪಟ್ಟಣದ ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಸಾರ್ವಜನಿಕರೊಂದಿಗೆ ಪ್ರತಿಭಟನೆ ನಡೆಸುವುದು ತಪ್ಪಿದಲ್ಲ ಎಂಬುದನ್ನು ಅಧಿಕಾರಿಗಳು ಅರಿಯಬೇಕಿದೆ.

> ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜಾತಿ ಪ್ರಮಾಣ ಪತ್ರ ಒಬ್ಬ ವ್ಯಕ್ತಿಗೆ ಜೀವನ ಪರ್ಯಂತ ಅದೇ ಜಾತಿಯನ್ನು ಹೊಂದಿರುತ್ತಾನೆ, ಆದ್ದರಿಂದ ಪ್ರಮಾಣ ಪತ್ರ ನೀಡುವುದಯ ಜೀವನದಲ್ಲಿ ಒಂದು ಬಾರಿ ಅದನ್ನು ವ್ಯಕ್ತಿಯ ಮೂಲ ದಾಖಲೆಗಳನ್ನು ಸರಿಯಾಗಿ ಒದಗಿಸದ ಕಾರಣ ಇಂತಹ ಸಮಸ್ಯೆ ಉಂಟಾಗಿದೆ, ಇದನ್ನು ನಾಮ ಫಲಕದಲ್ಲಿ ಸೂಚಿಸಿ ಸುಲಭ ದಾಖಲೆಗಳು ಸಿಗುವಂತೆ ಮಾಡಲಾಗುವುದು.
> ಭೀಮರಾಯ, ಗ್ರೇಟ್-2 ತಹಸೀಲ್ದಾರರು

ಮಹಿಷಿ ವರದಿ ಯಥಾವತ್ ಜಾರಿ ಆಗಲಿ

ಕೊಪ್ಪಳದ ಪ್ರವಾಸಿ ಮಂದಿರದಲ್ಲಿ ಕರವೇ ನೂತನ ಕಾರ್ಯಕರ್ತರ ಸೇರ್ಪಡೆ ಹಾಗೂ ಪದಾಧಿಕಾರಿಗಳ ನೇಮಕ ಭಾನುವಾರ ನಡೆಯಿತು.

ಕೊಪ್ಪಳ: ರಾಜ್ಯ ಸರಕಾರ ಡಾ.ಸರೋಜಿನಿ ಮಹಿಷಿ ವರದಿ ಯಥಾವತ್ ಜಾರಿ ಮಾಡುವ ಮೂಲಕ ಕನ್ನಡಿಗರಿಗೆ ರಾಜ್ಯೋತ್ಸವದ ಕೊಡುಗೆ ನೀಡಬೇಕು ಎಂದು ಕರವೇ ಜಿಲ್ಲಾಧ್ಯಕ್ಷ ಬಿ.ಗಿರೀಶಾನಂದ ಒತ್ತಾಯಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ನೂತನ ಕಾರ್ಯಕರ್ತರ ಸೇರ್ಪಡೆ ಹಾಗೂ ಪದಾಧಿಕಾರಿಗಳ ನೇಮಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಭಾನುವಾರ ಮಾತನಾಡಿದರು.

ಕರ್ನಾಟಕದ ಎಲ್ಲ ಬಗೆಯ ಉದ್ಯೋಗದಲ್ಲಿ ಕನ್ನಡಿಗರಿಗೆ ಸಿಂಹಪಾಲು ಇರಬೇಕು ಎಂಬ ಒತ್ತಾಸಿಯಿಂದ ಕರವೇ ಸೆ.1 ರಂದು ರಾಜ್ಯಾದ್ಯಂತ ಹೋರಾಟ ನಡೆಸಿದೆ. ರಾಜ್ಯ ಸಚಿವ ಸಂಪುಟದಲ್ಲಿ ವರದಿ ಜಾರಿಗೊಳಿಸಲು ಸರಕಾರ ತಿರ್ಮಾನಿಸಿತ್ತು. ಆದರೆ, ರಾಜ್ಯ ಸರಕಾರ ಖಾಸಗಿ ಕಂಪನಿಗಳ ಒತ್ತಡಕ್ಕೆ ಮಣಿದು ಸದನದಲ್ಲಿ ಮಸೂದೆ ಮಂಡಿಸಲು ಹಿಂದೇಟು ಹಾಕಿದೆ. ಕರುನಾಡಿನಲ್ಲಿ ಕನ್ನಡಿಗರು ಉದ್ಯೋಗವಿಲ್ಲದೇ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ನೆಲದ ಮಕ್ಕಳಿಗೆ ಉದ್ಯೋಗ ದೊರಕಲು ಅವರ ಭವಿಷ್ಯ ಉಜ್ವಲವಾಗಲು ಮಹಿಷಿ ವರದಿ ಜಾರಿ ಆಗಬೇಕು ಎಂದು ಒತ್ತಾಯಿಸಿದರು.

ಕರವೇ ಹೋರಾಟ ಹಾಗೂ ತತ್ವ-ಸಿದ್ಧಾಂತ ಮೆಚ್ಚಿ ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ 30ಕ್ಕೂ ಹೆಚ್ಚು ಕಾರ್ಯಕರ್ತರು ಸಂಘಟನೆ ಸೇರ್ಪಡೆಗೊಂಡರು. ಕಾರ್ಯಕ್ರಮದಲ್ಲಿ ಕೊಪ್ಪಳ ನಗರ ಘಟಕದ ನೂತನ ಅಧ್ಯಕ್ಷರನ್ನಾಗಿ ಪ್ರಫುಲ್ ಕುಮಾರ ಪಾಟೀಲ್ ಅವರನ್ನು ನೇಮಕ ಮಾಡಲಾಯಿತು. ಜಿಲ್ಲಾ ಯುವ ಘಟಕ ಅಧ್ಯಕ್ಷ ಹನುಮಂತ ಬೆಸ್ತರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿಂಗಪ್ಪ ಮೂಗಿನ್, ಪ್ರಶಾಂತಗೌಡ ಪಾಟೀಲ, ಕಿರಣ ಕುಂಬಾರ, ಪ್ರಕಾಶ ಗೊಡಕೇರ, ಶಿವು ಹಿರೇಮಠ, ಕಲ್ಮೇಶ ಹೊಸೂರು, ಆನಂದ ಪಾಟೀಲ್, ನಾಗರಾಜ ಆಡೂರು, ವೆಂಕರೆಡ್ಡಿ ಪೋ.ಪಾಟೀಲ, ರಾಜಾ ಹಡಪದ, ಪ್ರಕಾಶ ಬಸರಿಗಿಡದ, ವಿಶ್ವ ಹಿರೇಮಠ, ವಿರೇಶ ಪಾಟೀಲ, ಸಂಗಮೇಶ ಕೊಪ್ಪಳ, ಹುಲ್ಲೇಶ ಕಟ್ಟಿಮನಿ ಹಾಗೂ ಅನೇಕರು ಇದ್ದರು.

'ಸೋಲೊಪ್ಪಿದ ಶ್ರೀಮಂತ' ನಾಟಕ ಪ್ರದರ್ಶನ

ರಾಯಚೂರು: ಗ್ರಾಮೀಣ ಭಾಗದ ಸಾಂಸ್ಕೃತಿಕ ಕಲೆಗಳನ್ನು ಮುಂದಿನ ಪೀಳಿಗೆಗೆ ಜೀವಂತವಾಗಿಡಲು ಕಲಾ ಸಂಸ್ಥೆಗಳ ಪ್ರಯತ್ನ ನಿರಂತರವಾಗಿರಲಿ ಎಂದು ವಿವಿ ಸಿಂಡಿಕೇಟ್ ಸದಸ್ಯ ಚನ್ನಬಸವ ನಾಯಕ ಹೇಳಿದರು.

> ಕಲೆಗಳು ಆಧುನಿಕ ಯುಗದಲ್ಲಿ ಮೊಬೈಲ್, ಟಿವಿ ಹಾವಳಿಯಿಂದ ನಶಿಸಿ ಹೋಗುತ್ತಿರುವ ಕಾಲದಲ್ಲಿ ನಾಟಕಗಳನ್ನು ಪ್ರದರ್ಶನ ಮಾಡುತ್ತಿದ್ದಾರೆ. ಇಂತಹ ಕಾರ್ಯಕ್ರಮಗಳಿಗೆ ಜನರ ಸಹಕಾರ ಮತ್ತು ಬೆಂಬಲ ಸಿಕ್ಕರೆ ಯಶಸ್ವಿಯಾಗಲು ಸಾಧ್ಯ.
> -ನಾಗೇಂದ್ರಪ್ಪ ಮಟಮಾರಿ, ಕಾಂಗ್ರೆಸ್ ಮುಖಂಡ

ನಗರದ ಪಂ.ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಬಿಚ್ಚಾಲಿಯ ಸಪ್ತಗಿರಿ ಸಾಂಸ್ಕೃತಿಕ ಕಲಾ ಬಳಗದಿಂದ ಹಮ್ಮಿಕೊಂಡಿದ್ದ ಎ.ಟಿ ಪಾಟೀಲ್ ರಚಿತ ಸೋಲೊಪ್ಪಿದ ಶ್ರೀಮಂತ ನಾಟಕ ಉದ್ಘಾಟಿಸಿ ಮಾತನಾಡಿದರು.

ಕಲಾ ಸಂಸ್ಥೆಗಳು ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಮಾಡಬೇಕು ಹಾಗೂ ಕಲಾವಿದರಿಗೆ ತನು ಮನ ಧನದಿಂದ ಪ್ರೋತ್ಸಾಹಿಸಿದಾಗ ಮಾತ್ರ ಕಲೆ ಉಳಿಯಲು ಸಾಧ್ಯ ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಉಪಾಧ್ಯಕ್ಷ ಶಿವಪ್ಪ ನಾಯಕ್, ಮುಖಂಡ ನಾಗೇಂದ್ರಪ್ಪ ಮಟಮಾರಿ ಮಾತನಾಡಿ, ಹಳ್ಳಿಗಳಿಂದ ಬಂದು ನಾಟಕ ಪ್ರದರ್ಶನ ಮಾಡುತ್ತಿರುವುದು ಶ್ಲಾಘನೀಯ ದೇವಣ್ಣ ಮಾಸ್ತರ ಬಿಚ್ಚಾಲಿಯವರು ಶ್ರಮಜೀವಿ ಕಲಾ ಸಾಧಕರು.

ಬೂದದಿನ್ನಿಯ ಶ್ರೀ ಸದ್ಗುರು ರಾಮರಾವ್ ತಾತಾ ಅಧ್ಯಕ್ಷತೆ ವಹಿಸಿದ್ದರು. ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ ತಳಮರಿ, ಉಪಾಧ್ಯಕ್ಷ ಬಶೀರುದ್ದೀನ್, ಜಾಫ್ರಾಲಿ ಪಟೇಲ್, ವೆಂಕಟೇಶ ಕವಿ, ಶರಣಬಸವ ಜಾನೇಕಲ್, ದೇವಣ್ಣ ಮಾಸ್ಟರ್ ಬಿಚ್ಚಾಲಿ, ಪುರತಿಪ್ಪಿ ಪಿಡಿಒ ಹನುಮಂತ ನಾಯಕ್, ಜಾವೇದ್ ಪಟೇಲ್, ಪಟೇಲ್ ನವತಿ ಪೂರತಿಪ್ಪಿ, ರಾಮರೆಡ್ಡಿ ಎನ್ ಮಲ್ಕಾಪುರ, ರಮೇಶ ಮೂಡಲದಿನ್ನಿ, ಬುಡಲದಿನ್ನಿ, ರಮೇಶ ಮೂಡಲದಿನ್ನಿ. ಟಿ.ಎಚ್.ದುಳ್ಳಯ್ಯ ಮತ್ತಿತರರಿದ್ದರು.

ಎ.ಟಿ ಪಾಟೀಲ್ ರಚಿತ ಸೋಲೊಪ್ಪಿದ ಶ್ರೀಮಂತ ನಾಟಕವನ್ನು ಸಿಂಡಿಕೇಟ್ ಸದಸ್ಯ ಚನ್ನಬಸವ ನಾಯಕ ಉದ್ಘಾಟಿಸಿದರು.

ಕೌಶಲ ಕಲಿತು ಉದ್ಯೋಗ ಗಿಟ್ಟಿಸಿಕೊಳ್ಳಿ

ರಾಯಚೂರು: ಇಂದು ಯುವಕರಿಗೆ ಉದ್ಯೋಗ ಸಿಗುವುದು ಕಷ್ಟವಿದ್ದು ಅಗತ್ಯಕ್ಕೆ ತಕ್ಕ ಕೌಶಲ್ಯ ಕಲಿತು ಕೊಂಡು ಅವಕಾಶ ಪಡೆಯುವ ಪ್ರಯತ್ನ ಮಾಡಬೇಕು ಎಂದು ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಯಂಕಣ್ಣ ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದರು.

ಉದ್ಯೋಗ ಅರಸಿ ದೂರದ ಊರಿಗೆ ಹೋಗುವ ಬದಲಿಗೆ ನಮ್ಮಲ್ಲಿಗೆ ಬಂದು ವಿದ್ಯಾರ್ಥಿಗಳಿಗೆ ಉದ್ಯೋಗದ ಅವಕಾಶ ನೀಡುತ್ತಿರುವುದು ಉತ್ತಮ ಕಾರ್ಯವಾಗಿದೆ ಎಂದರು.

ಸೆಡಾಕ್ ಜಂಟಿ ನಿರ್ದೇಶಕ ಜಿ.ಯು. ಹುಡೇದ್ ಮಾತನಾಡಿ, ವಿದ್ಯಾರ್ಥಿ, ನಿರುದ್ಯೋಗ ವಿದ್ಯಾವಂತ ಯುವಕರು ಉದ್ಯೋಗ ಮೇಳಗಳಲ್ಲಿ ಭಾಗವಹಿಸಿ ಕಂಪನಿಗಳ ಅಗತ್ಯತೆ ಕೌಶಲ ತಿಳಿಯಬೇಕು ಎಂದರು. ಸಮರ್ಥನಂ ಸಂಸ್ಥೆಯ ಪ್ಲೇಸ್ ಮೆಂಟ್ ಮುಖ್ಯಸ್ಥ ಸತೀಶ್ ಮಾತನಾಡಿ, ಯಾರು ಕಷ್ಟ ಪಡುತ್ತಾರೆಯೊ ಅವರಿಗೆ ಕೆಲಸದ ತೊಂದರೆ ಇರದು ಸರಿಯಾದ ಶಿಸ್ತಿನಿಂದ ವಿದ್ಯಾಭ್ಯಾಸ ಮಾಡಿದರೆ ಸರಿಯಾದ ಸಮಯಕ್ಕೆ ಸಮರ್ಪಕ ಉದ್ಯೋಗ ಸಿಗಲಿದೆ ಇಂತಹ ಉದ್ಯೋಗ ಮೇಳಗಳ ಸಮರ್ಥವಾಗಿ ಬಳಸಿಕೊಳ್ಳಲು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕಾಲೇಜಿನ ಉದ್ಯೋಗ ಘಟಕದ ಸಂಚಾಲಕ ಡಾ.ಶಿವರಾಜಪ್ಪ, ಡಾ. ಎಂ.ರವಿ, ಹಿರಿಯ ಪ್ರಾಧ್ಯಾಪಕ ಡಾ.ಪ್ರಾಣೇಶ ಕುಲಕರ್ಣಿ, ಡಾ. ಮಹಾಂತೇಶ ಅಂಗಡಿ, ಸುಭಾಷ ಚಂದ್ರ, ಮಿನಾಜ್ ಉಲ್ ಹಸನ್ ಸೇರಿದಂತೆ ಬೋಧಕ, ಬೋಧಕೇತರ ಸಿಬ್ಬಂದಿಗಳಿದ್ದರು.

ಸಮರ್ಥನಂ ಅಂಗವಿಕಲರ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಉದ್ಯೋಗ ಮೇಳವನ್ನು ಪ್ರಾಂಶುಪಾಲ ಡಾ.ಯಂಕಣ್ಣ ಉದ್ಘಾಟಿಸಿದರು.

> ಸರಕಾರಿ ಕಾಲೇಜಿನಲ್ಲಿ ಬಡ, ಗ್ರಾಮೀಣ ವಿದ್ಯಾರ್ಥಿ ಗಳೆ ಹೆಚ್ಚಿದ್ದು ಹೊರಗಿನ ನಿರುದ್ಯೋಗಿ ವಿದ್ಯಾವಂತ ಯುವಕರು ಆಗಮಿಸಿ ಅವಕಾಶ ಪಡೆಯುವ ಸೌಭಾಗ್ಯ ಸಿಕ್ಕಿದ್ದು 23 ಕಂಪನಿಗಳು ಮುಂದೆ ಬಂದಿದ್ದು ಖುಷಿಯ ಸಂಗತಿ. ವಿದ್ಯಾರ್ಥಿಗಳು ಇದರ ಸದ್ಬಳಕೆ ಮಾಡಿ ಕೊಳ್ಳಬೇಕು.
> -ಡಾ.ಯಂಕಣ್ಣ , ಪ್ರಾಂಶುಪಾಲ

ಕಟ್ಟಡ ಕಾರ್ಮಿಕರ ಬದುಕಿನ ರಕ್ಷಣೆಗೆ ಸಂಘಟನೆ ಅನಿವಾರ್ಯ

ಕೊಪ್ಪಳ: ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಪ್ರತಿದಿನ ಒಂದಿಲ್ಲೊಂದು ಅವಗಢ ಸಂಭವಿಸುತ್ತಿವೆ. ಇದರಿಂದ ನಿರ್ಮಾಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಮಿಕರ ಜೀವಕ್ಕೆ ಮತ್ತು ಬದುಕಿಗೆ ಯಾವುದೇ ರಕ್ಷಣೆ ಇಲ್ಲದಾಗಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ ಆತಂಕ ವ್ಯಕ್ತಪಡಿಸಿದರು. ನಗರದಲ್ಲಿ ನಡೆದ ಕಲಬುರಗಿ-ಬೆಳಗಾವಿ ಕಾರ್ಮಿಕ ವಿಭಾಗಗಳ ಕಟ್ಟಡ ಕಾರ್ಮಿಕ ಸಂಘಧ ಜಿಲ್ಲಾ ಪದಾಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿ, ಕಟ್ಟಡ ಕಾರ್ಮಿಕರು ಕೇವಲ ಕಲ್ಯಾಣ ಮಂಡಳಿ ಸೌಲಭ್ಯಗಳಿಗೆ ಮಾತ್ರ ಸಂಘಟಿತರಾದರೆ ಪ್ರಯೋಜನವಿಲ್ಲ. ಬದಲಾಗಿ ಜೀವ ಹಾಗೂ ಸುರಕ್ಷತೆಗಾಗಿ ಸಂಘಟಿತರಾಗಬೇಕು.

ಕಟ್ಟಡ ನಿರ್ಮಾಣಕ್ಕೆ ಸಾವಿರಾರು ವರ್ಷದ ಇತಿಹಾಸವಿದೆ. ಕಟ್ಟಡ ಕಾರ್ಮಿಕ ಕಾನೂನು ಜಾರಿಗೊಳಿಸಲು ಕಲ್ಯಾಣ ಮಂಡಳಿ ರಚನೆಯಾಗಲು ಹಾಗೂ ಸೌಲಭ್ಯಗಳನ್ನು ಜಾರಿಗೊಳಿಸುವಲ್ಲಿಯೂ ಕಟ್ಟಡ ನಿರ್ಮಾಣ ಕಾರ್ಮಿಕರು ನಿರಂತರ ಹೋರಾಟ ನಡೆಸುತ್ತಿದ್ದಾರೆ.ಆದರೆ ಕೇವಲ ಅವರಲ್ಲಿ ಕೇವಲ ಸೌಲಭ್ಯಗಳಿಗಾಗಿ ಮಾತ್ರ ಜಾಗೃತಿ ಮೂಡಿದರೆ ಸಾಲದು ಕೆಲಸದ ಸ್ಥಳಗಳಲ್ಲಿ ಅಗತ್ಯ ಸುರಕ್ಷತೆಯ ಕ್ರಮಗಳಿಗಾಗಿ ಹೋರಾಡುವಂತೆ ಕಾರ್ಮಿಕ ಸಂಘಗಳು ಕೆಲಸಮಾಡಬೇಕಿದೆ ಕಲಬುರಗಿ ಹಾಗೂ ಬೆಳಗಾವಿ ವಿಭಾಗದಲ್ಲಿ ಇರುವ ಲಕ್ಷಾಂತರ ಕಾರ್ಮಿಕರಲ್ಲಿ ಸಂಘಟನೆ ಪ್ರಜ್ಞೆ ಹೆಚ್ಚಿಸಲು ನಮ್ಮ ಸಂಘಗಳು ಶ್ರಮಿಸಬೇಕಿದೆ ಎಂದರು.

ಫೆಡರೇಶನ್ ರಾಜ್ಯಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ಪ್ರಧಾನ ಕಾರ್ಯದರ್ಶಿ ವರದಿ ಮಂಡಿಸಿದರು. ನಂತರ ಜಿಲ್ಲಾವಾರು ಗುಂಪು ಚರ್ಚೆ ನಡೆಯಿತು. ಜಿಲ್ಲಾ ಅಧ್ಯಕ್ಷ ನಿರುಪಾದಿ ಬೆಣಕಲ್ ಮಾತನಾಡಿದರು. ಜಿಲ್ಲಾ ಪದಾಧಿಕಾರಿಗಳಾದ ಕಾಶಿ ಸರ್ದಾರ್, ನಾಗಯ್ಯ ಸ್ವಾಮಿ, ಯಲ್ಲಾಲಿಂಗ, ಶಬ್ಬೀರ್ ಜಾಲಹಳ್ಳಿ, ಗೌಸ್ ಪೀರ್, ಆನಂದರಾಜ್, ಹೊನ್ನೂರು ಸಾಬ್, ಮೆಹಬೂಬ್, ಬಸವರಾಜ ಮಾಳಿಗಿ, ರಾಜು ಪಾಟೀಲ್ ಇದ್ದರು. ಖಾಸಿಂ ಸರ್ದಾರ್, ರಂಗಪ್ಪ ದೊರೆಗಳ್, ಮಂಜುನಾಥ ಡಗ್ಗಿ, ಜಗನ್ನಾಥ, ರುದ್ರಪ್ಪ ನಾಯಕ್, ರಿಯಾಜ್ ಅಹ್ಮದ್ ಇದ್ದರು.

ಕುರಿಗಳ ಸಂತೆ ಹೆಚ್ಚುವರಿ ಹಣ ವಸೂಲಿ: ಆರೋಪ

ಮುದಗಲ್: ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆವರಣದಲ್ಲಿ ಪ್ರತಿ ಭಾನುವಾದಂದು ನಡೆಯುವ ಕುರಿ,ಮೇಕೆ ಸಂತೆಯಲ್ಲಿ ನಿಗದಿತ ದರಕ್ಕಿಂತ ಹೆಚ್ಚುವರಿ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಕುರಿ, ಹಗ್ಗ, ಕೋಳಿ ಮಾರಾಟಗಾರರು ದೂರಿದ್ದಾರೆ. ಪಟ್ಟಣದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಂಘದವರು 2019 ರಿಂದ 10 ವರ್ಷಗಳ ವರೆಗೆ ಟೆಂಡರ್ ಪಡೆದಿದ್ದಾರೆ. ಸರಕಾರದ ಆದೇಶದ ಪ್ರಕಾರ ಪ್ರತಿ ಮೇಕೆ,ಕುರಿಗೆ 5 ರು.ನಂತೆ ಹಣ ಪಡೆಯಬೇಕು. ಆದರೆ ಪ್ರತಿ ಮೇಕೆ ಅಥವಾ ಕುರಿಗೆ 20,30,40 ರು. ಗಳನ್ನು ಅನಧಿಕೃತವಾಗಿ ಪಡೆದು ವ್ಯಾಪಾರಸ್ಥರನ್ನು ವಂಚಿಸುತ್ತಿ ದ್ದಾರೆ. ಈ ಕುರಿತು ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಅಂಗಡಿಕಾರರಿಗೆ, ಹಗ್ಗ ಮಾರುವವರಿಗೆ, ಕಂಬಳಿ ಮಾರುವವರಿಗೆ ನೆಲ ಬಾಡಿಗೆ ತೆಗೆದುಕೊಳ್ಳುವ ಅವಕಾಶವಿಲ್ಲ. ಕೂಡಲೇ ಸಂಭಂಧಿಸಿದ ಕುರಿ ಉಣ್ಣೆ ಮತ್ತು ಉತ್ಪಾದಕರ ಸಂಘಕ್ಕೆ ನೀಡಲಾದ ಟೆಂಡರ್ ರದ್ದುಪಡಿಸಿ, ಕಾನೂನು ಕ್ರಮ ಕೈಗೊಳ್ಳಬೇಕೆಂದು ವ್ಯಾಪರಸ್ಥರಾದ ಮರಿಯಪ್ಪ, ಶಬ್ಬಿರ್, ಲಾರೇನ್ಸ್, ದೇವದಾಸ್, ಶಂಕ್ರಪ್ಪ, ರತನಮ್ ಒತ್ತಾಯಿಸಿದ್ದಾರೆ. ಮುದಗಲ್ ಕುರಿ, ಮೇಕೆ ಸಂತೆಯಲ್ಲಿ ಹೆಚ್ಚುವರಿ ಹಣ ವಸೂಲಿ, ವ್ಯಾಪಾರಿಗಳಲ್ಲಿ ನೆಲಬಾಡಿಗೆ ಪಡೆಯುತ್ತಿ ರುವುದನ್ನು ಪರಿಶೀಲಿಸಿ, ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸಾವಿತ್ರಿ, ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಲಿಂಗಸೂಗೂರು ತಿಳಿಸಿದ್ದಾರೆ.

ಭವಿಷ್ಯದಲ್ಲಿ ಕನ್ನಡ ಭಾಷೆ ಸ್ಥಿತಿ ಆತಂಕದಾಯಕ

ಕೊಪ್ಪಳ: ಸದ್ಯದ ಕನ್ನಡ ಸಾಹಿತ್ಯ ಮತ್ತು ಶಿಕ್ಷಣದ ಸ್ಥಿತಿ- ಗತಿ ಗಮನಿಸಿದರೆ ಭವಿಷ್ಯದಲ್ಲಿ ಕನ್ನಡ ಉಳಿವಿನ ಬಗ್ಗೆ ಸಾಕಷ್ಟು ಅನುಮಾನ ಮೂಡುತ್ತವೆ. ಹೀಗಾಗಿ ಈಗಿನಿಂದಲೇ ಕನ್ನಡ ಉಳಿವಿನ ಬಗ್ಗೆ ಚಿಂತನೆ ಮಾಡುವ ಅತ್ಯವಿದೆ ಎಂದು ಕೊಪ್ಪಳ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಬಿ.ಕೆ ರವಿ ಅಭಿಪ್ರಾಯಪಟ್ಟರು.

ನಗರದ ಶಕ್ತಿ ಶಾರದೆಯ ಮೇಳ ಹಾಗೂ ಬೆರಗು ಪ್ರಕಾಶನ ಆಯೋಜಿಸಿದ್ದ 'ಚಿಂತನ ಮಂಥನ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ದರು. ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಪೀಠದ ಅಧ್ಯಕ್ಷ ಹಾಗೂ ಸಾಹಿತಿ ಕಾ.ತ. ಚಿಕ್ಕಣ್ಣ ಮಾತನಾಡಿ, ಕನಕರ ಕೀರ್ತನೆ ಹಾಗೂ ಕೃತಿಗಳು ಯುವಕರ ಮನದಾಳಕ್ಕೆ ಇಳಿಯು ವ ಅಗತ್ಯ ಇದೆ. ಹಾಗಾಗಿ ಯುವಶಕ್ತಿಗೆ ಹುರಿದುಂಬಿಸುವ ಕೆಲಸವಾಗಬೇಕಿದೆ ಎಂದರು. ಹಿರಿಯ ಸಾಹಿತಿಗಳಾದ ಈಶ್ವರ ಹತ್ತಿ, ಅಂದಾನಪ್ಪ ಬೆಣಕಲ್, ವಿಜಯ ಅಮೃತರಾಜ, ಶಿವಪ್ರಸಾದ ಹಾದಿಮನಿ, ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್, ದಾನಪ್ಪ ಜಿ ಕವಲೂರು, ಡಿ.ಎಂ.ಬಡಿಗೇರ, ಪ್ರವೀಣ್ ಪೊಲೀಸ್ ಪಾಟೀಲ ಪ್ರೊ.ಶರಣಬಸಪ್ಪ ಬಿಳಿಎಲೆ, ಮಲ್ಲಿಕಾರ್ಜುನಗೌಡ ಪಾಟೀಲ್, ವಿನಯ.ಎ.ಮದರಿ, ಮಹೇಶ ಬಳ್ಳಾರಿ ಇದ್ದರು. ನಿವೃತ್ತ ಉಪನ್ಯಾಸಕಿ ಮಾಲಾ ಬಡಿಗೇರ, ಉಪನ್ಯಾಸಕಿ ಅನುಪಮ ಕನಕಗಿರಿ ಕಾರ್ಯಕ್ರಮ ನಿರೂಪಿಸಿದರು.

ಕೊಪ್ಪಳದಲ್ಲಿ ಶಕ್ತಿ ಶಾರದೆಯ ಮೇಳ ಹಾಗೂ ಬೆರಗು ಪ್ರಕಾಶನ ಆಯೋಜಿಸಿದ್ದ 'ಚಿಂತನ ಮಂಥನ' ಕಾರ್ಯಕ್ರಮದಲ್ಲಿ ಪ್ರೊ.ಬಿ.ಕೆ.ರವಿ ಮಾತನಾಡಿದರು.

> **ಸದ್ಯ ಹಳೆಗನ್ನಡ ಮತ್ತು ನಡುಗನ್ನಡ**
> ಸಾಹಿತ್ಯ ಮರೆತು ಹೋಗುವ ಹಂತಕ್ಕೆ ಬಂದಿದೆ. ಪಂಪ, ರನ್ನ, ಪೊನ್ನ, ಜನ್ನ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದವರ ಬರಹ ಈಗಿನ ಯುವ ಪೀಳಿಗೆ ಓದುವ ಅಗತ್ಯವಿದೆ. ದಾಸರ ಕೀರ್ತನೆಗಳು ಮುಂದಿನ ಪೀಳಿಗೆಗೆ ಉಳಿಯಬೇಕಿದೆ. ಹಾಗಾಗಿ ನಾವೆಲ್ಲ ಒಗ್ಗೂಡಿ ಕೆಲಸ ಮಾಡಬೇಕು. ಸಾಹಿತ್ಯ ಓದುಗರನ್ನು ತಾನೇ ಸೆಳೆಯಬೇಕು. ಆಗಲೇ ಅದಕ್ಕೊಂದು ಮೆರುಗು.

ಜಮೀನುಗಳಿಗೆ ನೀರು ಬಿಡುವಂತೆ ಮನವಿ

ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ರಾಜ್ಯ ಸಮಿತಿಯ ವತಿಯಿಂದ ಮುಖ್ಯಮಂತ್ರಿಗಳಿಗೆ ಗ್ರೇಡ್-2 ತಹಸೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಕರ್ನಾಟಕ ರಾಜ್ಯ ರೈತ ಸಂಘ ರಾಜ್ಯ ಸಮಿತಿಯ ರಾಜ್ಯ ಕಾರ್ಯದರ್ಶಿ ಸೂಗುರಯ್ಯ ಆರ್.ಎಸ್.ಮಠ ಮಾತನಾಡಿ, ತಾಲೂಕಿನಲ್ಲಿ ತುಂಗಭದ್ರ ಕಾಲುವೆಯ ಎಡದಂಡೆಯ ಉಪಕಾಲುವೆ 76.82.85.89ರ ಮೂಲಕ ರೈತರ ಜಮೀನುಗಳಿಗೆ ಕಾಲುವೆ ಮೂಲಕ ಸರಿಯಾಗಿ ನೀರು ಬಿಡದೆ ಇರುವುದರಿಂದ ರೈತರು ಬೆಳೆದ ವಿವಿಧ ಬೆಳೆಗಳ ಇಳುವರಿ ಕಡಿಮೆಯಾಗುತ್ತಿದೆ, ರೈತರ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ದೊರೆಯದೆ ಇರುವುದರಿಂದ ಕೂಡಲೇ ರಾಜ್ಯ ಸರಕಾರದಿಂದ ತಾಲೂಕಿನಲ್ಲಿ ಜೋಳ, ಭತ್ತ, ತೊಗರಿ ಖರೀದಿ ಕೇಂದ್ರಗಳನ್ನು ಶಿಘ್ರವೇ ಪ್ರಾರಂಭಿಸುವುದಕ್ಕೆ ಕ್ರಮ ಕೈಗೊಳ್ಳಬೇಕು. ಪ್ರತಿ ಕ್ವಿಂಟಲ್ ಹತ್ತಿಯಲ್ಲಿ 2ಕೆ.ಜಿ. ಹತ್ತಿಯನ್ನು ಸೂಟ್ ಹೆಸರಿನಲ್ಲಿ ಕಟಾವು ಮಾಡುವ ಮೂಲಕ ರೈತರಿಗೆ ಅನ್ಯಾಯ ಮಾಡುತ್ತಿರುವುದರಿಂದ ಅಂತಹ ವ್ಯಾಪಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಕೃಷಿ ಪಂಪಸೆಟ್‌ಗಳಿಗೆ 7 ತಾಸು ವಿದ್ಯುತ್ ನೀಡಬೇಕು ಗ್ರಾಮೀಣ ಭಾಗಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ದುರಸ್ತಿ ಮಾಡಿ ಬಸ್ ಸಂಪರ್ಕ ಕಲ್ಪಿಸಬೇಕು. ಜಿಲ್ಲಾ ಪ್ರ.ಕಾರ್ಯದರ್ಶಿ ಲಿಂಗಾರೆಡ್ಡಿ ಪಾಟೀಲ್, ಬಸವರಾಜ ಮಲ್ಲಿಗೆ ಮಡುವು, ಚಾಮರಸ ಜಾನೇಕಲ್, ವೀರೇಶ ಗವಿಗಟ್, ಅಮರೇಶ ಇದ್ದರು.

ಐಟಿಎಫ್ ಓಪನ್

ತನಿಶಾಗೆ ಐಟಿಎಫ್ ಕಪ್

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ತನಿಶಾ ಕಶ್ಯಪ್ ಅವರು ಭಾನುವಾರ ಮುಕ್ತಾಯಗೊಂಡ ಎಸ್‌ಕೆಎಂಇ ಐಟಿಎಫ್ ಓಪನ್ ಮಹಿಳೆಯರ ಟೆನಿಸ್ ಟೂರ್ನಿಯಲ್ಲಿ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಇಲ್ಲಿನ ಕೆಎಸ್‌ಎಲ್‌ಟಿಎ ಟೆನಿಸ್ ಅಂಗಣದಲ್ಲಿ ಭಾರತದ ಆಟಗಾರ್ತಿಯರ ವ್ಯವಹಾರವಾಗಿದ್ದ ಫೈನಲ್‌ನಲ್ಲಿ 22 ವರ್ಷ ವಯಸ್ಸಿನ ಎಂಟನೇ ಶ್ರೇಯಾಂಕದ ತನಿಶಾ 6-7 (5-7), 6-1, 6-1ರಿಂದ ಏಳನೇ ಶ್ರೇಯಾಂಕದ ಆಕಾಂಕ್ಷಾ ನಿಟ್ಟುರೆ ಅವರನ್ನು ಸೋಲಿಸಿ, ಸೀನಿಯರ್ ವಿಭಾಗದ ಪ್ರಶಸ್ತಿಯ ಬರವನ್ನು ನೀಗಿಸಿಕೊಂಡರು.

ಆರಂಭಿಕ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ ತನಿಶಾ, ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿ ಸಮಬಲ ಸಾಧಿಸಿದರು. ನಿರ್ಣಾಯಕ ಸೆಟ್‌ನಲ್ಲೂ ಚುರುಕಿನ ಆಟ ಪ್ರದರ್ಶಿಸಿದ ಅವರು ಚಾಂಪಿಯನ್ ಕಿರೀಟದೊಂದಿಗೆ ಟ್ರೋಫಿ ಮತ್ತು 1.98 ಲಕ್ಷ ರು. ಬಹುಮಾನ ತಮ್ಮದಾಗಿಸಿಕೊಂಡರು.

ಒಂದೇ ದಿನ ಮೂರು ಪಂದ್ಯ ಆಡಿ ದಣಿದ ಆಕಾಂಕ್ಷಾ ಅವರಿಗೆ ಡಬಲ್ಸ್‌ನಲ್ಲೂ ನಿರಾಸೆಯಾಯಿತು. ಭಾರತದ ಹುಮೇರಾ ಬಹರ್ಮಸ್ ಮತ್ತು ಪೂಜಾ ಇಂಗಳೆ ಜೋಡಿಯು ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು.

ಅಗ್ರ ಶ್ರೇಯಾಂಕದ ಹುಮೇರಾ- ಪೂಜಾ ಜೋಡಿಯು 3-6, 6-0, 10-6ರ ಮೂರು ಸೆಟ್‌ಗಳ ಹೋರಾಟದಲ್ಲಿ ಆಕಾಂಕ್ಷಾ ಮತ್ತು ಹಾಲಿ ರಾಷ್ಟ್ರೀಯ ಚಾಂಪಿಯನ್ ಸೋಹಾ ಸಾದಿಕ್ ಅವರನ್ನು ಸೋಲಿಸಿದರು. ಮೊದಲ ಸೆಟ್‌ನಲ್ಲಿ ಮೇಲುಗೈ ಸಾಧಿಸಿದ್ದ ಎರಡನೇ ಶ್ರೇಯಾಂಕದ ಆಕಾಂಕ್ಷಾ- ಸ್ಥಳೀಯ ಪ್ರತಿಭೆ ಸೋಹಾ ಜೋಡಿಯು ನಂತರ ಹಿನ್ನಡೆ ಅನುಭವಿಸಿತು.

36 ವರ್ಷದ ಬಳಿಕ ಕಿವೀಸರ ಕೇಕೆ!

ಗೆಲುವಿನ ಅಲೆಯಲ್ಲಿದ್ದವರಿಗೆ ಸೋಲಿನ ಸುಳಿ | ಟೆಸ್ಟ್‌ನ ಗೆಲುವಿನ ಶೇಖಡಾವಾರು ಅಂಕಗಳಲ್ಲೂ ಕುಸಿತ 8 ವಿಕೆಟ್‌ಗಳಿಂದ ಭಾರತವನ್ನು ಮಣಿಸಿದ ನ್ಯೂಜಿಲೆಂಡ್ | ಫೈನಲ್‌ಗೆ ಏರಲು 7ರಲ್ಲಿ 6 ಪಂದ್ಯ ಗೆಲ್ಲಲೇಬೇಕು

ಬೆಂಗಳೂರು: ಮಳೆ ಅಡಚಣೆಯ ಮಧ್ಯೆಯೂ ಚಿನ್ನಸ್ವಾಮಿಯಲ್ಲಿ ರನ್ ಹೊಳೆ ಹರಿದ ಮೊದಲ ಟೆಸ್ಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡ ಭಾರತಕ್ಕೆ 8 ವಿಕೆಟ್‌ಗಳ ಸೋಲುಣಿಸಿದೆ.

ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಗುರುವಾರ ಆರಂಭಗೊಂಡ ಈ ಪಂದ್ಯದ ಮೊದಲ ದಿನ ಮಳೆಯಿಂದ ಒಂದೂ ಎಸೆತ ಕಾಣದೆ ರದ್ದುಗೊಂಡಿತ್ತು. ದ್ವಿತೀಯ ದಿನ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಭಾರತ ಕೇವಲ 46 ರನ್‌ಗೆ ಸರ್ವಪತನ ಕಂಡಿತ್ತು. ಪ್ರತಿಯಾಗಿ ಬ್ಯಾಟ್ ಮಾಡಿದ ನ್ಯೂಜಿಲ್ಯಾಂಡ್ 402 ರನ್ ಬಾರಿಸಿ 356 ರನ್ ಮುನ್ನಡೆ ಸಾಧಿಸಿತು. ಇನಿಂಗ್ಸ್ ಸೋಲಿನ ಭೀತಿಯಲ್ಲಿದ್ದ ಭಾರತ ತಂಡವು ದ್ವಿತೀಯ ಇನ್ನಿಂಗ್ಸ್‌ನಲ್ಲಿ ದಿಟ್ಟ ಬ್ಯಾಟಿಂಗ್ ಹೋರಾಟ ನಡೆಸಿ 462 ರನ್ ಬಾರಿಸಿ 106 ರನ್ ಮುನ್ನಡೆ ಗಳಿಸಿತು.

107 ರನ್ ಗೆಲುವಿನ ಗುರಿ ಪಡೆದ ಕಿವೀಸ್ ಅಂತಿಮ ದಿನದಾಟವಾದ ಭಾನುವಾರ ಖಾತೆ ತೆರೆಯುವ ಮುನ್ನವೇ ನಾಯಕ ಲ್ಯಾಥಂ(0) ವಿಕೆಟ್ ಕಳೆದುಕೊಂಡಿತು. ಆದರೆ, ರಚಿನ್ ರವಿಂದ್ರ ಮತ್ತು ವಿಲ್ ಯಂಗ್ ಜೋಡಿ ನಡೆಸಿದ ಜವಾಬ್ದಾರಿಯುತ ಆಟದ ನೆರವಿನಿಂದ 2 ವಿಕೆಟ್‌ಗೆ 107 ರನ್ ಬಾರಿಸಿ ತಂಡ ವಿಜಯ ಪತಾಕೆ ಹಾರಿಸಿತು. ಈ ಜೋಡಿ ಮುರಿಯದ ಮೂರನೇ ವಿಕೆಟ್‌ಗೆ 72 ರನ್ ಜತೆಯಾಟ ನಡೆಸಿತು. ವಿಲ್ ಯಂಗ್ 48 ರನ್ ಬಾರಿಸಿದರೆ, ರಚಿನ್ 39 ರನ್ ಬಾರಿಸಿದರು. ಜಸ್‌ಪ್ರೀತ್ ಬುಮ್ರಾ 2 ವಿಕೆಟ್ ಕಿತ್ತರು. ಇತ್ತಂಡಗಳ ನಡುವಿನ ದ್ವಿತೀಯ ಪಂದ್ಯ ಅಕ್ಟೋಬರ್ 24ರಿಂದ ಪುಣೆಯಲ್ಲಿ ಆರಂಭಗೊಳ್ಳಲಿದೆ. ಮೂರು ಪಂದ್ಯಗಳ ಸರಣಿಯಲ್ಲಿ ಕಿವೀಸ್ 1-0 ಮುನ್ನಡೆ ಕಾಯ್ದುಕೊಂಡಿದೆ.

ಸ್ಥಾನ	ದೇಶ	ಅಂಕ
1	ಭಾರತ	68.06
2	ಆಸ್ಟ್ರೇಲಿಯಾ	62.50
3	ಶ್ರೀಲಂಕಾ	55.56
4	ನ್ಯೂಜಿಲೆಂಡ್	44.4
5	ಇಂಗ್ಲೆಂಡ್	43.06
6	ಸೌಥ್ ಆಫ್ರಿಕಾ	38.89
7	ಬಾಂಗ್ಲಾದೇಶ	34.38
8	ಪಾಕಿಸ್ತಾನ	25.93
9	ವೆಸ್ಟ್ ಇಂಡೀಸ್	18.52

74.24 ನಿಂದ 68.06ಗೆ ಭಾರತದ ಅಂಕ ಕುಸಿತ

ಮೊದಲ ಟೆಸ್ಟ್ ಪಂದ್ಯದಲ್ಲಿ 8 ವಿಕೆಟ್‌ಗಳ ಸೋಲು ಕಂಡ ಪರಿಣಾಮ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ 2023-25 ಅಂಕಪಟ್ಟಿಯಲ್ಲಿ ಭಾರತದ ಗೆಲುವಿನ ಶೇಕಡಾವಾರು ಅಂಕದಲ್ಲಿ ಕುಸಿತ ಕಂಡಿದೆ. ಗೆಲುವು ಸಾಧಿಸಿದ ನ್ಯೂಜಿಲ್ಯಾಂಡ್ 6ನೇ ಸ್ಥಾನದಿಂದ 4ನೇ ಸ್ಥಾನಕ್ಕೇರಿದೆ. ಬಾಂಗ್ಲಾದೇಶ ವಿರುದ್ಧದ ಸರಣಿ ಗೆದ್ದಾಗ ಭಾರತದ ಗೆಲುವಿನ ಶೇಕಡಾವಾರು ಅಂಕ 74.24 ಇತ್ತು. ಈಗ 68.060 ಕ್ಕೆ ಕುಸಿದಿದೆ. ಅಂಕದ ಕುಸಿತ ಕಂಡೂ ಕೂಡ ಭಾರತ ಅಗ್ರಸ್ಥಾನದಲ್ಲೇ ಮುಂದುವರಿದಿದೆ. ಡಬ್ಲ್ಯೂಟಿಸಿ ಫೈನಲ್ ತಲುಪುವ ಅವಕಾಶವನ್ನು ಹೆಚ್ಚಿಸಲು, ಭಾರತವು ತನ್ನ ಉಳಿದ 7 ಪಂದ್ಯಗಳಲ್ಲಿ ಕನಿಷ್ಠ ಆರನ್ನು ಗೆಲ್ಲಬೇಕು. ಹೀಗಾಗಿ ನ್ಯೂಜಿಲ್ಯಾಂಡ್ ವಿರುದ್ಧದ ಉಳಿದಿರುವ 2 ಪಂದ್ಯ ಮತ್ತು ಆಸ್ಟ್ರೇಲಿಯಾ ವಿರುದ್ಧದ ಸರಣಿ ಅತ್ಯಂತ ಪ್ರಮುಖವಾಗಲಿದೆ.

ಸಂಕ್ಷಿಪ್ತ ಸ್ಕೋರ್

- **ಭಾರತ:** ಮೊದಲ ಇನಿಂಗ್ಸ್-46(ರಿಷಭ್ ಪಂತ್ 20, ಮ್ಯಾಟ್ ಹೆನ್ರಿ 15 ಕ್ಕೆ5, ವಿಲಿಯಂ ಓ'ರೂರ್ಕೆ 22ಕ್ಕೆ 4). ದ್ವಿತೀಯ ಇನಿಂಗ್ಸ್ -462 (ಸರ್ಫರಾಜ್ ಖಾನ್ 150, ರಿಷಭ್ ಪಂತ್ 99, ವಿರಾಟ್ ಕೊಹ್ಲಿ 70, ರೋಹಿತ್ ಶರ್ಮ 52, ಮ್ಯಾಟ್ ಹೆನ್ರಿ 102 ಕ್ಕೆ 3, ವಿಲಿಯಂ ಓ'ರೂರ್ಕೆ 92 ಕ್ಕೆ 3).
- **ನ್ಯೂಜಿಲ್ಯಾಂಡ್:** ಮೊದಲ ಇನಿಂಗ್ಸ್-402 (ಡೆವೋನ್ ಕಾನ್ವೆ 91, ರಚಿನ್ ರವೀಂದ್ರ 134, ಟಿಮ್ ಸೌಥಿ 65. ಕುಲದೀಪ್ ಯಾದವ್ 99 ಕ್ಕೆ 3, ರವೀಂದ್ರ ಜಡೇಜಾ 72 ಕ್ಕೆ 3, ಮೊಹಮ್ಮದ್ ಸಿರಾಜ್ 84 ಕ್ಕೆ 2). ದ್ವಿತೀಯ ಇನಿಂಗ್ಸ್-2 ವಿಕೆಟ್‌ಗೆ 107(ವಿಲ್ ಯಂಗ್ 45★ ರಚಿನ್ ರವೀಂದ್ರ 39★).

ದಶಕಗಳ ನಂತರ ಕಿವೀಸ್ ಗೆಲುವು

ಬೆಂಗಳೂರಿನ ಚಿನ್ನಸ್ವಾಮಿಯಲ್ಲಿ ಕ್ರಿಕೆಟ್ ಸ್ಟೇಡಿಯಂನಲ್ಲಿ ಭಾನುವಾರ ಮುಕ್ತಾಯ ಕಂಡ ಭಾರತ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 8 ವಿಕೆಟ್ ಗೆಲುವು ಸಾಧಿಸಿದ ನ್ಯೂಜಿಲೆಂಡ್ 36 ವರ್ಷಗಳ ಬಳಿಕ ಭಾರತದಲ್ಲಿ ಟೆಸ್ಟ್ ಪಂದ್ಯ ಗೆದ್ದ ಐತಿಹಾಸಿಕ ಸಾಧನೆ ಮಾಡಿತು. ಇದಕ್ಕೂ ಮುನ್ನ ನ್ಯೂಜಿಲ್ಯಾಂಡ್ ಭಾರತದಲ್ಲಿ 37 ಟೆಸ್ಟ್ ಪಂದ್ಯಗಳನ್ನು ಆಡಿ ಕೇವಲ 2 ಪಂದ್ಯಗಳನ್ನು ಮಾತ್ರ ಜಯಿಸಿತ್ತು. ಕೊನೆಯ ಬಾರಿಗೆ ಕಿವೀಸ್ ಭಾರತೀಯ ನೆಲದಲ್ಲಿ ಗೆಲುವು ಕಂಡಿದ್ದು1988ರಲ್ಲಿ. ಮುಂಬೈ ವಾಂಖೇಡೆ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯ ವನ್ನು ನ್ಯೂಜಿಲೆಂಡ್ 136 ರನ್ನುಗಳಿಂದ ಗೆದ್ದಿತ್ತು. ಇದೀಗ 36 ವರ್ಷಗಳ ಬಳಿಕ ಜಯಭೇರಿ ಬಾರಿಸಿದೆ.

ಅಜೇಯ ದಾಖಲೆ ಬ್ರೇಕ್

ಸುಮಾರು ಎರಡೂವರೆ ವರ್ಷಗಳ ಬಳಿಕ ಬೆಂಗಳೂರಿನಲ್ಲಿ ನಡೆದ ಟೆಸ್ಟ್ ಪಂದ್ಯ ಇದಾಗಿತ್ತು. ನ್ಯೂಜಿಲೆಂಡ್ ವಿರುದ ಈ ಹಿಂದೆ ಇಲ್ಲಿ ಆಡಲಾಗಿದ್ದ ಮೂರು ಟೆಸ್ಟ್‌ಗಳಲ್ಲೂ ಭಾರತ ಗೆದ್ದು ಅಜೇಯ ದಾಖಲೆ ಹೊಂದಿತ್ತು. ಇದೀಗ ಸೋಲಿನೊಂದಿಗೆ ಗೆಲುವಿನ ಓಟ ಕೊನೆಗೊಂಡಿದೆ.

ಜೂನ್‌ನಲ್ಲಿ ಫೈನಲ್

ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಪಂದ್ಯವು ಜೂನ್ 11 ರಿಂದ 15 ರ ತನಕ ಲಂಡನ್‌ನ ಲಾರ್ಡ್ಸ್‌ನಲ್ಲಿ ನಡೆಯಲಿದೆ. ಜೂನ್ 16 ಮೀಸಲು ದಿನವಾಗಿದೆ. ಲಾರ್ಡ್ಸ್‌ನಲ್ಲಿ ಇದೇ ಮೊದಲ ಬಾರಿಗೆ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ನಡೆಯುತ್ತಿದೆ.

ಹಾಕಿ: ಬ್ರಿಟನ್ ಮೇಲೆ ಭಾರತದ ಸವಾರಿ

ಸುಲ್ತಾನ್ ಆಫ್ ಜೊಹೊರ್ ಕಪ್ ಟೂರ್ನಿಯಲ್ಲಿ ಭಾರತದ ಗೆಲುವಿನ ಓಟ

ಜೊಹೊರ್, ಮಲೇಷ್ಯಾ: ದಿಲ್ರಾಜ್ ಸಿಂಗ್ ಮತ್ತು ಶಾರದಾನಂದ ತಿವಾರಿ ಅವರ ಆಟದ ಬಲದಿಂದ ಭಾರತ ಜೂನಿಯರ್ ಪುರುಷರ ಹಾಕಿ ತಂಡ ಭಾನುವಾರ ಸುಲ್ತಾನ್ ಆಫ್ ಜೊಹೊರ್ ಕಪ್ (21 ವರ್ಷದೊಳಗಿನವರ) ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿದೆ.

ಶನಿವಾರ ಆರಂಭಿಕ ಪಂದ್ಯದಲ್ಲಿ ಜಪಾನ್ ತಂಡವನ್ನು ಮಣಿಸಿ ಆತ್ಮವಿಶ್ವಾಸ ವೃದ್ಧಿಸಿಕೊಂಡ ಭಾರತದ ಆಟಗಾರರು 6-4 ಗೋಲುಗಳಿಂದ ಬ್ರಿಟನ್ ತಂಡವನ್ನು ಮಣಿಸಿದರು. ದಿಲ್ರಾಜ್ (17ನೇ ಮತ್ತು 50ನೇ ನಿಮಿಷ) ಮತ್ತು ತಿವಾರಿ (20ನೇ ಮತ್ತು 50ನೇ) ತಲಾ ಎರಡು ಗೋಲು ಗಳಿಸಿದರು. ಮೊಹಮ್ಮದ್ ಕೊನೈನ್ ಡ್ಯಾಡ್ (7ನೇ) ಮತ್ತು ಮನ್ಮೀತ್ ಸಿಂಗ್ (26ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಬ್ರಿಟನ್ ಪರ ರೋರಿ ಪೆನ್ರೋಸ್ (2ನೇ ಮತ್ತು 15ನೇ) ಮತ್ತು ಮೈಕೆಲ್ ರಾಯ್ಡನ್ (46ನೇ ಮತ್ತು 59ನೇ) ತಲಾ ಎರಡು ಗೋಲು ದಾಖಲಿಸಿದರು.

ಭಾರತ ತಂಡವು 22ರಂದು ಆತಿಥೇಯ ಮಲೇಷ್ಯಾ ತಂಡವನ್ನು, 23ರಂದು ಆಸ್ಟ್ರೇಲಿಯಾ ತಂಡವನ್ನು, 25ರಿಂದ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. 26ರಂದು ಫೈನಲ್ ಹಣಾಹಣಿ ನಡೆಯಲಿದೆ. ಭಾರತ ಈ ಹಿಂದೆ 2013, 2014 ಮತ್ತು 2022 ರಲ್ಲಿ ಈ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು.

ದಿನದ ಇತರ ಪಂದ್ಯದಲ್ಲಿ ಜಪಾಲ್ 4-1ರಿಂದ ಮಲೇಷ್ಯಾ ತಂಡವನ್ನು ಸೋಲಿಸಿದರೆ, ಆಸ್ಟ್ರೇಲಿಯಾ 2-2ರಿಂದ ನ್ಯೂಜಿಲೆಂಡ್ ವಿರುದ್ಧ ಡ್ರಾ ಸಾಧಿಸಿತು.

ಬಿಡಿಎಫ್ಎ ಲೀಗ್: ಸೌತ್ ಯುನೈಟೆಡ್‌ಗೆ ಗೆಲುವು

ಬೆಂಗಳೂರು: ಮೊಹಮ್ಮದ್ ಅಲ್ತಾಬ್ ಹುಸೇನ್ ಅವರ ಹ್ಯಾಟ್ರಿಕ್ ಗೋಲುಗಳ ಬಲದಿಂದ ಸೌತ್ ಯುನೈಟೆಡ್ ತಂಡವು ಇಲ್ಲಿ ನಡೆಯುತ್ತಿರುವ ಬಿಡಿಎಫ್ಎ ಸೂಪರ್ ಡಿವಿಷನ್ ಲೀಗ್ ಫುಟ್ಬಾಲ್ ಟೂರ್ನಿಯ ಪಂದ್ಯದಲ್ಲಿ 4-2ರಿಂದ ಎಚ್‌ಎಎಲ್ ತಂಡವನ್ನು ಸೋಲಿಸಿತು.

ಬೆಂಗಳೂರು ಫುಟ್ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಹುಸೇನ್ (20ನೇ, 49ನೇ ಮತ್ತು 72ನೇ ನಿಮಿಷ) ಮೂರು ಗೋಲು ಗಳಿಸಿದರು. ಇಶಾನ್ ಸಾಹಿ (90+1ನೇ) ಒಂದು ಗೋಲು ದಾಖಲಿಸಿದರು. ಎಚ್‌ಎಎಲ್ ಪರ ತೇಜರಸ್ ಎಸ್ (28ನೇ ಮತ್ತು 77ನೇ) ಗೋಲು ತಂದಿತ್ತರು.

ದಿನದ ಮತ್ತೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡವು 4-1 ಗೋಲುಗಳಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವನ್ನು ಮಣಿಸಿತು. ಬಿಎಫ್‌ಸಿಯ ಜೋಶುವಾ ಡಿಸಿಲ್ವ (9ನೇ, 26ನೇ ಮತ್ತು 43ನೇ) ಹ್ಯಾಟ್ರಿಕ್ ಗೋಲು ಗಳಿಸಿದರೆ, ತೌರೆಮ್ ಕೆಲ್ವಿಯನ್ ಸಿಂಗ್ (64ನೇ) ಒಂದು ಗೋಲು ದಾಖಲಿಸಿದರು. ಸ್ಪೋರ್ಟಿಂಗ್ ಕ್ಲಬ್ ಪರ ಏಕೈಕ ಗೋಲನ್ನು ತರುಣ್ ಕುಮಾರ್ (86ನೇ) ಗಳಿಸಿದರು.

ವಿಟಾಕೀಸ್

ಮುತ್ತಣ್ಣನಿಗೆ ಶಿವಣ್ಣ ಸಾಥ್

ದೇವರಾಜ್ ಪುತ್ರ ಪ್ರಣಂ ದೇವರಾಜ್ ನಟನೆಯ ಬಹು ನಿರೀಕ್ಷಿತ ಸಿನಿಮಾ ಸನ್ ಆಫ್ ಮುತ್ತಣ್ಣ ಟೈಟಲ್ ಹಾಗೂ ಪೋಸ್ಟರ್‌ನಿಂದಲೇ ಕುತೂಹಲ ಹೆಚ್ಚಿಸಿದೆ. ಇದೀಗ ಸನ್ ಆಫ್ ಮುತ್ತಣ್ಣ ಬಳಗದಿಂದ ಹೊಸ ಅಪ್‌ಡೇಟ್ ಸಿಕ್ಕಿದೆ. ಸನ್ ಆಫ್ ಮುತ್ತುರಾಜ್, ಸನ್ ಆಫ್ ಮುತ್ತಣ್ಣನಿಗೆ ಸಾಥ್ ಕೊಡುತ್ತಿದ್ದಾರೆ. ಹೌದು, ಇದೇ 23ರಂದು ಚಿತ್ರದ ಟೀಸರ್ ರಿಲೀಸ್ ಆಗಲಿದ್ದು, ಶಿವಣ್ಣ ಟೀಸರ್ ಬಿಡುಗಡೆ ಮಾಡಲಿದ್ದಾರೆ. ಶ್ರೀಕಾಂತ್ ಹುಣಸೂರು ನಿರ್ದೇಶಿಸುತ್ತಿರುವ ಸನ್ ಆಫ್ ಮುತ್ತಣ್ಣ ಸಿನಿಮಾದಲ್ಲಿ ಪ್ರಣಂ ದೇವರಾಜ್ ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಿದ್ದು, ಖುಷಿ ರವಿ ನಾಯಕಿಯಾಗಿ ನಟಿಸಿದ್ದಾರೆ. ರಂಗಾಯಣ ರಘು ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲಾ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ ಮುಂತಾದವರು ಸಿನಿಮಾದ ಇತರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ಟೈಟಲ್ ಹೇಳುವಂತೆ ಇದು ಅಪ್ಪ-ಮಗನ ಬಾಂಧವ್ಯದ ಕಥೆಯಾಗಿದೆ. ಸ್ಕೆಟ್ಟಿಂಗ್ ಕೃಷ್ಣ ಛಾಯಾಗ್ರಹಣ, ಹರೀಶ್ ಕೊಮ್ಮೆ ಸಂಕಲನವಿದೆ. ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ ಸಾಹಿತ್ಯದಲ್ಲಿ ಹಾಡುಗಳು ಮೂಡಿಬಂದಿದ್ದು, ಸಚಿನ್ ಬಸ್ರೂರ್ ಸಂಗೀತ ಸಂಯೋಜಿಸಿದ್ದಾರೆ. ಪುರಾತನ ಫಿಲಂ ಹಾಗೂ ಎಸ್‌ಆರ್‌ಕೆ ಫಿಲಂಸ್ ಬ್ಯಾನರ್‌ನಲ್ಲಿ ಈ ಚಿತ್ರ ನಿರ್ಮಾಣವಾಗಿದೆ.



ಜಲಂಧರನಾಗಿ ಬಂದ ಪ್ರಮೋದ

ಲಾಫಿಂಗ್ ಬುದ್ಧ ಚಿತ್ರದಲ್ಲಿ ದಢೂತಿ ಪೊಲೀಸ್ ಪೇದೆಯಾಗಿ ನಗಿಸಿದ್ದ ಪ್ರಮೋದ್ ಶೆಟ್ಟಿ ಈಗ ಜಲಂಧರನಾಗಿ ಅಬ್ಬರಿಸಲು ಸಿದ್ಧವಾಗಿದ್ದಾರೆ. ಸದ್ಯ ಜಲಂಧರ ಹುಟ್ಟುತ್ತಾ ನಾವು... ಎಂಬ ಹಾಡಿನ ಮೂಲಕ ಸದ್ದು ಮಾಡುತ್ತಿದ್ದಾನೆ. ಮನ್ವರ್ಷಿ ನವಲಗುಂದ ಬರದಿರುವ ಈ ಹಾಡಿಗೆ ಅವಿನಾಶ್ ಬಸತ್ಕೂರ್ ದನಿಯಾಗಿದ್ದಾರೆ. ಜತಿನ್ ದರ್ಶನ್ ಸಂಗೀತ ಸಂಯೋಜಿಸಿದ್ದಾರೆ. ಪಿ.ಆರ್.ಓ ಸುಧೀಂದ್ರ ವೆಂಕಟೇಶ್ ಈ ಹಾಡನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಜಲಂಧರ ಜಲದಾಳದ ರೋಚಕ ಕಥೆಯನ್ನು ಹೊತ್ತು ಬರುತ್ತಿದ್ದು, ಪ್ರಮೋದ್ ಶೆಟ್ಟಿ ಈ ಚಿತ್ರದಲ್ಲಿಯೂ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ. ಆರೋಹಿತಾ ಹಾಗೂ ರಿಶಿಕಾ ರಾಜ್ ನಾಯಕಿಯರಾಗಿ ಅಭಿನಯಿಸಿದ್ದಾರೆ. ಬಲ ರಾಜವಾಡಿ, ಪ್ರತಾಪ್ ನನಸು, ಆದಿ ಕೇಶವರೆಡ್ಡಿ, ಭೀಷ್ಮಾ ರಾಮಯ್ಯ, ವಿಜಯರಾಜ್, ಪ್ರಸಾದ್, ಅಂಬು, ನಟರಾಜ್ ಬೆಳ್ಳಿದೀಪ, ವಿಶಾಲ್ ಪಾಟೀಲ್ ಜಲಂಧರನ ತಾರಾಬಳಗದಲ್ಲಿದ್ದಾರೆ. ಸ್ಟೆಪ್ ಆಫ್ ಲೋಕಿ ಈ ಸ್ಟೋರಿಯನ್ನು ಬರೆದಿದ್ದು, ವಿಷ್ಣು ವಿ ಪ್ರಸನ್ನ ಚಿತ್ರವನ್ನು ನಿರ್ದೇಶಿಸಿದ್ದಾರೆ. ಮದನ್ ನಿರ್ಮಾಣದ ಸಾರಥ್ಯ ವಹಿಸಿಕೊಂಡಿ ದ್ದಾರೆ. ಸರಿನ್ ರವೀಂದ್ರನ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ನೀರಿನ ಬಗ್ಗೆ ನಮ್ಮ ಅಜ್ಜಿ ಹೇಳಿತ್ತಿದ್ದ ಕಥೆಯೇ, ನಾನು ಈ ಚಿತ್ರದ ಕಥೆ ಬರೆಯಲು ಸ್ಫೂರ್ತಿ. ಈ ಕಥೆಯನ್ನು ನಾನು ಈ ಸ್ಟೋರಿಯನ್ನು ಪ್ರಮೋದ್ ಶೆಟ್ಟಿ ಅವರಿಗೆ ಹೇಳಿದ್ದೆ. ಪ್ರಮೋದ್ ಅವರು ನಟಿಸಲು ತಕ್ಷಣ ಒಪ್ಪಿಕೊಂಡರು. ಮದನ್ ಚಿತ್ರ ನಿರ್ಮಾಣಕ್ಕೆ ಸಮ್ಮತಿಸಿದರು. ನಾನು ಕೂಡ ಈ ಚಿತ್ರದಲ್ಲಿ ಅಭಿನಯಿಸಿದ್ದೇನೆ. ಎಲ್ಲರ ಸಹಕಾರದಿಂದ ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದು ಸ್ಟೆಪ್ ಆಫ್ ಲೋಕಿ ತಿಳಿಸಿದರು.

> ನಾನು ಇದರಲ್ಲೂ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದು, ಗಂಭೀರವಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಇದರಲ್ಲಿ ನಾನೊಬ್ಬನೇ ಹೀರೋ ಅಲ್ಲ. ಕಥೆ ಹಾಗೂ ಅಭಿನಯಿಸಿರುವ ಕಲಾವಿದರೆಲ್ಲ ನಾಯಕರೆ. ಕನಕಪುರ ಭಾಗದ ಜಾನಪದ ಕಲೆಯನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಈಗ ಬಿಡುಗಡೆಯಾಗಿರುವ ಹಾಡಿನಲ್ಲಿ ಚಿತ್ರದ ಕಥೆ ಹೇಳುವ ಪ್ರಯತ್ನ ಮಾಡಲಾಗಿದೆ. ಮನ್ವರ್ಷಿ ನವಲಗುಂದ ಅವರು ಬರೆದಿರುವ ಸಾಹಿತ್ಯ ಮನ ಮುಟ್ಟುವಂತಿದೆ.
>
> -ಪ್ರಮೋದ್ ಶೆಟ್ಟಿ ನಟ

> ಜೀವನ ಎಲ್ಲರಿಗೂ ಅಮೂಲ್ಯ, ಸಾವು ಹೇಗಾದರೂ ಬರಬಹುದು. ಅದರಲ್ಲೂ ಜಲದ ಹತ್ತಿರ ಹೋದಾಗ ಹುಷಾರಾಗಿರಬೇಕು. ಅದು ಯಾಕೆ ಎಂಬುದೇ ಚಿತ್ರದ ಕಥೆ. ಜೀವನದ ಬಗ್ಗೆ ಜಾಗೃತಿ ಮೂಡಿಸುವ ಸಣ್ಣ ಪ್ರಯತ್ನವನ್ನು ಚಿತ್ರ ಮೂಲಕ ಮಾಡಿದ್ದೇವೆ. ನಮ್ಮ ಚಿತ್ರದ ಕಥೆ, ಜಲದೊಳಗಿನ ಕಥೆ. ಅಪರೂಪದ ಕಥೆಯ ಈ ಸಿನಿಮಾ ನಿರ್ದೇಶಿಸಿರುವ ಸಂತಸ ತಂದಿದೆ. ನವೆಂಬರ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಸಿದ್ದತೆ ನಡೆಯುತ್ತಿದೆ.
>
> -ವಿಷ್ಣು.ವಿ.ಪ್ರಸನ್ನ ನಿರ್ದೇಶಕ

ಶೂಟಿಂಗ್ ಮುಗಿಸಿದ ಮೆಜೆಸ್ಟಿಕ್ 2

ಮೆಜೆಸ್ಟಿಕ್‌ನಲ್ಲಿಯೇ ಬೆಳೆದ ಯುವಕನೊಬ್ಬನ ಕಥೆಯನ್ನು ಹೊತ್ತು ಮೆಜೆಸ್ಟಿಕ್ 2 ತೆರೆಗೆ ಬರುತ್ತಿದೆ. ಈ ಹಿಂದೆಯೇ ಸೆಟ್ಟೇರಿದ್ದ ಈ ಚಿತ್ರದ ಚಿತ್ರೀಕರಣ ಯಶಸ್ವಿಯಾಗಿ ಪೂರ್ಣಗೊಂಡಿದೆ. ಚಿತ್ರತಂಡ ಮೋಷನ್ ಪೋಸ್ಟರ್ ರಿಲೀಸ್ ಆಗಿದ್ದು, ಗಮನಸೆಳೆಯುತ್ತಿದೆ. ಈಗಿನ ಮೆಜೆಸ್ಟಿಕ್ ಏರಿಯಾ ಹೇಗಿದೆ, ಅಲ್ಲಿ ನಡೆಯುವ ದಂಧೆಗಳು, ಅಕ್ರಮ ಚಟುವಟಿಕೆಗಳು ಅದರ ಜತೆಗೆ ಅಲ್ಲಿನ ರೌಡಿಸಂ ಹೇಗೆ ನಡೆಯುತ್ತದೆ ಎಂಬುದನ್ನು ಮೆಜೆಸ್ಟಿಕ್-2 ಚಿತ್ರದಲ್ಲಿ ಹೇಳಲಾಗುತ್ತಿದೆ. ರೌಡಿಸಂ ಜತೆಗೆ ಆ್ಯಕ್ಷನ್ ಅಂಶಗಳು ಚಿತ್ರದಲ್ಲಿ ಬೆರೆತಿವೆ. ಭರತ್ ನಾಯಕನಾಗಿ ನಟಿಸಿದ್ದು, ಸಂಹಿತಾ ವಿನ್ಯಾ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದಲ್ಲಿ ಹಿರಿಯ ನಟಿ ಶ್ರುತಿ, ನಾಯಕನ ತಾಯಿಯ ಪಾತ್ರ ನಿರ್ವಹಿಸಿದ್ದಾರೆ. ನಿರ್ದೇಶಕ ರಾಮು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಅಮ್ಮಾ ಎಂಟರ್‌ಪ್ರೈಸಸ್ ಬ್ಯಾನರ್‌ನಲ್ಲಿ ಹೆಚ್.ಆನಂದಪ್ಪ ಈ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ವಿನು ಮನಸು ಸಂಗೀತ ನಿರ್ದೇಶನ, ವೀನಸ್ ಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ರಾಮೋಹಳ್ಳಿ, ಹೆಚ್.ಎಂ.ಟಿ. ಮಾಕಳಿ ಬಳಿಯ ಸಕ್ರೆ, ಅಡ್ಡ, ಆರ್.ಟಿ.ನಗರದ ನಿಸರ್ಗ ಹೌಸ್ ಸೇರಿದಂತೆ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಮಾರ್ಚ್ 31 ನಮ್ಮ ಚಿತ್ರದ ಶೂಟಿಂಗ್ ಆರಂಭವಾಯಿತು. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ, ಚಿತ್ರದುರ್ಗದಲ್ಲಿ ಹಾಡನ್ನು ಚಿತ್ರೀಕರಿಸಿಕೊಂಡಿ ದ್ದೇವೆ. ಅಂದುಕೊಂಡಂತೆಯೇ ಶೂಟಿಂಗ್ ಮುಗಿಸಿದ್ದೇವೆ ಎಂದು ನಿರ್ಮಾಪಕ ಹೆಚ್.ಆನಂದಪ್ಪ ಹೇಳಿದರು.

> ಸತತವಾಗಿ ನೂರ ಇಪ್ಪತ್ತಾರು ದಿನಗಳ ಶೂಟಿಂಗ್ ಮಾಡಿದ್ದೇವೆ. ನಿರ್ಮಾಪಕರು ಕೇಳಿದನ್ನೆಲ್ಲ ಒದಗಿಸಿಕೊಟ್ಟಿದ್ದಾರೆ. ಮಾಲಾಶ್ರೀ ಅಭಿನಯದ ಹೀರೋ ಇಂಟ್ರಡಕ್ಷನ್ ಸಾಂಗನ್ನು ಆರ್.ಎಸ್.ಗೌಡ ಸ್ಟುಡಿಯೋದಲ್ಲಿ ಚಿತ್ರೀಕರಿಸಲಾಗಿದೆ. ಈಗ ಡಬ್ಬಿಂಗ್ ಆರಂಭಿಸಬೇಕಿದೆ. ಡಿಸೆಂಬರ್ 26 ರಂದು ಚಿತ್ರವನ್ನು ರಾಜ್ಯಾದ್ಯಂತ ರಿಲೀಸ್ ಮಾಡಬೇಕೆಂಬ ಯೋಜನೆ ಇದೆ.
>
> -ರಾಮು ನಿರ್ದೇಶಕ

> ಇದು ಪ್ರಸ್ತುತ ನಡೆಯುತ್ತಿರುವ ಮೆಜೆಸ್ಟಿಕ್ ಕಥೆ. ಮೆಜೆಸ್ಟಿಕ್‌ನಲ್ಲೇ ಹುಟ್ಟಿಬೆಳೆದ ಹುಡುಗನ ಕಥೆಯಾಗಿದ್ದು, ನನ್ನ ಪಾತ್ರ ಎರಡು ಶೇಡ್‌ನಲ್ಲಿ ಸಾಗುತ್ತದೆ.ಬೆಂಗಳೂರಿನಲ್ಲಿ ಏನೇನೆಲ್ಲ ನಡೆಯುತ್ತಿದೆ ಎಂಬುದನ್ನು ತೋರಿಸಿದ್ದೇವೆ. ನಾವೆಲ್ಲ ತುಂಬಾ ಎಫರ್ಟ್ ಹಾಕಿ ಸಿನಿಮಾ ಮಾಡಿದ್ದೇವೆ. ಚಿತ್ರದಲ್ಲಿ ಆರು ಸಾಹಸ ಸನ್ನಿವೇಶಗಳಿದ್ದ ಅದ್ಭುತವಾಗಿ ಮೂಡಿಬಂದಿವೆ.
>
> -ಭರತ್ ನಟ